ಉದಯವಾಣಿ

ಜನಮನದ ಜೀವನಾಡಿ



ಸಕ್ಕರೆ ನಾಡಿನ

ಅಕ್ಷರ ಜಾತ್ರೆ



೨೦ , ೨೧, ೨೨ ಡಿಸೆಂಬರ್ ೨೦೨೪

ಗಂಡು ಮೆಟ್ಟಿದ ನಾಡು, ಸಹೃದಯರ ಬೀಡು, ಸಕ್ಕರೆ ನಾಡು ಮಂಡ್ಯದಲ್ಲಿ ಡಿಸೆಂಬರ್ ೨೦ರಿಂದ ೨೨ರವರೆಗೆ ಕನ್ನಡ ಸಾಹಿತ್ಯ ಲೋಕವೇ ಅನಾವರಣಗೊಳ್ಳಲಿದೆ. ಕನ್ನಡವೆಂದರೆ ಸದಾ ಕೈ ಎತ್ತುವ ಪರಿಶುದ್ಧ ಕನ್ನಡಿಗರ ನೆಲೆವೀಡಾಗಿರುವ ಮಂಡ್ಯ, ೮೭ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಆತಿಥ್ಯಕ್ಕೆ ಸಜ್ಜಾಗಿದೆ. ನಾಡು- ನುಡಿಯ ಅಸ್ಮಿತೆಯನ್ನು ಕಾಪಾಡುವ ಈ ಅಕ್ಷರ ಜಾತ್ರೆಗೆ ನೀವೂ ಬನ್ನಿ.. ಕನ್ನಡದ ರಥವನ್ನು ಮೂರು ದಿನ ಜತೆ ಜತೆಯಾಗಿ ಎಳೆಯೋಣ... ನಾಡಿನ ಮನೆ ಮನೆಗೂ ಕನ್ನಡದ ಸಿಹಿ ಹಂಚೋಣ...






|| ಜೈ ಶ್ರೀ ಗುರುದೇವ್ ||



ಆದಿಚುಂಚನಗಿರಿ ವಿಶ್ವವಿದ್ಯಾಲಯ



(2013ರ ಕರ್ನಾಟಕ ಕಾಯಿದೆ ನಂ. 18ರ ಅಡಿಯಲ್ಲಿ ಸ್ಥಾಪನೆ)

ಬಿ.ಜಿ. ನಗರ, ನಾಗಮಂಗಲ ತಾಲ್ಲೂಕು, ಮಂಡ್ಯ ಜಿಲ್ಲೆ, ಕರ್ನಾಟಕ 571448

ಕನಸುಗಳನ್ನು ನನಸಾಗಿಸುವತ್ತ
ಭವಿಷ್ಯವನ್ನು ಖಾತರಿ ಪಡಿಸುವತ್ತ
ಯಶಸ್ಸಿನ ಹಾದಿಯನ್ನು ನಿರ್ಮಿಸುವತ್ತ

ACCREDITED WITH GRADE A+ NAAC

ಇಂಜಿನಿಯರಿಂಗ್

ಬಿ.ಇ.
- ಸಿವಿಲ್
- ಮೆಕ್ಯಾನಿಕಲ್ & ಇಂಜಿನಿಯರಿಂಗ್
- ಕಂಪ್ಯೂಟರ್ ಸೈನ್ಸ್ & ಇಂಜಿನಿಯರಿಂಗ್
- ಮಾಹಿತಿ ವಿಜ್ಞಾನ & ಇಂಜಿನಿಯರಿಂಗ್
- ಎಲೆಕ್ಟ್ರಾನಿಕ್ಸ್ & ಕಮ್ಯೂನಿಕೇಷನ್ ಇಂಜಿನಿಯರಿಂಗ್
- ಆರ್ಟಿಫಿಷಿಯಲ್ ಇಂಟಲಿಜೆನ್ಸ್ & ಮೆಷಿನ್ ಲರ್ನಿಂಗ್

ಎಂ.ಟೆಕ್.
- ಸ್ಟ್ರಕ್ಚರಲ್ ಇಂಜಿನಿಯರಿಂಗ್
- ಕಂಪ್ಯೂಟರ್ ಸೈನ್ಸ್ & ಇಂಜಿನಿಯರಿಂಗ್
- ವಿಎಲ್‌ಎಸ್‌ಐ ಡಿಸೈನ್ & ಎಂಬೆಡ್ಡೆಡ್ ಸಿಸ್ಟಂ
- ಇನ್ಫ್ರಾಸ್ಟ್ರಕ್ಚರ್ ಮ್ಯಾನೇಜ್ಮೆಂಟ್

+91 98459 73725 | +91 98861 08095
bgsit@acu.edu.in

ಮ್ಯಾನೇಜ್ಮೆಂಟ್

ಎಂ.ಬಿ.ಎ.
(ಎಚ್. ಆರ್, ಫೈನಾನ್ಸ್ & ಮಾರ್ಕೆಟಿಂಗ್)

+91 98861 08095
bgsit@acu.edu.in

ಮಾನವಿಕಗಳು ಮತ್ತು ಸಮಾಜ ವಿಜ್ಞಾನ

ಬಿ.ಎಡ್.,

+91 99014 11169
bgsce@acu.edu.in

ಬಿ.ಕಾಂ. | ಎಂ.ಕಾಂ. | ಬಿ.ಸಿ.ಎ. | ಬಿ.ಬಿ.ಎ.

+91 98868 82312
bgsfgc@acu.edu.in

ನ್ಯಾಚುರಲ್ ಸೈನ್ಸ್

ಬಿಎಸ್ಸಿ / ಬಿಎಸ್ಸಿ (ಆನರ್ಸ್)
- ಕಂಪ್ಯೂಟರ್ ವಿಜ್ಞಾನ
- ಭೌತಶಾಸ್ತ್ರ ಮತ್ತು ರಸಾಯನ ಶಾಸ್ತ್ರ
- ಭೌತಶಾಸ್ತ್ರ ಮತ್ತು ಗಣಿತ
- ರಸಾಯನ ಶಾಸ್ತ್ರ ಮತ್ತು ಜೀವ ರಸಾಯನಶಾಸ್ತ್ರ

ಎಂ.ಎಸ್ಸಿ
- ಭೌತಶಾಸ್ತ್ರ
- ರಸಾಯನಶಾಸ್ತ್ರ
- ಜೀವರಸಾಯನಶಾಸ್ತ್ರ
- ಜೈವಿಕ ತಂತ್ರಜ್ಞಾನ
- ಸೂಕ್ಷ್ಮಜೀವಶಾಸ್ತ್ರ (ಮೈಕ್ರೋಬಯಾಲಜಿ

+91 97408 32519
asns@acu.edu.in

ವೈದ್ಯಕೀಯ

ಎಂ.ಬಿ.ಬಿ.ಎಸ್. | ಎಂ.ಡಿ. | ಎಂ. ಎಸ್.

ಎಂ.ಪಿ.ಎಚ್ (ಮಾಸ್ಟರ್ ಆಫ್ ಪಬ್ಲಿಕ್ ಹೆಲ್ತ್)

ಎಂ.ಎಸ್ಸಿ (ವೈದ್ಯಕೀಯ)
ಬಯೋಕೆಮಿಸ್ಟ್ರಿ ಮತ್ತು ಮೈಕ್ರೋ ಬಯಾಲಜಿ

ಎಂ.ಎಚ್.ಎ.
(ಮಾಸ್ಟರ್ ಆಫ್ ಹಾಸ್ಪಿಟಲ್ ಅಡ್ಮಿನಿಸ್ಟ್ರೇಷನ್)

+91 98455 67500 aims@acu.edu.in

ಫಾರ್ಮಸಿ

ಡಿ.ಫಾರ್ಮ | ಬಿ. ಫಾರ್ಮ | ಫಾರ್ಮ ಡಿ | ಎಂ. ಫಾರ್ಮ
- ಫಾರ್ಮಸ್ಯುಟಿಕಲ್ ಕೆಮಿಸ್ಟ್ರಿ
- ಫಾರ್ಮಸಿ ಪ್ರಾಕ್ಟೀಸ್
- ಫಾರ್ಮಸ್ಯುಟಿಕ್ಸ್
- ಫಾರ್ಮಸ್ಯುಟಿಕಲ್ ಅನಾಲಿಸಿಸ್
- ಫಾರ್ಮಕಾಲಜಿ
- ಫಾರ್ಮ ರೆಗ್ಯುಲೆಟರಿ ಅಫೇರ್ಸ್
- ಫಾರ್ಮಕೋಗ್ನೋಸಿ

+91 99721 33455 saccp@acu.edu.in

ನರ್ಸಿಂಗ್

ಜಿ.ಎನ್.ಎಂ. | ಬಿ.ಎಸ್ಸಿ | ಎಂ.ಎಸ್ಸಿ

+91 72044 71142
acn@acu.edu.in
+91 86607 24732
bgsins@acu.edu.in

ಅನ್ವಯಿಕ ಆರೋಗ್ಯ ವಿಜ್ಞಾನ

ಬಿ.ಎಸ್ಸಿ.
- ಮೆಡಿಕಲ್ ಲ್ಯಾಬೋರೇಟೊರಿ ಟೆಕ್ನಾಲಜಿ
- ಮೆಡಿಕಲ್ ಇಮೇಜಿಂಗ್ ಟೆಕ್ನಾಲಜಿ
- ರೀನಲ್ ಡಯಾಲಿಸಿಸ್ ಟೆಕ್ನಾಲಜಿ
- ಅನಸ್ತೇಸಿಯಾ & ಆಪರೇಷನ್ ಥಿಯೇಟರ್ ಟೆಕ್ನಾಲಜಿ
- ಕ್ಲಿನಿಕಲ್ ಸೈಕಾಲಜಿ
- ಆಪ್ಟೋಮೆಟ್ರಿ

ಡಿಪ್ಲೊಮಾ ಕೋರ್ಸುಗಳು
- ಮೆಡಿಕಲ್ ಲ್ಯಾಬೊರೇಟೋರಿ ಟೆಕ್ನಾಲಜಿ
- ಮೆಡಿಕಲ್ ಇಮೇಜಿಂಗ್ ಟೆಕ್ನಾಲಜಿ
- ಹೆಲ್ತ್ ಇನ್ಸ್ಪೆಕ್ಟರ್
- ಡಯಾಲಿಸಿಸ್ ಟೆಕ್ನಾಲಜಿ
- ಆಪ್ತಾಲ್ಮಿಕ್ ಟೆಕ್ನಾಲಜಿ
- ಮೆಡಿಕಲ್ ರೆಕಾರ್ಡ್ಸ್ ಟೆಕ್ನಾಲಜಿ
- ಆಪರೇಷನ್ ಥಿಯೇಟರ್ ಟೆಕ್ನಾಲಜಿ

ಬಿ.ಪಿ.ಟಿ.
(ಬ್ಯಾಚಲರ್ ಆಫ್ ಫಿಸಿಯೋಥೆರಪಿ)

+91 98806 35609
+91 89515 20729
acn@acu.edu.in

ಪಿಎಚ್.ಡಿ. ಕಾರ್ಯಕ್ರಮಗಳು ಎಲ್ಲಾ ಫ್ಯಾಕಲ್ಟಿಗಳಲ್ಲಿ

- ವೈದ್ಯಕೀಯ ವಿಜ್ಞಾನ
- ಎಂಜಿನಿಯರಿಂಗ್
- ನರ್ಸಿಂಗ್
- ಫಾರ್ಮಸಿ
- ವಾಣಿಜ್ಯ
- ನಿರ್ವಹಣೆ
- ಶಿಕ್ಷಣ
- ನೈಸರ್ಗಿಕ ವಿಜ್ಞಾನ



"ಕನ್ನಡಿಗಳನ್ನು ಕಿಟಕಿಗಳನ್ನಾಗಿ ಪರಿವರ್ತಿಸುವುದು ಎಸಿಯುನ ಮೂಲ ಶೈಕ್ಷಣಿಕ ಆಶಯವಾಗಿದೆ"

ಸಮನ್ವಯ ಸಾಧನೆ

ನಾವು 6287ಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಶಿಕ್ಷಣ ನೀಡುತ್ತಿದ್ದು ಅವರ ಪೈಕಿ ಶೇ. 80ರಷ್ಟು ವಿದ್ಯಾರ್ಥಿಗಳು ಹಿಂದುಳಿದ ವರ್ಗಗಳಿಗೆ ಸೇರಿದವರಾಗಿದ್ದಾರೆ ಮತ್ತು ಶೇ. 58ರಷ್ಟು ವಿದ್ಯಾರ್ಥಿಗಳು ಮಹಿಳೆಯರಾಗಿದ್ದಾರೆ. ಶೈಕ್ಷಣಿಕ ಸೌಲಭ್ಯ ಕಲ್ಪಿಸುವ ಉದ್ದೇಶದಿಂದ ನಾವು ವಾರ್ಷಿಕ 2 ಕೋಟಿ ರೂಪಾಯಿಗಳಷ್ಟು ವಿದ್ಯಾರ್ಥಿವೇತನ ನೀಡುತ್ತಿದ್ದೇವೆ.

ಉತ್ಕೃಷ್ಟ ಸಂಶೋಧನಾ ಉಪಕ್ರಮ

ಎಸಿಯು – ಸೆಂಟರ್ ಫಾರ್ ರಿಸರ್ಚ್ ಅಂಡ್ ಇನ್ನೋವೇಷನ್, ಆದಿಚುಂಚನಗಿರಿ ಇನ್ಸ್ಟಿಟ್ಯೂಟ್ ಫಾರ್ ಮಾಲಿಕ್ಯುಲರ್ ಮೆಡಿಸಿನ್ ನಂತಹ ಸಂಶೋಧನೆಗೇ ಮೀಸಲಾದ ಕೇಂದ್ರದೊAದಿಗೆ ಕೈಗೂಡಿಸಿ.

ಉದ್ಯಮದಲ್ಲಿ ತೊಡಗಲೆಂದೇ ಸಜ್ಜುಗೊಂಡ ಪದವೀಧರರು

ನಮ್ಮ ಶೇ. 92ರಷ್ಟು ವಿದ್ಯಾರ್ಥಿಗಳು ತಮ್ಮ ತಮ್ಮ ಕ್ಷೇತ್ರದ ಅತ್ಯುತ್ತಮ ಸಂಸ್ಥೆಗಳಲ್ಲಿ ಉದ್ಯೋಗ ಪಡೆಯುತ್ತಿದ್ದಾರೆ.

ಅನುಪಮ ವ್ಯಾಪ್ತಿ ಮತ್ತು ಗಹನತೆ

60ಕ್ಕೂ ಹೆಚ್ಚು ಕಾರ್ಯಕ್ರಮಗಳು, 1382ಕ್ಕೂ ಹೆಚ್ಚು ಕೋರ್ಸುಗಳು, 850ಕ್ಕೂ ಹೆಚ್ಚು ಅಂತಃಶಿಸ್ತೀಯ ಆಯ್ಕೆಗಳು. 136ಕ್ಕೂ ಹೆಚ್ಚು ಮೌಲ್ಯವರ್ಧಿತ ಕೋರ್ಸುಗಳ ಮೂಲಕ ಅಮೂಲ್ಯವಾದ ಕೌಶಲ್ಯವನ್ನು ಗಳಿಸಿರಿ.

ಉದ್ಯಮಶೀಲತೆ

ನಾವು ಭವಿಷ್ಯದ ನಾಯಕರನ್ನು ಸೃಷ್ಟಿಸುತ್ತಿದ್ದೇವೆ. ಆದಿಚುಂಚನಗಿರಿ ಸೆಂಟರ್ ಫಾರ್ ಆಂತ್ರಪ್ರೆನಿಯರ್ (ಎಸಿಇ)ನಲ್ಲಿ ವಾಣಿಜ್ಯ ಜಗತ್ತಿನಲ್ಲಿ ಗೆಲುವನ್ನು ಸಾಧಿಸಬಲ್ಲ ಕೌಶಲ್ಯವನ್ನು ನೀಡಲಾಗುತ್ತಿದೆ.

ಜ್ಞಾನಮಾರ್ಗದತ್ತ

ಯೋಗ, ಧ್ಯಾನ ಸಮುದಾಯ ಸೇವಾ ಚಟುವಟಿಕೆಗಳ ಮೂಲಕ ಆಧ್ಯಾತ್ಮಿಕ ಶ್ರೇಯಸ್ಸಿಗೂ ಅವಕಾಶಗಳನ್ನು ಕಲ್ಪಿಸಲಾಗುತ್ತಿದೆ.

ಪ್ರಶಸ್ತಿ ವಿಜೇತ ಸಿಬ್ಬಂದಿ


ಅತ್ಯುತ್ತಮ ಶಿಕ್ಷಕರ ಮಾರ್ಗದರ್ಶನದಲ್ಲಿ ಕಲಿಯಿರಿ. ನಮ್ಮ 110ಕ್ಕೂ ಹೆಚ್ಚು ಬೋಧನಾ ಸಿಬ್ಬಂದಿ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಪ್ರಶಸ್ತಿಗಳನ್ನು ಗಳಿಸಿದ್ದಾರೆ. 54ಕ್ಕೂ ಹೆಚ್ಚು ಸಿಬ್ಬಂದಿ ಪುಸ್ತಕಗಳನ್ನು / ಲೇಖನಗಳನ್ನು ಬರೆದಿದ್ದಾರೆ.

ಸಾಮಾಜಿಕ ಬದ್ಧತೆ

ಸಮಾಜದಿಂದ ಪಡೆದುದನ್ನು ಸಮಾಜಕ್ಕೆ ನೀಡಬೇಕೆಂಬ ಮೌಲ್ಯದಲ್ಲಿ ನಾವು ನಂಬಿಕೆ ಇರಿಸಿಕೊಂಡಿದ್ದೇವೆ. ಶೈಕ್ಷಣಿಕವಾಗಿ ಬೆಳೆಸುವ ಸಲುವಾಗಿ ಮತ್ತು ಸಮುದಾಯವನ್ನು ಸಬಲಗೊಳಿಸುವ ಉದ್ದೇಶದಿಂದ ನಾವು 11 ಸರ್ಕಾರೀ ಶಾಲೆಗಳನ್ನು ದತ್ತು ಪಡೆದಿದ್ದೇವೆ

Accreditation and Recognition

info@acu.edu.in | registrar@acu.edu.in www.acu.edu.in



ಮಧುರ ಮಂಡ್ಯದಲ್ಲಿ ನುಡಿಜಾತ್ರೆಯ ಸಡಗರ

ಆರೋಗ್ಯಕರ ಚರ್ಚೆ– ಸಂವಾದ ನಡೆಯಲಿ
ಯುವ ಬರಹಗಾರರಿಗೆ ವೇದಿಕೆ ಸಿಗಲಿ
ನುಡಿಜಾತ್ರೆಯೊಂದು ಹಬ್ಬವಾಗಲಿ...ಕಗ್ಗವಾಗಲಿ...

❖ **ಎ.ಆರ್.ಮಣಿಕಾಂತ್**

ಸಾಹಿತ್ಯದ ವಿವಿಧ ಪ್ರಕಾರಗಳಾದ ಕಥೆ, ಕವಿತೆ, ಕಾದಂಬರಿ, ವಿಮರ್ಶೆ, ಸಂಶೋಧನೆ, ನಾಟಕ, ರಂಗಭೂಮಿ ಇತ್ಯಾದಿಗಳ ಕುರಿತು ಆಯಾ ಕ್ಷೇತ್ರದ ಪರಿಣಿತರು ಮತ್ತು ಆಸಕ್ತರ ಸಮ್ಮುಖದಲ್ಲಿ ಆರೋಗ್ಯಕರ ಚರ್ಚೆ ನಡೆಯಲಿ ಎಂಬುದೇ ಸಾಹಿತ್ಯ ಸಮ್ಮೇಳನದ ಪ್ರಮುಖ ಆಶಯ. ಜೊತೆಗೆ ನಾಡು ನುಡಿಯ ಆಸ್ಮಿತೆಯನ್ನು



ಕಾಪಾಡಲು, ಕನ್ನಡ ಭಾಷೆ, ಪರಂಪರೆ, ಸಂಸ್ಕೃತಿ, ಶಿಕ್ಷಣ ಮತ್ತು ಸಾಹಿತ್ಯದ ಸೊಬಗನ್ನು ಎಲ್ಲರಿಗೂ ತಲುಪಿಸಲು ಮತ್ತು ಭಾಷಾಪ್ರೇಮದ ಎಲ್ಲಾ ಮನೆ–ಮನವನ್ನೂ ತಟ್ಟುವಂತೆ ಮಾಡಲು ಸರ್ಕಾರ, ಸಂಘಸಂಸ್ಥೆ ಮತ್ತು ಸಂಬಂಧಿಸಿದ ಇಲಾಖೆಗಳು ಮಾಡಬೇಕಿರುವ ಕೆಲಸಗಳ ಕುರಿತು ನಿರ್ಣಯ ಮಂಡನೆ ಆಗುವುದು ಕೂಡ ಸಾಹಿತ್ಯ ಸಮ್ಮೇಳನದಲ್ಲೇ.

ಸಾಹಿತ್ಯ ಸಮ್ಮೇಳನ ಒಂದು ಜಾತ್ರೆಯಂತೆ, ಉತ್ಸವದಂತೆ, ಹಬ್ಬದಂತೆ ನಡೆಯಬೇಕು. ಸಾಹಿತ್ಯಕ್ಕೆ ಸಂಬಂಧಿಸಿದ ಹಲವು ವಿಷಯಗಳ ಕುರಿತು ಅಲ್ಲಿ ಮುಕ್ತ ಸಂವಾದ– ಚರ್ಚೆ ನಡೆಯಬೇಕು. ಹಿರಿಯ ಲೇಖಕರ ಅನುಭವದ–ಅನುಭಾವದ ಮಾತುಗಳು ಎಲ್ಲರನ್ನೂ ತಲುಪಬೇಕು. ಹೊಸ ತಲೆಮಾರಿನ ಬರಹಗಾರರಿಗೆ ಸಮ್ಮೇಳನದ ವಿವಿಧ ವೇದಿಕೆಗಳಲ್ಲಿ ಪಾಲ್ಗೊಳ್ಳಲು ಅವಕಾಶ ಸಿಗಬೇಕು. ಹೊಸ– ಹಳೆಯ ಪುಸ್ತಕಗಳನ್ನು ಖರೀದಿಸಲು, ಲೇಖಕ– ಓದುಗರು ಪರಸ್ಪರ ಭೇಟಿಯಾಗಿ ಸಂಭ್ರಮಿಸಲು ಸಾಹಿತ್ಯ ಸಮ್ಮೇಳನವು ಒಂದು ವೇದಿಕೆ ಆಗಬೇಕು.

ಮೂರು ದಶಕಗಳ ನಂತರ ಸಮ್ಮೇಳನ

'ಸಕ್ಕರೆಯ ನಾಡು' ಎಂದೇ ಹೆಸರಾಗಿರುವ ಮಂಡ್ಯದಲ್ಲಿ ಈ ಬಾರಿಯ ಸಮ್ಮೇಳನ ನಡೆಯುತ್ತಿದೆ. 1974 ರಲ್ಲಿ ಮಂಡ್ಯದಲ್ಲಿ ಮೊದಲ ಬಾರಿಗೆ ಸಾಹಿತ್ಯ ಸಮ್ಮೇಳನ ನಡೆದಿತ್ತು. ಆಗ ಜಯದೇವಿತಾಯಿ ಲಿಗಾಡೆ ಅಧ್ಯಕ್ಷತೆ ವಹಿಸಿದ್ದರು. ನಂತರ 1994 ರಲ್ಲಿ, ಸಾಹಿತಿ ಚದುರಂಗ ಅವರ ಅಧ್ಯಕ್ಷತೆಯಲ್ಲಿ ಎರಡನೇ ಬಾರಿಗೆ ಸಮ್ಮೇಳನ ನಡೆಯಿತು. 30 ವರ್ಷಗಳ ನಂತರ, ಮುತ್ಸದ್ದಿ ಗೊ ರು ಚನ್ನಬಸಪ್ಪ ಅವರ ಅಧ್ಯಕ್ಷತೆಯಲ್ಲಿ ಈ ಬಾರಿಯ ಸಮ್ಮೇಳನ ನಡೆಯುತ್ತಿದೆ. ಒಂದು ವ್ಯತ್ಯಾಸವೆಂದರೆ, ಈ ಹಿಂದೆ ಮಂಡ್ಯ ನಗರದ ಹೃದಯಭಾಗದಲ್ಲಿರುವ ವಿಶ್ವೇಶ್ವರಯ್ಯ ಕ್ರೀಡಾಂಗಣದಲ್ಲಿ ಸಮ್ಮೇಳನ ನಡೆದಿತ್ತು. ಈ ಬಾರಿ ಮಂಡ್ಯ ನಗರದಿಂದ ಆಚೆ, ಅಂದರೆ 6 ಕಿ.ಮೀ. ದೂರದ ಹೊರವಲಯದಲ್ಲಿ ಸಾಹಿತ್ಯ ಸಮ್ಮೇಳನ ನಡೆಯುತ್ತಿದೆ. ಮೂರು ದಶಕಗಳ ನಂತರ ತಮ್ಮ ಊರಿನಲ್ಲಿ ನಡೆಯಲಿರುವ ಕನ್ನಡ ಹಬ್ಬ–ನುಡಿಜಾತ್ರೆಯನ್ನು ಹಬ್ಬದಂತೆ ಆಚರಿಸಲು, ಆ ನೆಪದಲ್ಲಿ ಸಂಭ್ರಮಿಸಲು ಮಂಡ್ಯ ಜಿಲ್ಲೆಯ ಜನ ಸರ್ವಸನ್ನದ್ಧರಾಗಿ ನಿಂತಿದ್ದಾರೆ.◆



ಮಂಡ್ಯದಲ್ಲಿ ನಡೆಯುತ್ತಿರುವ 87 ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಸ್ವಾಗತ...



ಶ್ರೀ ಲಕ್ಷ್ಮೀನರಸಿಂಹ ಕ್ಷೇತ್ರ

ಈ ದೇವಾಲಯದ ವಿಶಿಷ್ಟತೆ



32 ಅಕ್ಷರಗಳಿಂದ ಕೂಡಿದ ನರಸಿಂಹ ಮಹಾಮಂತ್ರದಿಂದ ಆಗಮರೀತ್ಯ ಯಂತ್ರ, ಮಂತ್ರಶಕ್ತಿಯಿಂದ ಅಭಿಮಂತ್ರಿತಗೊಂಡು ಅನುಷ್ಟುಪ್ ಮಂತ್ರವನ್ನು ಪ್ರತಿನಿಧಿಸುವ ಸುಂದರವಾದ 32 ಶಿಲಾಕಂಭಗಳಿಂದ ಕೂಡಿದ ಮಹಾಮಂಟಪವು ಭಕ್ತಾದಿಗಳನ್ನು ಆಕರ್ಷಿಸುತ್ತಿದೆ.

32 ಶಿಲಾಕಂಭಗಳಲ್ಲಿ ಶ್ರೀ ನರಸಿಂಹ ಸ್ವಾಮಿಯ ನಾನಾ ಶ್ಲೋಕಗಳಲ್ಲಿ ವರ್ಣಿಸಿದಂತೆ ವಿವಿಧ ಭಂಗಿಯ 50 ಪಂಚಲೋಹದ ವಿಗ್ರಹಗಳು ಹಾಗೂ 24 ಶಿಲಾವಿಗ್ರಹಗಳು ಒಟ್ಟು 74 ನರಸಿಂಹ ಮೂರ್ತಿಯ ಸುಂದರವಾದ ವಿಗ್ರಹಗಳು ಮಹಾಮಂಟಪವನ್ನು ಅತೀ ವೈಶಿಷ್ಟ್ಯ ಪೂರ್ಣವಾಗಿಸಿದೆ.

ಶ್ರೀ ನರಸಿಂಹ ಹಾಗೂ ಶ್ರೀ ಸುದರ್ಶನ ದೇವರ ಬೃಹದಾಕಾರದ ಲೋಹದ ವಿಗ್ರಹಗಳು, ಶ್ರೀ ಮಹಾವಿಷ್ಣುವಿನ 7 ಬೃಹದಾಕಾರದ ವಿವಿಧ ಅವತಾರಗಳ ಶಿಲಾವಿಗ್ರಹಗಳನ್ನು ಮಹಾಮಂಟಪವು ಒಳಗೊಂಡಿದೆ.

ಭಾರತ ದೇಶದಲ್ಲೇ ಅನನ್ಯವೂ ಅನುಪಮವೂ ಎಂಬಂತೆ ದೇವಾಲಯದ ಆವರಣದ ಕೋಷ್ಟಗಳಲ್ಲಿ ಆಕರ್ಷಣೀಯವಾದ ನಾನಾ ಬಣ್ಣಗಳಿಂದ ಆವೃತವಾದ ದೇಶದ ನಾನಾ ಕ್ಷೇತ್ರಗಳನ್ನು ಪ್ರತಿನಿಧಿಸುವ ಮಹಾವಿಷ್ಣುವಿನ 381 ವಿಧದ ಸ್ಥಾವಿಗ್ರಹಗಳು (ಸಿಮೆಂಟ್) ನೋಡುಗರನ್ನು ಮೂಕವಿಸ್ಮಿತರನ್ನಾಗಿಸುತ್ತದೆ.

ಶ್ರೀ ರಾಮಪಟ್ಟಾಭಿಷೇಕ ಹಾಗೂ ಅಷ್ಟ ಮಹಿಷಿಯರೊಂದಿಗೆ ಶ್ರೀ ಕೃಷ್ಣನ ಶಿಲಾವಿಗ್ರಹಗಳನ್ನು ನಿರ್ಮಿಸಲಾಗಿದೆ.

ಶ್ರೀ ರಾಮಾನುಜಾಚಾರ್ಯರು ಪ್ರಚುರಪಡಿಸಿದ ಶ್ರೀವೈಷ್ಣವ ಗುರು ಪರಂಪರೆಯನ್ನು ಪ್ರದರ್ಶಿಸಲಾಗಿದೆ. ಈ ಕ್ಷೇತ್ರದಲ್ಲಿ ಸರಿಸುಮಾರು 2000 ಕ್ಕಿಂತಲೂ ಅಧಿಕ ಯಾಗದಿಗಳನ್ನು ನೆರವೇರಿಸಲಾಗಿದೆ. ಸಕಲ ಜೀವಿ ಜಂತುಗಳ ಆಯುರಾರೋಗ್ಯ ಐಶ್ವರ್ಯ, ಸುಖಸಂತೋಷ, ಸಸ್ಯಸಮೃದ್ಧಿ, ಜಲಸಮೃದ್ಧಿ ಮತ್ತು ಲೋಕಕಲ್ಯಾಣವನ್ನು, ತಮ್ಮ ಹಾಗೂ ತಮ್ಮ ಪರಿವಾರದ ಉತ್ತರೋತ್ತರ ಅಭಿವೃದ್ಧಿಯನ್ನು ಪ್ರಾರ್ಥಿಸುತ್ತಾ 12 ವರ್ಷಗಳ ಕಾಲ ಅಂದರೆ 13/05/2022 ರಿಂದ 01/ 05/2034 ರ ವರೆಗೂ ದೀರ್ಘಸತ್ರ ಮಹಾಯಾಗವು 4372 ದಿನಗಳು ನರಸಿಂಹನ ಕೃಪಾ ಕಟಾಕ್ಷದಿಂದ ನಡೆಯುತ್ತಿದೆ.



ದೇವಸ್ಥಾನದ ಸಮಯ
ಬೆಳಿಗ್ಗೆ 7-00 ರಿಂದ ಮಧ್ಯಾಹ್ನ 12-30ರವರೆಗೆ
ಸಾಯಂಕಾಲ -5-00 ರಿಂದ 7-30ರ ವರೆಗೆ

ಶ್ರೀ ಲಕ್ಷ್ಮೀನರಸಿಂಹ ಕ್ಷೇತ್ರ

"ದಕ್ಷಿಣನೈ ಮಿಷಾರಣ್ಯ", ಶ್ರೀನಿವಾಸ ಕ್ಷೇತ್ರ ರಸ್ತೆ, ಬೆಳಗೊಳ-571 606
ಶ್ರೀರಂಗಪಟ್ಟಣ ತಾಲ್ಲೂಕು, ಮಂಡ್ಯ ಜಿಲ್ಲೆ, ಕರ್ನಾಟಕ - ದೂರವಾಣಿ: 9343129495 / 97 / 99



❖ ಅರುಣ್ ಜಾವಗಲ್
ಕನ್ನಡ ಪರ ಹೋರಾಟಗಾರ

ನಮ್ ಕನ್ನಡಕ್ಕಾಗಿ ಇಡಬೇಕಾದ ತುರ್ತು ಹೆಜ್ಜೆ

ಕರ್ನಾಟಕದಲ್ಲಿ ಗ್ರಾಹಕರ ಭಾಷಾ ಹಕ್ಕಿನ ರಕ್ಷಣೆ ಅನಿವಾರ್ಯ

ಕನ್ನಡ ನಾಡು ಭಾರತ ಒಕ್ಕೂಟ ಸೇರಿದ ನಂತರದ ದಿನದಲ್ಲಿ ಏಕೀಕರಣ ಹೋರಾಟ ಪ್ರಬಲವಾಗಿ ನಡೆದಿತ್ತು, ಏಕೀಕರಣದ ಹೋರಾಟದ ಮುಂದುವರೆದ ಭಾಗದಂತೆ ಇಂದಿಗೂ ಕನ್ನಡಿಗರು ಕನ್ನಡ-ಕನ್ನಡಿಗ- ಕರ್ನಾಟಕದ ಉಳಿವಿಗಾಗಿ, ಬೆಳವಣಿಗೆಗಾಗಿ ಹೋರಾಟ ನಡೆಸಬೇಕಾದ ಅನಿವಾರ್ಯತೆ ಜೀವಂತವಾಗಿದೆ. ಕಾಲ ಬದಲಾದಂತೆಲ್ಲಾ ಕನ್ನಡ ಕನ್ನಡಿಗರಿಗೆ ಎದುರಾಗುತ್ತಿರುವ ಸವಾಲುಗಳೂ ಬದಲಾಗುತ್ತಲೇ ಇದೆ. ಸಾವಿರಾರು ವರ್ಷಗಳ ಕಾಲ ಬಹಳಷ್ಟು ಸವಾಲುಗಳನ್ನು ಸಮರ್ಥವಾಗಿ ಎದುರಿಸಿದ ಕನ್ನಡಕ್ಕೆ ಇಂದಿನ ಜಾಗತಿಕ ತಂತ್ರಜ್ಞಾನದ ಯುಗ ಸವಾಲಂತೆ ಕಂಡರೂ ತಂತ್ರಜ್ಞಾನ ಭಾಷೆಯ ಬಳಕೆಗೆ ಹೆಚ್ಚಿನ ಅವಕಾಶ ಕಲ್ಪಿಸುವುದರಿಂದ ವರದಾನವಾಗಿದೆ ಎಂದು ಹೇಳಬಹುದು. ಆದರೆ, ಸರಕಾರದ ನೀತಿ ನಿಯಮಗಳು, ತಂತ್ರಜ್ಞಾನ ವರದಾನವೋ ಅಥವಾ ಸವಾಲೋ ಎಂದು ನಿರ್ಧರಿಸುವಲ್ಲಿ ಹೆಚ್ಚಿನ ಪಾತ್ರ ವಹಿಸುತ್ತದೆ.

ಕನ್ನಡಕ್ಕೆ ಎದುರಾಗುವ ಸವಾಲು

ತಾಯಿ ನುಡಿ ಕಲಿಕೆ ವೈಜ್ಞಾನಿಕವಾಗಿ ಪರಿಣಾಮಕಾರಿ ಎನ್ನುವ ಅಂಶ ಜಗತ್ತಿನ ಬಹುತೇಕ ಮುಂದುವರೆದ ದೇಶಗಳು ಒಪ್ಪಿಕೊಂಡಿವೆ. ಬಹುತೇಕ ಮುಂದುವರೆದ ದೇಶಗಳು ಪ್ರಾಥಮಿಕ ಶಿಕ್ಷಣದಿಂದ ಹಿಡಿದು ಉನ್ನತ ಶಿಕ್ಷಣದವರೆಗೆ ಎಲ್ಲಾ ಹಂತದಲ್ಲೂ ತಮ್ಮ ಭಾಷೆಯ ಮಾಧ್ಯಮವನ್ನೇ ಅವಲಂಬಿಸಿ ಈ ಮೂಲಕ ಜಾಗತಿಕ ಯುಗದಲ್ಲಿ ಬಹಳಷ್ಟು ವಿಚಾರದಲ್ಲಿ ಮುಂದುವರೆದಿದೆ. ಆದರೆ, ತಾಯಿ ನುಡಿ ಕಲಿಕೆ ವೈಜ್ಞಾನಿಕ ವಾದುದ್ದಾದರೂ ಕನ್ನಡ ಮಾಧ್ಯಮ ಶಿಕ್ಷಣ/ ಶಾಲೆಗಳು ನಿಧಾನವಾಗಿ ಕಡಿಮೆಯಾಗುತ್ತಿರುವುದು ಮುಂದಿನ ದಿನದಲ್ಲಿ ಕನ್ನಡಕ್ಕೆ ಎದುರಾಗುವ ಬಹುದೊಡ್ಡ ಸವಾಲು.

> ಲೋಕದಲ್ಲಿ ಎಷ್ಟು ಜನರಿದ್ದಾರೋ ಅಷ್ಟು ಅನುಭವಗಳಿವೆ. ಅವುಗಳಲ್ಲಿ ಕೆಲವು ಗ್ರಾಹ್ಯ, ಕೆಲವು ತ್ಯಾಜ್ಯ ಎಂದು ನಿರ್ಧಾರ ಮಾಡುವ ಒರೆಗಲ್ಲು ಯಾವುದು ? ಅವರವರ ಸ್ವಂತ ಅನುಭವವೆ !
>
> ❖ ಜಿ.ಪಿ.ರಾಜರತ್ನಂ

87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ-2024, ಮಂಡ್ಯ

ಸಕ್ಕರೆಯ ನಾಡು, ಅಕ್ಕರೆಯ ಬೀಡು,
ಮಂಡ್ಯದಲ್ಲಿ ನಡೆಯುವ ೮೭ನೇ ಅಖಿಲ ಭಾರತ
ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಆಗಮಿಸುತ್ತಿರುವ ಸಾಹಿತಿಗಳಿಗೆ,
ಸಾಹಿತ್ಯಾಭಿಮಾನಿಗಳಿಗೆ, ಕನ್ನಡಾಭಿಮಾನಿಗಳಿಗೆ ಹಾಗೂ
ಸರ್ವರಿಗೂ ಹಾರ್ದಿಕ ಸುಸ್ವಾಗತ.



ಮಹಾಕಾಳಿ ದೇವಾಲಯ,
ಶ್ರೀರಂಗಪಟ್ಟಣ

ಭಕ್ತರ ಇಷ್ಟಾರ್ಥ ನೆರವೇರಿಸುವ
ಮಹಾಕಾಳಿ ದೇವಸ್ಥಾನ
ಮಹಾಕಾಳಿ ಅಮ್ಮನವರ ದರ್ಶನ
ಮಾತ್ರದಿಂದಲೇ ನಿಮ್ಮ ಎಲ್ಲಾ
ಸಮಸ್ಯೆಗಳು ಪರಿಹಾರವಾಗುತ್ತದೆ.



ಭಕ್ತಾದಿಗಳೇ:
ಮಹಾಕಾಳಿ ಅಮ್ಮನವರು
ನಿಮ್ಮ ಹಾಗೂ ನಿಮ್ಮ
ಕುಟುಂಬದ ಏಳಿಗೆಗಾಗಿ,
ಆಶೀರ್ವದಿಸಿ, ಆಯಸ್ಸು
ಆರೋಗ್ಯವನ್ನು ನೀಡಲಿ
ಎಂದು ಆಶಿಸುತ್ತೇವೆ.

ಶುಭ ಕೋರುವವರು:

ಶ್ರೀ ಗುರುದೇವ ರವರು
ಸಂಸ್ಥಾಪಕರು, ಮಹಾಕಾಳಿ ದೇವಾಲಯ
ಟಿ.ಎಂ. ಹೊಸೂರು ಗೇಟ್,
ಬೆಂಗಳೂರು-ಮೈಸೂರು ಹೆದ್ದಾರಿ, ಶ್ರೀರಂಗಪಟ್ಟಣ
ಮೊ: 7353646321

ಕನ್ನಡದ ಉಳಿವು, ಬೆಳವಣಿಗೆಗಾಗಿ ಇಡಬೇಕಾದ ಹೆಜ್ಜೆ

- **ಕನ್ನಡ ಮಾಧ್ಯಮ ಶಿಕ್ಷಣ ಮತ್ತು ಶಾಲೆಗಳನ್ನು ಗಟ್ಟಿಗೊಳಿಸಲು ಸೂಕ್ತ ಹಾಗೂ ಗಟ್ಟಿನಿಲುವಿನ ಕ್ರಮ ಕೈಗೊಳ್ಳಬೇಕಿದೆ.**
- **ಭಾರತ ಸರಕಾರ ಎಲ್ಲಾ ರೀತಿಯ ನಾಗರಿಕ ಸೇವೆ ಕನ್ನಡದಲ್ಲಿ ಸಿಗವಂತಾಗಲು ಕನ್ನಡವನ್ನೂ ಸಹ ಭಾರತ ಸರಕಾರದ ಆಡಳಿತ ಭಾಷೆ ಸ್ಥಾನ ಕೊಡಲು ಸಂವಿಧಾನದ ವಿಧಿ 343ಕ್ಕೆ ತಿದ್ದುಪಡಿ ತರುಬೇಕು.**
- **ಸಂವಿಧಾನದ ವಿಧಿ 351ರಲ್ಲಿ ಕೇವಲ ಹಿಂದಿ ಭಾಷೆಯನ್ನು ಉತ್ತೇಜಿಸುವ ಅಂಶಗಳಿದ್ದು ಈ ಅಂಶಗಳಿಗೆ ತಿದ್ದುಪಡಿ ತರಬೇಕಿದೆ, ಈ ಮೂಲಕ ಹಿಂದಿಯ ಜೊತೆಗೆ ಕನ್ನಡವನ್ನೂ ಸೇರಿದಂತೆ ಹಿಂದಿಯೇತರ ಭಾರತೀಯ ಭಾಷೆಗಳಿಗೆ ಆಯಾ ರಾಜ್ಯದಲ್ಲಿ ಉತ್ತೇಜನ ನೀಡುವುದು ಭಾರತ ಸರಕಾರಕ್ಕೆ ಜವಾಬ್ದಾರಿ ನೀಡಬೇಕಿದೆ.**
- **ಕನ್ನಡ ಕೊಳ್ಳುಗನ ಭಾಷಾ ಹಕ್ಕಿನ ರಕ್ಷಣೆಗಾಗಿ ಭಾರತ ಒಕ್ಕೂಟದ ಗ್ರಾಹಕ ಹಕ್ಕುಗಳ ನಿಯಮದಲ್ಲಿ ತಿದ್ದುಪಡಿ ಮಾಡಬೇಕಾಗಿದೆ.**

ಸರಕಾರವೇ ಮುಂದೆ ನಿಂತು ಅವೈಜ್ಞಾನಿಕವಾಗಿ ಕನ್ನಡ ಶಾಲೆಗಳನ್ನು ಮುಚ್ಚಿ ಇಂಗ್ಲಿಷ್ ಶಾಲೆಗಳಿಗೆ ಅವಕಾಶ ನೀಡುತ್ತಿರುವುದು ದುರದೃಷ್ಟಕರ ನಡೆಯಾಗಿದೆ. ಸರಕಾರ ನಡೆಸುವ ಪಕ್ಷಗಳು ಬದಲಾದಂತೆಲ್ಲಾ ವಿಧಾನಸಭೆಯಲ್ಲಿ ಯಾವುದೇ ದೊಡ್ಡ ಮಟ್ಟದ ವಿರೋಧಗಳಿಲ್ಲದೇ ಒಂದಿಷ್ಟು ಕನ್ನಡ ಮಾಧ್ಯಮ ಶಾಲೆಗಳನ್ನು ಇಂಗ್ಲಿಷ್ ಮಾಧ್ಯಮಕ್ಕೆ ಅವಕಾಶ ಮಾಡಿಕೊಡುತ್ತಿರುವುದು ಯಾವ ಜನಪ್ರತಿನಿಧಿಗಳಿಗೂ ವೈಜ್ಞಾನಿಕವಾದ ವಿಚಾರಗಳು ಬೇಡ ಎಂದು ಕಾಣಿಸುತ್ತಿದೆ.

ವೈಜ್ಞಾನಿಕ ನೆಲೆಗಟ್ಟು

ಯಾವುದೇ ಪಕ್ಷ ಆಡಳಿತದಲ್ಲಿರಲಿ, ಸರಕಾರ ಕನ್ನಡ ಮಾಧ್ಯಮ ಶಾಲೆಗಳನ್ನು ವೈಜ್ಞಾನಿಕ ನೆಲೆಗಟ್ಟಿನಲ್ಲಿ ನೋಡುವುದನ್ನು ಪ್ರಾರಂಭಿಸಬೇಕು. ಕನ್ನಡ ಮಾಧ್ಯಮ ಶಾಲೆಗಳ ಮೂಲ ಸೌಕರ್ಯ, ಶಿಕ್ಷಣದ ಗುಣಮಟ್ಟ ಹೆಚ್ಚಿಸಿ ಎಲ್ಲಾ ಹಂತದ ಶಿಕ್ಷಣ ಕನ್ನಡದಲ್ಲೂ ಸಿಗುವಂತೆ ಮಾಡಲು ಕ್ರಮ ಕೈಗೊಳ್ಳಬೇಕು. ಕನ್ನಡ ಮಾಧ್ಯಮವೇ ಕನ್ನಡ ಮಕ್ಕಳಿಗೆ ಪರಿಣಾಮಕಾರಿ. ಕನ್ನಡ ಮಾಧ್ಯಮ ಶಿಕ್ಷಣವನ್ನು ಕಡೆಗಣಿಸಿದರೆ ಶಿಕ್ಷಣವನ್ನೇ ಕಡೆಗಣಿಸಿದಂತೆ ಇಂದಿನ ಜಾಗತಿಕ ಯುಗ ಕೊಳ್ಳುಗ(ಗ್ರಾಹಕ)ನ ಮೇಲೆ ಆಧಾರಿತವಾಗಿದೆ. ಕೊಳ್ಳುಗನ ಹಕ್ಕಗಳ ರಕ್ಷಣೆಗೆಂದೇ ಜಗತ್ತಿನಾದ್ಯಂತ ಸರಕಾರಗಳು ನೀತಿ ನಿಯಮಗಳನ್ನು ರೂಪಿಸಿವೆ. ಜಗತ್ತಿನ ಯಾವುದೇ ಭಾಗದಲ್ಲಿ ವಸ್ತುಗಳು ತಯಾರಾದರೂ ತಮ್ಮ ನಾಡಿನಲ್ಲಿ ಮಾರಾಟವಾಗುವಾಗ ತಮ್ಮ ಭಾಷೆಯ ಬಳಕೆಯಲ್ಲಿರಬೇಕು.

ಗ್ರಾಹಕ ಸೇವೆಯ ಎಲ್ಲಾ ವಿಚಾರಗಳು ತಮ್ಮ ಭಾಷೆಯಲ್ಲೇ ಸಿಗಬೇಕೆಂದು ಕೊಳ್ಳುಗನ ಹಕ್ಕುಗಳ ರಕ್ಷಣೆಯ ಕಾಯಿದೆಯ ಮೂಲಕ ಅನೇಕ ಚಿಕ್ಕ ಚಿಕ್ಕ ಭಾಷೆಯನ್ನಾಡುವ ಜನರ ದೇಶಗಳು ತಮ್ಮ ಭಾಷೆಯನ್ನು ಉಳಿಸಿಕೊಳ್ಳಲು ಯಾಶಸ್ವಿಯಾಗಿವೆ. ಇಂದಿನ ಯುಗದಲ್ಲಿ ಇದು ಅತ್ಯಗತ್ಯವಾದ ನಿಯಮ. ಈ ರೀತಿಯ ನಿಯಮಗಳ ಮೂಲಕ ಭಾಷೆಯ ಉಳಿವು ಅಷ್ಟೇ ಅಲ್ಲದೇ, ಕೊಳ್ಳುಗನ ಹಕ್ಕಿನ ರಕ್ಷಣೆಯೂ ಆಗಲಿದೆ ಮತ್ತು ಭಾಷೆಯ ಆಧಾರದಲ್ಲಿ ಉದ್ಯೋಗ ಸೃಷ್ಟಿಗೂ ಅವಕಾಶ ಕಲ್ಪಿಸಲಿದೆ. ಇಂದು ಕನ್ನಡ ನಾಡಿನಲ್ಲಿ ಭಾರತದ ಕಂಪನಿಗಳನ್ನೊಳಗೊಂಡಂತೆ ಅನೇಕ ಬಹುರಾಷ್ಟ್ರೀಯ ಕಂಪನಿಗಳು ತಮ್ಮ ವಸ್ತು ಮತ್ತು ಸೇವೆಯನ್ನು ಕನ್ನಡ ನಾಡನಲ್ಲಿ ಮಾರಾಟ ಮಾಡುತ್ತಿವೆ. ಇಂದಿನ ಭಾರತ ಒಕ್ಕೂಟದ ಗ್ರಾಹಕ ಹಕ್ಕುಗಳ ಕಾಯಿದೆಯಲ್ಲಿ ಹಿಂದಿ/ಇಂಗ್ಲಿಷ್ ಗೊತ್ತಿರುವ ಗ್ರಾಹಕರ ಭಾಷಾ ಹಕ್ಕುಗಳನ್ನು ರಕ್ಷಿಸಲು ಅಂಶಗಳನ್ನು ಸೇರಿಸಲಾಗಿದೆ ಹೊರೆತು, ಹಿಂದಿಯೇತರ ನಾಗರೀಕರ ಗ್ರಾಹಕ ಹಕ್ಕುಗಳನ್ನು ರಕ್ಷಿಸಲು ಗಟ್ಟಿಯಾದ ಅಂಶಗಳನ್ನು ಸೇರಿಸಲಾಗಿಲ್ಲಾ,



ನಿಯಮಗಳು ಸರಿಯಿಲ್ಲದ ಕಾರಣಕ್ಕಾಗಿ ಲಕ್ಷಾಂತರ ಕೋಟಿ ರೂಪಾಯಿ ವಹಿವಾಟು ಕನ್ನಡ ನಾಡಿನಲ್ಲಿ ನಡೆದರೂ ಕನ್ನಡ ಭಾಷಿಕ ಕೊಳ್ಳುಗ ಕನ್ನಡದಲ್ಲಿ ಗ್ರಾಹಕ ಹಕ್ಕಿನಿಂದ ವಂಚಿತನಾಗುತ್ತಿದ್ದಾನೆ ಮತ್ತು ಇನ್ನೊಂದೆಡೆ, ಕನ್ನಡ ಅನ್ನ ಕೊಡುವ ಭಾಷೆಯಾಗಬೇಕು ಎನ್ನುವ ಕೂಗು ಕೂಗಾಗೇ ಉಳಿದಿದೆ.

ಗ್ರಾಹಕರ ಭಾಷಾ ಹಕ್ಕಿನ ರಕ್ಷಣೆ ಅನಿವಾರ್ಯ

ಕನ್ನಡ ನಾಡಿನಲ್ಲಿ ವ್ಯವಹಾರ ನಡೆಸುತ್ತಿರುವ ಬಹಳಷ್ಟು ಬೇರೆ ಬೇರೆ ದೇಶದ ಖಾಸಗಿ ಸಂಸ್ಥೆಗಳು ಕನ್ನಡಗರ ಒತ್ತಾಯಕ್ಕೆ ಮಣಿದು ಕನ್ನಡದಲ್ಲಿ ಗ್ರಾಹಕ ಸೇವೆ ಒದಗಿಸಲು ಮುಂದಾಗಿವೆ. ಆದರೆ ಇಂದಿಗೂ ಬಹುತೇಕ ಭಾರತೀಯ ಸಂಸ್ಥೆಗಳು ಭಾರತ ಎಂದರೆ ಹಿಂದಿ ಎನ್ನುವ ಭ್ರಮೆಯಲ್ಲೇ ಮುಳುಗಿವೆ. ಭಾರತ ಒಕ್ಕೂಟದ ಭಾಷೆಗಳ ಉಳಿವಿಗಾಗಿ ಭಾರತದ ಗ್ರಾಹಕ ಹಕ್ಕು ಕಾಯಿದೆಯಲ್ಲಿ ಹಿಂದಿಯೇತರ ಗ್ರಾಹಕರ ಭಾಷಾ ಹಕ್ಕಿನ ರಕ್ಷಣೆಗಾಗಿಯೂ ನಿಯಮಗಳನ್ನು ಸೇರಿಸಬೇಕಾದ ಅವಶ್ಯಕತೆ ಇದೆ.

ಇದು ಖಾಸಗಿ ವಲಯಕ್ಕೆ ಸಂಬಂಧಿಸಿದ್ದಾರೇ ಸರಕಾರಿ ವಲಯದಲ್ಲೇನೂ ಕನ್ನಡಿಗರ ಹಕ್ಕಿನ ರಕ್ಷಣೆಯಾಗುತ್ತಿಲ್ಲಾ. ಲಕ್ಷಾಂತರ ಕೋಟಿ ತೆರಿಗೆ ಕಟ್ಟುವ ಕನ್ನಡಿಗರು ಇಂದಿಗೂ ತಮ್ಮ ಭಾಷೆಯಲ್ಲಿ ನಾಗರಿಕ ಸೇವೆ ಪಡೆಯಲು ಹೋರಾಟ ನಡೆಸಬೇಕಾದ ಪರಿಸ್ತಿತಿ ಜೀವಂತವಾಗಿದೆ. ಸಂವಿಧಾನ 343ರಲ್ಲಿ ಭಾರತ ಸರಕಾರದ ಆಡಳಿತ ಭಾಷೆ ಕೇವಲ ಹಿಂದಿ/ಇಂಗ್ಲಿಷ್ ಎಂದಿರುವುದರಿಂದ ಭಾರತ ಸರಕಾರದ ಬಹುತೇಕ ನಾಗರೀಕ ಸೇವೆಗಳು ಕೇವಲ ಹಿಂದಿ, ಇಂಗ್ಲಿಷ್ ನಲ್ಲಿರುತ್ತವೆ. ಸಂವಿಧಾನದ 343ರ ಆಧಾರದ ಮೇಲೆ ಕನ್ನಡಿಗರೂ ಸೇರಿದಂತೆ ಹಿಂದಿಯೇತರ ಜನರು ಕಾನೂನು ರೂಪಿಸುವ ಪ್ರಕ್ರಿಯೆಯಿಂದಲೇ ದೂರ ಉಳಿಯುವಂತೆ ಮಾಡಲಾಗುತ್ತಿದೆ. ಒಂದೆಡೆ 343ರಲ್ಲಿ ಕನ್ನಡಕ್ಕೆ ಅವಕಾಶವಿಲ್ಲಾ, ಇನ್ನೊಂದೆಡೆ 348 ರ ಪ್ರಕಾರ ರಾಜ್ಯದ ಭಾಷೆಯನ್ನು ಆಯಾ ರಾಜ್ಯದ ಹೈಕೋರ್ಟಿನ ಆಡಳಿತ ಭಾಷೆ ಮಾಡಲು ಅವಕಾಶವಿದೆ. ಈ ಆಧಾರದ ಮೇಲೆ ಹಿಂದಿ ರಾಜ್ಯಗಳ ಹೈಕೋರ್ಟಿನಲ್ಲಿ ಹಿಂದಿ ಭಾಷೆಯ ಬಳಕೆಗೆ ಅವಕಾಶ ನೀಡಲಾಗಿದೆ. ಕರ್ನಾಟಕ ಸರಕಾರ ಕರ್ನಾಟಕದ ಹೈಕೋರ್ಟಿನಲ್ಲಿ ಕನ್ನಡದ ಬಳಕೆಗೆ ಅವಕಾಶ ನೀಡಿ ಎಂದು ಒತ್ತಾಯಿಸಿದರೂ ಅವಕಾಶ ನೀಡಿಲ್ಲ, ಇದು ನಾವು ಪ್ರಜಾಪ್ರಭುತ್ವದಲ್ಲಿದ್ದೇವೆಯೇ ಎನ್ನುವ ಪ್ರಶ್ನೆ ಮಾಡಿಕೊಳ್ಳುವಂತೆ ಮಾಡಿದೆ.

ಸಂವಿಧಾನದ ವಿಧಿ 351 ರಲ್ಲಿ it shall be the duty of Union to promote the spread of Hindi language ಎನ್ನುವಂತೆ ಅಂಶವಿರುವುದರಿಂದ ಭಾರತ ಸರಕಾರ ಹಿಂದಿ ಭಾಷಿಕರನ್ನು ಮಾತ್ರ ಪ್ರತಿನಿಧಿಸುವಂತೆ ಅನೇಕ ಕಡೆಯಲ್ಲಿ ವರ್ತಿಸುತ್ತಿದೆ. ಭಾರತ ಸರಕಾರ ಕೇವಲ ಹಿಂದಿ ಭಾಷಿಕರನ್ನು ಮಾತ್ರ ಪ್ರತಿನಿಧಿಸುತ್ತಿಲ್ಲಾ ಕೇವಲ ಹಿಂದಿ ಭಾಷಿಕರಿಂದ ಮಾತ್ರ ತೆರಿಗೆ ಸಂಗ್ರಹಿಸುತ್ತಿಲ್ಲ, shall be the duty of Union to promote the spread the indian langauges ಎನ್ನುವಂತೆ ವಿಧಿ 351ಕ್ಕೆ ತಿದ್ದುಪಡಿ ತರಬೇಕದ್ದು ಬಹಳ ಅವಶ್ಯಕ, ಹಾಗಾದಲ್ಲಿ ಮಾತ್ರ ಭಾರತ ಸರಕಾರ ಎಲ್ಲಾ ಭಾಷೆಯ ಬೆಳವಣಿಗೆಗೆ ಸ್ಪಂದಿಸಲಿದೆ ಮತ್ತು ಕ್ರಮ ಕೈಗೊಳ್ಳುತ್ತದೆ.

ಇದಲ್ಲದೇ, ಕರ್ನಾಟಕ ಸರಕಾರದ ಆಡಳಿತ ಭಾಷೆ ಕನ್ನಡ ಎಂದಿದ್ದರೂ ಎಲ್ಲಾ ನಾಗರೀಕ ಸೇವೆಗಳು ಕನ್ನಡದಲ್ಲಿ ಸಿಗದಿರುವುದು ರಾಜಕೀಯ ಇಚ್ಚಾಶಕ್ತಿಯನ್ನು ಪ್ರಶ್ನಿಸುವಂತೆ ಮಾಡಿದೆ. ಕನ್ನಡ ಅಭಿವೃದ್ಧಿ ಪ್ರಾಧಿಕಾರದಂತಹ ಸಂಸ್ಥೆಗಳು ಇದ್ದರೂ ಅಧಿಕಾರಿ ವರ್ಗ ಕನ್ನಡವನ್ನು ಕಡೆಗಣಿಸುತ್ತಿದೆ. ಕರ್ನಾಟಕ ಸರಕಾರದ ಆಡಳಿತ ಭಾಷೆಯ ನಿಯಮದ ಕಟ್ಟುನಿಟ್ಟಿನ ಜಾರಿಗೆ ಮುಂದಾಗಬೇಕು, ಕನ್ನಡ ಅಭಿವೃದ್ಧಿ ಪ್ರಾಧಿಕಾರಕ್ಕೆ ಹೆಚ್ಚಿನ ಶಕ್ತಿ ನೀಡಬೇಕಿದೆ. ◆

ಮಹಿಳೆಯರು ಆತ್ಮಾಭಿಮಾನ ಮತ್ತು ವ್ಯಕ್ತಿತ್ವ ವಿಕಾಸಕ್ಕೆ ಸಾಧಕವಾದ ಸಾಹಿತ್ಯವನ್ನು ರಚಿಸಬೇಕು. ಮೂಢನಂಬಿಕೆಗಳನ್ನು ನಿರ್ಮೂಲನ ಮಾಡಲು ಶ್ರಮಿಸಬೇಕು.

❖ *ಗೋರೂರು ರಾಮಸ್ವಾಮಿ ಅಯ್ಯಂಗಾರ್*


ಸಿರಿಗನ್ನಡಂ ಗೆಲ್ಗೆ
ಸಿರಿಗನ್ನಡಂ ಬಾಳ್ಗೆ
ಸಕ್ಕರೆ ನಾಡು ಮಂಡ್ಯದಲ್ಲಿ ನಡೆಯುವ
೮೭ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಆಗಮಿಸುವ
ಕನ್ನಡ ಪ್ರೇಮಿಗಳಿಗೆ,ತುಂಬು ಹೃದಯದ ಸುಸ್ವಾಗತ....
ಸ್ವಾಗತ ಕೋರುವವರು
ಶ್ರೀ ರವಿಕುಮಾರ್ ಗೌಡ
(ಗಣಿಗ)
ಜನಪ್ರಿಯ ಶಾಸಕರು
ಮಂಡ್ಯ ವಿಧಾನಸಭಾ ಕ್ಷೇತ್ರ

ತಂತ್ರಜ್ಞಾನದಲ್ಲೂ ಕನ್ನಡ ಬಲಿಷ್ಠ

ಮಾಹಿತಿ ತಂತ್ರಜ್ಞಾನದ ಸಂಶೋಧನೆ, ಆವಿಷ್ಕಾರ ಈಗ ನಮ್ ಕನ್ನಡದಲ್ಲೂ ಲಭ್ಯ



❖ ಶ್ರೀನಿಧಿ,
ಕನ್ನಡ ತಂತ್ರಜ್ಞಾನ ಲೇಖಕ

ಕನ್ನಡದ ಅಳಿವು, ಉಳಿವು ಈಗ ಕೇವಲ ಕಥೆ, ಕಾದಂಬರಿ, ಚರಿತ್ರೆಯ ಕಥನಗಳಷ್ಟೇ ಆಗಿ ಉಳಿದಿಲ್ಲ. ಕನ್ನಡಿಗರು ನಾಳೆಯೂ ಕನ್ನಡವನ್ನು ಸುಲಲಿತವಾಗಿ ನಿತ್ಯ ಚಟುವಟಿಕೆಗಳಲ್ಲಿ ಬಳಸಿಕೊಳ್ಳುವಂತೆ ಕನ್ನಡವನ್ನು ಅಣಿಗೊಳಿಸುವುದು ಹಾಗೂ ಬಳಸುವುದು ಮುಖ್ಯ. ಆ ನಿಟ್ಟಿನಲ್ಲಿ ಕನ್ನಡ ತಂತ್ರಜ್ಞಾನ ನಡೆದು ಬಂದ ಹಾದಿಯನ್ನು ಗುರುತಿಸುತ್ತಲೇ ಮುಂದಿನ ಕೈಕಂಬದೆಡೆಗೆ ಕೈ ತೋರಿಸುತ್ತಿದ್ದಾರೆ ಟಿ.ಜಿ.ಶ್ರೀನಿಧಿ.

ನಮ್ಮ ರಾಜ್ಯಕ್ಕೆ ಕರ್ನಾಟಕವೆಂದು ನಾಮಕರಣವಾಗಿದ್ದು ಐವತ್ತು ವರ್ಷಗಳ ಹಿಂದೆ, 1973ರಲ್ಲಿ, ಆ ಕಾಲಘಟ್ಟ ಮಾಹಿತಿ ತಂತ್ರಜ್ಞಾನದ ಬೆಳವಣಿಗೆಯ ದೃಷ್ಟಿಯಿಂದಲೂ ಬಹಳ ಮಹತ್ವದ್ದು. ಪರ್ಸನಲ್ ಕಂಪ್ಯೂಟರುಗಳು ಆಗಷ್ಟೇ ಮಾರುಕಟ್ಟೆಗೆ ಬಂದಿದ್ದವು, ಮಾಹಿತಿ ತಂತ್ರಜ್ಞಾನದ ಅನುಕೂಲತೆಗಳು ಜನಸಾಮಾನ್ಯರಿಗೂ ಸುಲಭವಾಗಿ ದೊರಕಬಹುದೆಂಬ ಸಾಧ್ಯತೆಯೇ ಸಾಕಷ್ಟು ನಿರೀಕ್ಷೆಗಳಿಗೆ ಕಾರಣವಾಗಿತ್ತು. ಮುಂದಿನ ದಶಕಗಳಲ್ಲಿ ಮಾಹಿತಿ ತಂತ್ರಜ್ಞಾನ ಕ್ಷೇತ್ರ ಎಲ್ಲ ನಿರೀಕ್ಷೆಗಳನ್ನೂ ಮೀರಿ ಬೆಳೆದದ್ದು ನಮಗೆಲ್ಲ ಗೊತ್ತೇ ಇದೆ. ಜಾಗತಿಕ ಐಟಿ ಉದ್ದಿಮೆಯಲ್ಲಿ ನಮ್ಮ ಕರ್ನಾಟಕ ಮಹತ್ವದ ಸ್ಥಾನ ಪಡೆದುಕೊಂಡಿದ್ದೂ ಇದೀಗ ಇತಿಹಾಸ. ಜಾಗತಿಕ ಐಟಿ ಉದ್ದಿಮೆಯ ಮಾತು ಹಾಗಿರಲಿ, ಮಾಹಿತಿ ತಂತ್ರಜ್ಞಾನದ ಸವಲತ್ತುಗಳನ್ನು ಕನ್ನಡ ಭಾಷಿಕರಿಗೂ ಒದಗಿಸುವ ಕೆಲಸ ಕೂಡ 1970-80ರ ಆಸುಪಾಸಿನಲ್ಲೇ ಪ್ರಾರಂಭವಾಗಿತ್ತು. ಅಷ್ಟೇ ಅಲ್ಲ, 1980ರ ದಶಕದ ಮಧ್ಯಭಾಗದ ವೇಳೆಗಾಗಲೇ ಮೊದಲ ಕನ್ನಡ ತಂತ್ರಾಂಶಗಳು ಸಿದ್ಧವಾಗಿದ್ದವು!

ಕನ್ನಡದ ಬಳಕೆ ಇಷ್ಟಕ್ಕೇ ನಿಂತಿಲ್ಲ

ಭಾರತೀಯ ಭಾಷೆಗಳಲ್ಲಿ ಕಂಪ್ಯೂಟಿಂಗ್‌ನ ಪಿತಾಮಹ ನಾಡೋಜ ಕೆ. ಪಿ. ರಾವ್, ಐಉಉಉ ಕಂಪ್ಯೂಟರ್ ಸೊಸೈಟಿಯ ಮೊದಲ ಭಾರತೀಯ ಅಧ್ಯಕ್ಷ ಡಾ. ಕಸ್ತೂರಿ ರಂಗಾಚಾರ್, ಕಂಪ್ಯೂಟರ್ ವಿಜ್ಞಾನಿ ಡಾ. ವಿಶ್ವೇಶ್ವರ ದೀಕ್ಷಿತ್ ಮುಂತಾದವರ ಪ್ರಯತ್ನಗಳಿಂದ ಕಂಪ್ಯೂಟರಿನಲ್ಲಿ ಕನ್ನಡ ಮೂಡಿಸುವ ಕನಸು ಬಹಳ ಹಿಂದೆಯೇ ನನಸಾಗಿತ್ತು. ನಂತರದ ವರ್ಷಗಳಲ್ಲೂ ಹಲವು ಹೊಸ ಕೀಲಿಮಣೆ ತಂತ್ರಾಂಶಗಳು – ಪೂರ್ಣಪ್ರಮಾಣದ ಪದಸಂಸ್ಕಾರಕಗಳು ಕನ್ನಡದ ತಂತ್ರಜ್ಞಾನಾಸಕ್ತರನ್ನು ತಲುಪಿದವು, ಹೊಸ ಆಯ್ಕೆಗಳನ್ನು – ಸೌಲಭ್ಯಗಳನ್ನು ಒದಗಿಸಿದವು. ಮೊದಲಿಗೆ ಕಂಪ್ಯೂಟರಿನಲ್ಲಷ್ಟೇ ಮೂಡುತ್ತಿದ್ದ ಕನ್ನಡ ಅಕ್ಷರಗಳು ಕಾಲಕ್ರಮೇಣ



> ನನ್ನ ದೇಹದ ಬೂದಿಯನ್ನು ಗಾಳಿಯಲ್ಲಿ ತೇಲಿ ಬಿಡಿ, ಹೋಗಿ ಬೀಳಲಿ ಭತ್ತ ಬೆಳೆಯುವಲ್ಲಿ, ಬೂದಿ ಗೊಬ್ಬರದಿಂದ ತೆನೆಯೊಂದು ನೆನೆದು ಧರೆ ಧನ್ಯವಾಯಿತು ಹುಟ್ಟು ಸಾವಿನಲ್ಲಿ
>
> ❖ *ದಿನಕರ ದೇಸಾಯಿ*



87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಶುಭಾಶಯಗಳು

ಕರ್ನಾಟಕ ಸರ್ಕಾರ

ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮದಾಯ ದತ್ತಿಗಳ ಇಲಾಖೆ

ಶ್ರೀ ನಿಮಿಷಾಂಬ ದೇವಸ್ಥಾನ

ಗಂಜಾಂ, ಶ್ರೀರಂಗಪಟ್ಟಣ, ಮಂಡ್ಯ ಜಿಲ್ಲೆ - 571 348, ದೂ.ಸಂ: 08236 -295641, 297641.
srinimishambatemple@gmail.com



ನಿತ್ಯ ಸೇವೆ

ಸೇವಾ ವಿವರ

1.	ಕುಂಕುಮಾರ್ಚನೆ	10-00
2.	ತ್ರಿಶತಿ ಕುಂಕುಮಾರ್ಚನೆ	50-00
3.	ಸಹಸ್ರನಾಮ ಅರ್ಚನೆ	120-00
4.	ಸಂಕಲ್ಪ ಸೇವೆ	100-00
5.	ಮಹಾ ಸಂಕಲ್ಪ ಸೇವೆ	150-00
6.	ಪಂಚಾಮೃತ ಅಭಿಷೇಕ	250 - 00
7.	ಕ್ಷೀರಾಭಿಷೇಕ	120-00
8.	ಸರ್ವಸೇವೆ	600-00
9.	ಏಕವಾರ ರುದ್ರಾಭಿಷೇಕ	500-00
10.	ಉಡಿ ಕಾಣಿಕೆ	10-00
11.	ಸೀರೆ ಕಾಣಿಕೆ	10-00
12.	ಚಿನ್ನ / ಬೆಳ್ಳಿ ಕಾಣಿಕೆ	10-00
13.	ತುಲಾಭಾರ ಸೇವೆಕಾಣಿಕೆ	300-00
	ಸಾಮಾಗ್ರಿಗಳನ್ನು ಹೊರತು ಪಡಿಸಿ	
14.	ನಾಮಕರಣ	300-00
15.	ಅಕ್ಷರ ಅಭ್ಯಾಸ	300-00
16.	ಸಂಕಷ್ಟಹರ ಚತುರ್ಥಿ	50-00
17.	ತೀರ್ಥಸ್ನಾನ	100-00
ಬೆಳಿಗ್ಗೆ 6.30 ರಿಂದ 7.30 ರವರೆಗೆ ಮಾತ್ರ		

ವಿಶೇಷ ಸೇವೆಗಳು

1.	ಪ್ರದೋಷಕಾಲ ಅಭಿಷೇಕ	2000 - 00
2.	ದುರ್ಗಾಸಪ್ತಶತಿ ಪಾರಾಯಣ	1000-00
3.	ಸಂಪುಟೀಕರಣ ಪಾರಾಯಣ	1100 -00
4.	ಸತ್ಯನಾರಾಯಣ ಪೂಜೆ	2500-00
5.	ಏಕಾದಶವಾರ ರುದ್ರಾಭಿಷೇಕ	2000 - 00
6.	ಆದಿತ್ಯ ಹೃದಯ ಪಾರಾಯಣ (1ಆವೃತ್ತಿ)	150-00
7.	ಲಕ್ಷ್ಮೀ ನಾರಾಯಣ ಹೃದಯ ಪಾರಾಯಣ (1 ಆವೃತ್ತಿ)	300-00
8.	ಕನಕಾಭಿಷೇಕ ಮತ್ತು ಪಂಚಕಳಸ	2600-00
	ಮಹಾಭಿಷೇಕ ಸೇವೆ	
9.	ಸುವರ್ಣಪುಷ್ಪಾರ್ಚನೆ ಸೇವೆ	1600-00

ಮಹಾ ನೈವೇದ್ಯ ಪ್ರಸಾದ ಸೇವೆಗಳು

1.	ಸಿಹಿಪೊಂಗಲ್ (1 ಕೆ.ಜಿ.ಗೆ)	1000-00
2.	ಕೇಸರಿಬಾತ್ (1 ಕೆ.ಜಿ.ಗೆ)	1000-00
3.	ಮೊಸರನ್ನ (1 ಕೆ.ಜಿ.ಗೆ)	600-00
4.	ಚಿತ್ರಾನ್ನ (1 ಕೆ.ಜಿ.ಗೆ)	400-00

ಹೋಮಗಳು

1.	ಚಂಡಿಕಾ ಹೋಮ	30,000-00
2.	ಗಣಹೋಮ	7,500-00
3.	ಮೃತ್ಯುಂಜಯ ಹೋಮ	12,000-00
4.	ರುದ್ರಹೋಮ	25,000-00
5.	ಶ್ರೀಲಕ್ಷ್ಮೀನಾರಾಯಣ ಹೋಮ	10,000-00
6.	ಸುದರ್ಶನ ಹೋಮ	30,000-00
7.	ದುರ್ಗಾಹೋಮ	30,000-00

ದರ್ಶನ ಸೇವೆಗಳು

1.	ವಿಶೇಷ ದರ್ಶನ (ಒಬ್ಬರಿಗೆ ಮಾತ್ರ)	20-00
2.	ನೇರದರ್ಶನ (ಒಬ್ಬರಿಗೆ ಮಾತ್ರ)	100-00
	(ಲಾಡು ಪ್ರಸಾದ ಉಚಿತ)	
3.	ದೇವರಿಗೆ ಕುಂಕುಮ ಅರ್ಪಿಸಲು 1ಕೆ.ಜಿ.ಗೆ)	250 00

ವಾಹನ ಪೂಜೆ

1	ಸ್ಕೂಟರ್ ಬೈಕ್	50-00
2.	ಕಾರು / ಟೆಂಪೋ / ಬಸ್ಸು/ ಲಾರಿ	100-00

ಪೌರ್ಣಿಮೆಯ ದಿನದ ಸಾಮೂಹಿಕ ಸೇವೆಗಳು

1	ಗಣಹೋಮ	50-00
2.	ನಕ್ಷತ್ರ ಹೋಮ	50-00
3.	ದುರ್ಗಾಹೋಮ	250-00
4.	ಸತ್ಯನಾರಾಯಣ ಪೂಜೆ	50-00
5.	ಅನ್ನದಾನ ಸೇವೆಗೆ ಕನಿಷ್ಠ 500 - 00 ರಿಂದ	
	ಎಷ್ಟಾದರು ಹಣ ನೀಡಬಹುದು	

ಶಾಶ್ವತ ಪೂಜಾ ನಿಧಿ 5000-00

1.	ವರ್ಷದಲ್ಲಿ ಒಂದು ದಿನ	5000-00
	ಪಂಚಾಮೃತ ಅಭಿಷೇಕ	
2.	ಅನ್ನದಾನ ಸೇವೆ (ಹುಣ್ಣಿಮೆ ದಿವಸ)	3001-00
	ಒಂದು ಜೊತೆ ಲಾಡುಪ್ರಸಾದ	46-00

ಕ್ರಮ ಸಂ.	ವಿವರ	ಮೊಬಲಗು
1.	ಒಂದು ದಿವಸದ ದಾಸೋಹ ಸೇವೆ	ರೂ.50,000/-
2.	ದಾಸೋಹ ಪುದುವಟ್ಟು ಸೇವೆ	ರೂ.3,00,000/-
3.	ಅಕ್ಕಿ ಸೇವೆ (1 ಕೆ.ಜಿ.ಗೆ)	ರೂ.100/-

ಸಹಿ/-
ಕಾರ್ಯನಿರ್ವಾಹಕ ಅಧಿಕಾರಿಗಳು

ಮೇಲಿನ ಸೇವೆಗಳನ್ನು ಮಾಡಿಸುವ ಸಲುವಾಗಿ ಮುಂಗಡವಾಗಿ ಪಾವತಿಸಲು ಅಥವಾ ಆನ್‌ಲೈನ್ ಮುಖಾಂತರ ಕಾಣಿಕೆಯನ್ನು ಸಲ್ಲಿಸಲು ಇಚ್ಛಿಸುವವರು, ದೇವಸ್ಥಾನದ ಖಾತೆಗೆ ಜಮಾ ಮಾಡಬಹುದಾಗಿದೆ.

ದೇವಸ್ಥಾನದ ಉಳಿತಾಯ ಖಾತೆ ವಿವರ SB ACCOUNT NO: 54016275423 IFCS: SBIN0040037 SBI. SRIRANGAPATNA

(ಸೇವೆಗಳನ್ನು ಮಾಡಿಸಲು ಮುಂಗಡವಾಗಿ ಉಳಿತಾಯ ಖಾತೆಗೆ ಜಮಾ ಮಾಡಿದ ಮಾಹಿತಿಯನ್ನು ಸೇವಾರ್ಥದಾರರು, ಪತ್ರದ ಮುಖೇನ ಅಥವಾ ದೂರವಾಣಿ ಮುಖೇನ ಕಛೇರಿಯ ಗಮನಕ್ಕೆ ತರಲು ಕೋರಿದೆ)

ದೇವಸ್ಥಾನ ತೆರೆದಿರುವ ಸಮಯ ಬೆಳಿಗ್ಗೆ 6-00 ರಿಂದ ರಾತ್ರಿ 8-30 ರವರೆಗೆ

ಮೊಬೈಲ್ ಫೋನುಗಳಲ್ಲೂ ಮೂಡಿದವು, ಕನ್ನಡದ ವ್ಯಾಪ್ತಿಯನ್ನು ಇನ್ನಷ್ಟು ಹಿಗ್ಗಿಸಿದವು. ಕಂಪ್ಯೂಟರಿನಲ್ಲಿ, ಮೊಬೈಲಿನಲ್ಲಿ ಕನ್ನಡ ಟೈಪಿಂಗ್ ಸಾಧ್ಯವಾದದ್ದು ನಿಜಕ್ಕೂ ದೊಡ್ಡ ಸಾಧನೆ ಎನ್ನುವುದರಲ್ಲಿ ಯಾವ ಸಂಶಯವೂ ಇಲ್ಲ. ಹಾಗೆಂದು ಕನ್ನಡ ಮತ್ತು ಮಾಹಿತಿ ತಂತ್ರಜ್ಞಾನದ ನಂಟು ಇಷ್ಟೇ ಎನ್ನಬಹುದೇ? ಖಂಡಿತಾ ಇಲ್ಲ. ಮಾಹಿತಿ ತಂತ್ರಜ್ಞಾನದಲ್ಲಿ ಕನ್ನಡದ ಬಳಕೆ ಇಷ್ಟಕ್ಕೇ ನಿಂತಿಲ್ಲ, ನಿಲ್ಲುವುದೂ ಇಲ್ಲ.

ಸರಕಾರ, ಸಂಘಸಂಸ್ಥೆಗಳು, ಸಮುದಾಯ ಹಾಗೂ ಆಸಕ್ತ ವ್ಯಕ್ತಿಗಳ ಕೊಡುಗೆಯಿಂದಾಗಿ ಮಾಹಿತಿ ತಂತ್ರಜ್ಞಾನದ ಹೊಸ ಸವಲತ್ತುಗಳನ್ನು ನಾವಿಂದು ಕನ್ನಡ ಭಾಷೆಯಲ್ಲೂ ಬಳಸುವುದು ಸಾಧ್ಯವಾಗಿದೆ. ಕೆಲವರ್ಷಗಳ ಹಿಂದೆ ಕಲ್ಪಿಸಿಕೊಳ್ಳಲೂ ಅಸಾಧ್ಯವಾಗಿದ್ದ ಅನೇಕ ಹೊಸ ಸಾಧ್ಯತೆಗಳು ಇದೀಗ ನಮ್ಮ ಮುಂದಿವೆ. ಇಂತಹ ಸಾಧ್ಯತೆಗಳ ಬಗೆಗೆ ತಿಳಿದುಕೊಳ್ಳುವುದು, ಅವು ನಮಗೆ ನೀಡುವ ಅವಕಾಶವನ್ನು ಬಳಸಿಕೊಳ್ಳುವುದು, ನಾವು ತಿಳಿದುಕೊಂಡಿದ್ದನ್ನು ಇತರರಿಗೂ ತಿಳಿಸುವುದು ಬಳಕೆದಾರರಾಗಿ ನಮ್ಮ ಜವಾಬ್ದಾರಿ. ಈ ಜವಾಬ್ದಾರಿಯನ್ನು ಪಾಲಿಸಿದಾಗ ಮಾತ್ರವೇ ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿ ಕನ್ನಡದ ವ್ಯಾಪ್ತಿ ಇನ್ನಷ್ಟು ಹೆಚ್ಚಾಗುತ್ತದೆ, ಇನ್ನಷ್ಟು ಹೊಸ ಸಾಧ್ಯತೆಗಳು ನಮ್ಮೆದುರು ತೆರೆದುಕೊಳ್ಳುತ್ತವೆ. ಸಾಮಾನ್ಯ ಬಳಕೆದಾರರಲ್ಲೂ ಆಸಕ್ತಿ ಮೂಡಿಸಬಲ್ಲ ಅಂತಹ ಕೆಲ ಸಾಧ್ಯತೆಗಳನ್ನು – ಪ್ರಾತಿನಿಕವಾಗಿ – ಪರಿಚಯಿಸುವ ಪ್ರಯತ್ನವೇ ಈ ಲೇಖನ. ಇಲ್ಲಿ ನೀವು ನೋಡುವುದು ಉದಾಹರಣೆಗಳನ್ನಷ್ಟೇ ಹೊರತು ಕನ್ನಡ ತಂತ್ರಾಂಶ ಸವಲತ್ತುಗಳ ಸಮೀಕ್ಷೆಯನ್ನಾಗಲೀ ಪರಿಪೂರ್ಣ ಪಟ್ಟಿಯನ್ನಾಗಲೀ ಅಲ್ಲ ಎನ್ನುವುದನ್ನು ದಯಮಾಡಿ ಗಮನಿಸಿ.

'ಸ್ಪೀಚ್ ಟು ಟೆಕ್ಸ್ಟ್'

ಈ ಲೇಖನದಲ್ಲಿ ಪ್ರಸ್ತಾಪಿಸಲಾಗಿರುವ ಕೆಲವು ಜಾಲತಾಣಗಳನ್ನು ವೀಕ್ಷಿಸಲು, ತಂತ್ರಾಂಶಗಳನ್ನು ಡೌನ್‌ಲೋಡ್ ಮಾಡಿಕೊಳ್ಳಲು ನೀವು ಭೇಟಿ ನೀಡಬಹುದಾದ ವಿಳಾಸಗಳ ಪಟ್ಟಿ ಇಲ್ಲಿದೆ: https://www.ejnana.com/variety/kannada&tech ಧ್ವನಿಯಿಂದ ಪಠ್ಯಕ್ಕೆ, ಪಠ್ಯದಿಂದ ಧ್ವನಿಗೆ ಕನ್ನಡ ಪಠ್ಯವನ್ನು ಬರೆಯಲು ಕೀಲಿಮಣೆ ಬಳಸುವ ಬದಲು, ನಾವು ಹೇಳಿದ್ದನ್ನು ಬರೆದುಕೊಳ್ಳುವಂತೆ ಕಂಪ್ಯೂಟರ್ ಅಥವಾ ಮೊಬೈಲಿಗೆ ಹೇಳುವುದನ್ನು 'ಸ್ಪೀಚ್ ಟು ಟೆಕ್ಸ್ಟ್' (ಧ್ವನಿಯಿಂದ ಪಠ್ಯಕ್ಕೆ ಬದಲಿಸುವ) ತಂತ್ರಜ್ಞಾನ ಸಾಧ್ಯವಾಗಿಸುತ್ತದೆ. ಬಳಕೆದಾರರ ಧ್ವನಿಯನ್ನು ಗುರುತಿಸುವ ಈ ತಂತ್ರಜ್ಞಾನ ಅವರ ಮಾತುಗಳನ್ನು ಪಠ್ಯರೂಪಕ್ಕೆ ಪರಿವರ್ತಿಸಿಕೊಡುತ್ತದೆ. ನಾವು ಕಳಿಸುವ ಮೆಸೇಜುಗಳನ್ನು, ಇಮೇಲ್ ಸಂದೇಶಗಳನ್ನು ಕಂಪ್ಯೂಟರಿಗೋ ಮೊಬೈಲಿಗೋ ಉಕ್ತಲೇಖನ ಕೊಟ್ಟು ಬರೆಸುವುದಕ್ಕೆ ಇದು ನೆರವಾಗಬಲ್ಲದು.

ಧ್ವನಿಮುದ್ರಿಸಿ ಇಟ್ಟಿರುವ ಕಡತಗಳನ್ನು ಪಠ್ಯರೂಪಕ್ಕೆ ಬದಲಿಸಿಕೊಳ್ಳುವುದೂ, ಸೈದ್ಧಾಂತಿಕವಾಗಿ ಸಾಧ್ಯವಿದೆ. ಅಷ್ಟೇ ಅಲ್ಲ, ವಿವಿಧ ಸಾಧನಗಳಿಗೆ ಧ್ವನಿರೂಪದ ಆದೇಶ ಕೊಡುವುದಕ್ಕೆ – ನಮಗೆ ಬೇಕಾದ ಮಾಹಿತಿಯನ್ನು ಧ್ವನಿರೂಪದಲ್ಲೇ ಪಡೆದುಕೊಳ್ಳುವುದಕ್ಕೂ ಇದರ ಹಿನ್ನೆಲೆಯಲ್ಲಿ ಕೆಲಸಮಾಡುವ 'ಸ್ಪೀಚ್ ರೆಕಗ್ನಿಶನ್' (ಧ್ವನಿ ಗುರುತಿಸುವ) ತಂತ್ರಜ್ಞಾನ ನೆರವಾಗುತ್ತದೆ. ನಾವು ಏನು ಹೇಳುತ್ತಿದ್ದೇವೆ ಎಂದು ಗುರುತಿಸಿ, ಅದನ್ನು ಅರ್ಥೈಸಿಕೊಂಡು, ಕಂಪ್ಯೂಟರ್ ಅಥವಾ ಮೊಬೈಲಿಗೂ ಅರ್ಥಮಾಡಿಸುವುದು ಈ ತಂತ್ರಜ್ಞಾನದ ಹೆಚ್ಚುಗಾರಿಕೆ. ಈಚಿನ ದಿನಗಳಲ್ಲಿ ವ್ಯಾಪಕವಾಗಿ ಬಳಕೆಯಾಗುತ್ತಿರುವ ಸ್ಮಾರ್ಟ್ ಸಹಾಯಕ ಯಂತ್ರಾಂಶ–ತಂತ್ರಾಂಶಗಳು (ಅಮೆಜಾನ್ ಅಲೆಕ್ಸಾ, ಗೂಗಲ್ ಅಸಿಸ್ಟೆಂಟ್, ಆಪಲ್ ಸಿರಿ ಇತ್ಯಾದಿ) ಇದೇ ತಂತ್ರಜ್ಞಾನವನ್ನು ಬಳಸುತ್ತವೆ.

ಇಂತಹ ತಂತ್ರಾಂಶಗಳು ಕನ್ನಡದ ಪ್ರಶ್ನೆಗಳಿಗೆ, ಆದೇಶಗಳಿಗೆ ಸರಾಗವಾಗಿ ಉತ್ತರಿಸುವಂತಾಗಲು ಇನ್ನೂ ಒಂದಷ್ಟು ಕೆಲಸ ಆಗಬೇಕಿದೆ. ಇದೇರೀತಿ ಕಂಪ್ಯೂಟರಿನಲ್ಲಿ–ಮೊಬೈಲಿನಲ್ಲಿ ಈಗಾಗಲೇ ಮೂಡಿಸಿಟ್ಟಿರುವ ಪಠ್ಯವನ್ನು ಓದಿಹೇಳುವುದು 'ಟೆಕ್ಸ್ಟ್ ಟು ಸ್ಪೀಚ್' (ಪಠ್ಯದಿಂದ ಧ್ವನಿಗೆ ಬದಲಿಸುವ) ತಂತ್ರಜ್ಞಾನದ ವೈಶಿಷ್ಟ್ಯ. ದೃಷ್ಟಿಸಮಸ್ಯೆ ಇರುವವರಿಗೆ ಮಾತ್ರವೇ ಅಲ್ಲ, ಪರದೆಯನ್ನು ಹೆಚ್ಚುಹೊತ್ತು ನೋಡುವುದು ಕಿರಿಕಿರಿಯ ಕೆಲಸ ಎನ್ನುವವರಿಗೂ ಈ ತಂತ್ರಜ್ಞಾನ ನೆರವಾಗಬಲ್ಲದು. ಉದ್ದನೆಯ ಪಠ್ಯ ಓದಲು ಸೋಮಾರಿತನ ಎನ್ನುವವರೂ ಈ ತಂತ್ರಜ್ಞಾನದ ಸಹಾಯ ಪಡೆದುಕೊಂಡು ಆ ಪಠ್ಯವನ್ನು ಓದಿಸಿ ಕೇಳಬಹುದು! ಅಕ್ಷರ ಗುರುತಿಸುವಿಕೆ ಹೊಸ ಪಠ್ಯವನ್ನು ಕಂಪ್ಯೂಟರಿಗೆ ಸೇರಿಸಲು ಅನೇಕ ಅವಕಾಶಗಳಿವೆ, ಸರಿ. ಆದರೆ ಈಗಾಗಲೇ ಬರೆದು ಅಥವಾ ಮುದ್ರಿಸಿ ಇಟ್ಟಿರುವ ಪಠ್ಯವನ್ನು ಕಂಪ್ಯೂಟರಿಗೆ ಸೇರಿಸುವುದು ಹೇಗೆ? ಮುದ್ರಿತ ಅಕ್ಷರಗಳನ್ನು ಗುರುತಿಸುವ (ಆಪ್ಟಿಕಲ್ ಕ್ಯಾರೆಕ್ಟರ್ ರೆಕಗ್ನಿಶನ್, ಓಸಿಆರ್) ತಂತ್ರಜ್ಞಾನ ಈ ಪ್ರಶ್ನೆಗೆ ಉತ್ತರ ನೀಡಬಲ್ಲದು.

ತಂತ್ರಜ್ಞಾನ ಬಳಸಬಹುದು

ಶತಮಾನದಷ್ಟು ಹಿಂದೆ ಮುದ್ರಣವಾದ ಪುಸ್ತಕವಾದರೂ ಸರಿಯೇ, ಅದರ ಪುಟವನ್ನು ಸ್ಕ್ಯಾನ್ ಮಾಡಿ ಹಾಕಿದರೆ ಅಲ್ಲಿರುವ ಅಕ್ಷರಗಳನ್ನು ಗುರುತಿಸಿ ಪಠ್ಯರೂಪಕ್ಕೆ ಪರಿವರ್ತಿಸಿಕೊಡುವುದು ಈ ತಂತ್ರಜ್ಞಾನದ ಹೆಗ್ಗಳಿಕೆ. ಮರುಮುದ್ರಣಕ್ಕೆಂದು ಟೈಪ್ ಮಾಡುವ ಕೆಲಸ ತಪ್ಪಿಸುವುದಷ್ಟೇ ಅಲ್ಲ, ಪಠ್ಯವನ್ನು ಅಂತರಜಾಲಕ್ಕೆ ಅಳವಡಿಸಿ ಅಗತ್ಯ ಮಾಹಿತಿ ಹುಡುಕಿಕೊಳ್ಳುವ ವ್ಯವಸ್ಥೆ ನೀಡುವುದು – ಸಂಶೋಧನೆಗಾಗಿ ಆ ಪಠ್ಯವನ್ನು ತಂತ್ರಾಂಶಗಳ ನೆರವಿನಿಂದ ವಿಶ್ಲೇಷಿಸುವುದು ಮುಂತಾದ ಇನ್ನೂ ಅನೇಕ ಕೆಲಸಗಳನ್ನು ಈ ತಂತ್ರಜ್ಞಾನ ಬಳಸಿ ಸಾಧಿಕೊಳ್ಳಬಹುದು. ಮುದ್ರಿತ ಅಕ್ಷರಗಳಷ್ಟೇ ಅಲ್ಲದೆ ಕೈಬರಹದ ಪಠ್ಯವನ್ನು ಗುರುತಿಸುವ (ಹ್ಯಾಂಡ್ ರೈಟಿಂಗ್ ರೆಕಗ್ನಿಶನ್) ತಂತ್ರಜ್ಞಾನ ಕೂಡ ಇದೆ. ಕೈಬರಹದ ಛಾಯಾಚಿತ್ರದಿಂದ ಪ್ರಾರಂಭಿಸಿ ಟಚ್ ಸ್ಕ್ರೀನ್ ಮೇಲೆ ಗೀಚಿದ ಅಕ್ಷರಗಳವರೆಗೆ ಈ ತಂತ್ರಜ್ಞಾನ ಕೈಬರಹದ ವಿವಿಧ ರೂಪಗಳನ್ನು ಗುರುತಿಸಬಲ್ಲದು.

ಅನುವಾದ ಯಂತ್ರಾನುವಾದ (ಮಶೀನ್ ಟ್ರಾನ್ಸ್‌ಲೇಶನ್) ತಂತ್ರಜ್ಞಾನದ ಮೂಲಕ ಯಾವುದೇ ಭಾಷೆಯ ಪಠ್ಯವನ್ನು ಬೇರೆ ಯಾವುದೇ ಭಾಷೆಗೆ ಅನುವಾದಿಸಿಕೊಳ್ಳಬಹುದು. ಒಂದು ಭಾಷೆಯ ಪದಗಳಿಗೆ ಮತ್ತೊಂದು ಭಾಷೆಯ ಸಮಾನಾರ್ಥಕಗಳನ್ನು, ಅವೆರಡೂ ಭಾಷೆಗಳ ವ್ಯಾಕರಣವನ್ನು ಸರಿಯಾಗಿ ಅಳವಡಿಸಿಕೊಂಡ ತಂತ್ರಜ್ಞಾನ ಅವೆರಡೂ ಭಾಷೆಗಳನ್ನು ಸಮೃದ್ಧಗೊಳಿಸಬಲ್ಲದು. ಯಂತ್ರಾನುವಾದ ಕೈಗೊಳ್ಳುವ ತಂತ್ರಾಂಶಕ್ಕೆ ಮೂಲ ಪಠ್ಯವನ್ನು ಹಲವು ವಿಧಗಳಲ್ಲಿ ಒದಗಿಸಿಕೊಡುವುದು ಸಾಧ್ಯ. ಮೂಲ ಭಾಷೆಯಲ್ಲಿರುವ ಪಠ್ಯದ ಚಿತ್ರವನ್ನು ಒದಗಿಸುವುದು ಒಂದು ವಿಧವಾದರೆ ಆಕರ ಪಠ್ಯವನ್ನು ನೇರವಾಗಿ

ಸಾಮಾನ್ಯ ಬಳಕೆದಾರರ ಪಾತ್ರವೇನು?


ಮಾಹಿತಿ ತಂತ್ರಜ್ಞಾನದ ಹಲವು ಸವಲತ್ತುಗಳು ಈಗಾಗಲೇ ಕನ್ನಡದಲ್ಲಿ ದೊರಕುತ್ತಿವೆ, ತಂತ್ರಜ್ಞಾನ ಲೋಕದಲ್ಲಿ ನಮ್ಮ ಭಾಷೆಯ ಸಾಧ್ಯತೆಗಳನ್ನು ತೋರಿಸಿಕೊಡುತ್ತಿವೆ. ಈ ತಂತ್ರಜ್ಞಾನಗಳನ್ನು ಇನ್ನಷ್ಟು ಪರಿಣಾಮಕಾರಿಯಾಗಿ ಅಳವಡಿಸಿಕೊಳ್ಳುವುದರಲ್ಲಿ, ಸಕ್ರಿಯವಾಗಿ ಬಳಸಿ ನಮ್ಮ ಪ್ರತಿಕ್ರಿಯೆ ನೀಡುವುದರಲ್ಲಿ ನಮ್ಮ ಜವಾಬ್ದಾರಿ ಎಷ್ಟಿದೆ ಎನ್ನುವುದನ್ನೂ ನೆನಪಿಸುತ್ತಿವೆ. ಕನ್ನಡ–ತಂತ್ರಜ್ಞಾನದ ನಂಟು ಇನ್ನಷ್ಟು ಗಾಢವಾಗಿ ಬೆಸೆದುಕೊಳ್ಳುವಂತೆ ಮಾಡಲು ನಾವು ತಂತ್ರಜ್ಞರೇ ಆಗಿರಬೇಕು ಎಂದೇನೂ ಇಲ್ಲ. ಈಗಾಗಲೇ ಲಭ್ಯವಿರುವ ಸವಲತ್ತುಗಳ ಬಗ್ಗೆ ತಿಳಿದುಕೊಳ್ಳುವುದು, ಆ ಸವಲತ್ತುಗಳನ್ನು ಬಳಸುವುದು ಹಾಗೂ ಅವನ್ನು ನಮ್ಮ ಆಪ್ತರಿಗೆ ಪರಿಚಯಿಸುವುದರ ಮೂಲಕವೂ ನಾವು ನೆರವಾಗಬಹುದು. ತಂತ್ರಜ್ಞಾನದ ಬಗ್ಗೆ ಮಾಹಿತಿ ನೀಡುವ ಪುಸ್ತಕ, ಪತ್ರಿಕೆ ಹಾಗೂ ಜಾಲತಾಣಗಳನ್ನು ಪ್ರೋತ್ಸಾಹಿಸುವುದು ಕೂಡ ನಾವು ಮಾಡಬಹುದಾದ ಇನ್ನೊಂದು ಕೆಲಸ.

ವೈಜ್ಞಾನಿಕ ಜ್ಞಾನವನ್ನು ಕನ್ನಡನುಡಿಗೆ ತುಂಬಿ ಜನರ ಆಂಗ್ಲ ವ್ಯಾಮೋಹವನ್ನು ತಪ್ಪಿಸುವಲ್ಲಿ ನಮ್ಮ ವಿದ್ವಾಂಸರು ಪ್ರವೃತ್ತರಾಗಿರುವುದು ನೆಮ್ಮದಿಯ ಸಂಗತಿ.

❖ *ಪು. ತಿ. ನರಸಿಂಹಾಚಾರ್*


ಸಿರಿಗನ್ನಡಂ ಗೆಲ್ಗೆ
ಸಿರಿಗನ್ನಡಂ ಬಾಳ್ಗೆ
ಸಕ್ಕರೆ ನಾಡು ಮಂಡ್ಯದಲ್ಲಿ ನಡೆಯುವ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಆಗಮಿಸುವ ಕನ್ನಡ ಪ್ರೇಮಿಗಳಿಗೆ,ತುಂಬು ಹೃದಯದ ಸುಸ್ವಾಗತ....
ಅಕ್ಕರೆಯ ಸಕ್ಕರೆಯ ನಾಡಿನಲ್ಲಿ ನಡೆಯುವ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಆಗಮಿಸುತ್ತಿರುವ ಸಾಹಿತಿಗಳು, ಕವಿಗಳು, ಜನಪ್ರತಿನಿಧಿಗಳು ಮತ್ತು ಕನ್ನಡ ನಾಡಿನ ಸಮಸ್ತ ನಾಡಿನ ಜನತೆಗೆ ಹಾರ್ದಿಕ ಸ್ವಾಗತ.... ಸುಸ್ವಾಗತ.....
ಸ್ವಾಗತ ಕೋರುವವರು
ಶ್ರೀ ಚಲುವರಾಯಸ್ವಾಮಿ
ಕೃಷಿ ಸಚಿವರು ಹಾಗೂ
ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವರು
ಕರ್ನಾಟಕ ಸರ್ಕಾರ

ಟೈಪಿಸುವುದು ಇನ್ನೊಂದು ವಿಧಾನ. ಧ್ವನಿಯನ್ನು ಪಠ್ಯಕ್ಕೆ ಬದಲಿಸುವ (ಸ್ಪೀಚ್ ಟು ಟೆಕ್ಸ್ಟ್) ತಂತ್ರಜ್ಞಾನದ ಜೊತೆಗೆ ಯಂತ್ರಾನುವಾದ ಬಳಸಿದರೆ ಒಂದು ಭಾಷೆಯಲ್ಲಿ ಆಡಿದ ಮಾತುಗಳನ್ನು ಬೇರೊಂದು ಭಾಷೆಗೆ ಬದಲಿಸಿಕೊಳ್ಳುವುದೂ ಸಾಧ್ಯವಾಗುತ್ತದೆ. ಅನುವಾದ ಸಾಕಷ್ಟು ಸಂಕೀರ್ಣವಾದ ಪ್ರಕ್ರಿಯೆಯಾದ್ದರಿಂದ ಯಂತ್ರಾನುವಾದದ ನಿಖರತೆ ಕೊಂಚ ಕಡಿಮೆಯೇ ಇರುತ್ತದೆ. ಈ ಸಮಸ್ಯೆಯನ್ನು ಪರಿಣಾಮಕಾರಿಯಾಗಿ ನಿವಾರಿಸಿಕೊಳ್ಳಲು ಅನುವಾದದ ಕೆಲಸದಲ್ಲಿ ಯಂತ್ರದ ಸಾಮರ್ಥ್ಯದ ಜೊತೆಗೆ ಮಾನವರ ವಿವೇಚನೆಯನ್ನು ಪೂರಕವಾಗಿ ಬಳಸಿಕೊಳ್ಳುವ ಎಂಟಿಪಿಇ (ಮಶೀನ್ ಟ್ರಾನ್ಸ್



ಲೇಶನ್ ಪೋಸ್ಟ್ ಎಡಿಟಿಂಗ್) ಎಂಬ ಪ್ರಕ್ರಿಯೆಯೂ ಇದೀಗ ಪ್ರಚಲಿತಕ್ಕೆ ಬರುತ್ತಿದೆ.

ಸ್ಪೆಲಿಂಗ್ ಸರಿಪಡಿಸಲು ಸಹಾಯ

ಮಾನವ ಸಂಪಾದಕರು ಯಂತ್ರಾನುವಾದದ ಫಲಿತಾಂಶವನ್ನು ಪರಿಶೀಲಿಸಿ, ಬಳಕೆಗೆ ಮುನ್ನ ಅಗತ್ಯ ಬದಲಾವಣೆಗಳನ್ನು ಮಾಡಿಕೊಡುವುದು ಈ ಪ್ರಕ್ರಿಯೆಯ ಹೂರಣ. ಈ ಪ್ರಕ್ರಿಯೆಯ ಬಹುಪಾಲನ್ನು ಯಂತ್ರಾನುವಾದ ವ್ಯವಸ್ಥೆಯೇ ಮಾಡಿಕೊಡುವುದರಿಂದ ಒಟ್ಟಾರೆ ಕೆಲಸವನ್ನು ಬೇಗ ಮುಗಿಸುವುದು ಸಾಧ್ಯವಾಗುತ್ತದೆ. ಅಂದರೆ, ಎಂಟಿಪಿಇ ಬಳಸುವ ಮೂಲಕ ಕಡಿಮೆ ಸಮಯದಲ್ಲಿ ಹೆಚ್ಚು ಪಠ್ಯವನ್ನು ಅನುವಾದಿಸುವುದು ಸಾಧ್ಯವಾಗುತ್ತದೆ. ಈ ಪ್ರಕ್ರಿಯೆಯನ್ನು ಸುಲಭವಾಗಿಸುವ ವ್ಯವಸ್ಥೆಗಳೂ ಇವೆ. ಅನುವಾದದ ಕೆಲಸದಲ್ಲಿ ತಂತ್ರಜ್ಞಾನವನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳಲು ನೆರವಾಗುವ ಇಂತಹ ವ್ಯವಸ್ಥೆಗಳನ್ನು ಕಂಪ್ಯೂಟರ್ ಏಡೆಡ್ ಟ್ರಾನ್ಸ್ಲೇಶನ್ (ಸಿಎಟಿ) ಸಾಧನಗಳೆಂದು ಕರೆಯುತ್ತಾರೆ. ಪದಪರೀಕ್ಷೆ, ವ್ಯಾಕರಣ ಪರೀಕ್ಷೆ ಇಂಗ್ಲಿಷ್ ಪದಗಳನ್ನು ಟೈಪಿಸುವಾಗ ಏನಾದರೂ ಅಕ್ಷರದೋಷಗಳಿದ್ದರೆ ಅವನ್ನು ಕೆಂಪು ಅಡಿಗೆರೆಯ ಮೂಲಕ ಗುರುತಿಸುವ, ಸ್ಪೆಲಿಂಗ್ ಸರಿಪಡಿಸಲು ಸಹಾಯವನ್ನೂ ಮಾಡುವ ಸೌಲಭ್ಯಗಳನ್ನು ನಾವು ಹಲವು ತಂತ್ರಾಂಶಗಳಲ್ಲಿ, ಜಾಲತಾಣಗಳಲ್ಲಿ ಗಮನಿಸಿರುತ್ತೇವೆ. ಇಂತಹ ಸೌಲಭ್ಯವನ್ನು ಹಲವು ಕನ್ನಡ ಪದಸಂಸ್ಕಾರಕಗಳಲ್ಲಿ (ಉದಾ: ಪದ) ನೀಡಲಾಗಿದೆ.

ನಮ್ಮ ಪಠ್ಯದಲ್ಲಿರುವ ಬಹುತೇಕ ತಪ್ಪುಗಳನ್ನು ಗುರುತಿಸಲು, ಸರಿಯಾದ ರೂಪಕ್ಕೆ ಬದಲಿಸಿಕೊಳ್ಳಲು ಈ ಸೌಲಭ್ಯ ನೆರವಾಗುತ್ತದೆ. ಅಷ್ಟೇ ಅಲ್ಲ, ಮೊದಲ ಕೆಲ ಅಕ್ಷರಗಳನ್ನು ಟೈಪಿಸುತ್ತಿದ್ದಂತೆ ಆ ಅಕ್ಷರಗಳಿಂದ ಪ್ರಾರಂಭವಾಗುವ ಪದವನ್ನು ಸೂಚಿಸುವ ಸೌಲಭ್ಯವನ್ನೂ ಕೆಲವು ತಂತ್ರಾಂಶಗಳು (ಉದಾ: ಬರಹ) ಒದಗಿಸುತ್ತಿವೆ. ಇದೇ ರೀತಿಯಲ್ಲಿ ನಮ್ಮ ಪಠ್ಯದಲ್ಲಿರುವ ವ್ಯಾಕರಣ ದೋಷಗಳನ್ನು ಗುರುತಿಸುವ, ತಿದ್ದಿಕೊಳ್ಳುವ ಸೌಲಭ್ಯವನ್ನೂ ಒದಗಿಸುವುದು ಸಾಧ್ಯವಿದೆ. ಸಾಹಿತ್ಯದ ಡಿಜಿಟಲೀಕರಣ ಹೊಸ ಸಾಹಿತ್ಯದ ಸೃಷ್ಟಿ ಹಾಗೂ ಅನುವಾದಗಳ ಜೊತೆಗೆ ಹಿಂದಿನ ಬರಹಗಳನ್ನು ಉಳಿಸಿಡುವುದು ಕೂಡ ಮಹತ್ವದ ಕೆಲಸ. ಮುದ್ರಿತ ಪುಸ್ತಕಗಳನ್ನು ಡಿಜಿಟಲ್ ರೂಪಕ್ಕೆ ತಂದು ಉಳಿಸಿಡುವುದು, ಕೃತಿಸ್ವಾಮ್ಯ ಅವಧಿ ಮುಗಿದ ಪುಸ್ತಕಗಳನ್ನು ಮುಕ್ತವಾಗಿ ಪ್ರಕಟಿಸುವುದು, ಹಿಂದಿನ ಸಾಹಿತ್ಯವನ್ನು ವಿಶ್ಲೇಷಿಸಿ ಹೆಚ್ಚಿನ ಅಧ್ಯಯನ ಸಾಧ್ಯವಾಗಿಸುವುದು ಸೇರಿದಂತೆ ತಂತ್ರಜ್ಞಾನದ ನೆರವಿನಿಂದ ನಾವು ಅನೇಕ ಕೆಲಸಗಳನ್ನು ಮಾಡಿಕೊಳ್ಳುವುದು ಸಾಧ್ಯವಿದೆ.

ಈ ನಿಟ್ಟಿನಲ್ಲಿ ಸಕ್ರಿಯವಾಗಿರುವ ಸಂಸ್ಥೆಗಳ ಪೈಕಿ ಇಂಟರ್‌ನೆಟ್ ಆರ್ಕೈವ್ ಪ್ರಮುಖವಾದದ್ದು. ಜಾಲತಾಣಗಳು, ತಂತ್ರಾಂಶಗಳು, ಸಂಗೀತ, ವೀಡಿಯೊ ಮಾತ್ರವಲ್ಲದೆ ಹಳೆಯ ಪುಸ್ತಕ-ಪತ್ರಿಕೆಗಳ ಡಿಜಿಟಲ್ ಆವೃತ್ತಿಗಳನ್ನೂ ವ್ಯವಸ್ಥಿತವಾಗಿ ಉಳಿಸಿಡುವುದು ಈ ಸಂಸ್ಥೆಯ ಹೆಚ್ಚುಗಾರಿಕೆ. ವಿಶ್ವದೆಲ್ಲೆಡೆಯ ಹಲವು ಭಾಷೆಗಳ ಜೊತೆಗೆ ಈ ಸಂಸ್ಥೆ ಕನ್ನಡದ ಮಾಹಿತಿಯನ್ನೂ ಡಿಜಿಟಲ್ ಲೋಕದಲ್ಲಿ ಉಳಿಸಿಡುತ್ತಿದೆ. ಕಸ್ತೂರಿಯ ಹಳೆಯ ಸಂಚಿಕೆಗಳು, ಅಪರೂಪದ ಹಳೆಯ ಪುಸ್ತಕಗಳು ಸೇರಿದಂತೆ ಕನ್ನಡದ ಅಗಾಧ ಪ್ರಮಾಣದ ಮಾಹಿತಿ ಈ ತಾಣದಲ್ಲಿ ಲಭ್ಯವಿದೆ. ಸುಮ್ಮನೆ ಲಭ್ಯವಿರುವುದಷ್ಟೇ ಅಲ್ಲ, ಅವನ್ನೆಲ್ಲ ಉಚಿತವಾಗಿ ಬಳಸಿಕೊಳ್ಳುವ, ಅವುಗಳಲ್ಲಿರುವ ಮಾಹಿತಿಯಲ್ಲಿ ನಮಗೆ ಬೇಕಾದ್ದನ್ನು ಹುಡುಕಿಕೊಳ್ಳುವ ಅವಕಾಶವೂ ನಮಗಿದೆ. ಇದೇ ರೀತಿ ವಿಕಿಪೀಡಿಯ ಬಳಗದ 'ವಿಕಿಮೀಡಿಯ ಕಾಮನ್ಸ್' ಸಂಗ್ರಹದಲ್ಲೂ ಕನ್ನಡದ ಮಾಹಿತಿ ಸಾಕಷ್ಟು ಪ್ರಮಾಣದಲ್ಲಿ ಲಭ್ಯವಿದೆ. ಕನ್ನಡ ಸಾಹಿತ್ಯ ಪರಿಷತ್ತು ಕೂಡ ಕೆಲ ಅಪರೂಪದ ಪುಸ್ತಕಗಳನ್ನು ತನ್ನ ಜಾಲತಾಣದಲ್ಲಿ ಪ್ರಕಟಿಸಿದೆ. ಅಧ್ಯಯನ - ಸಂಶೋಧನೆ ಇತಿಹಾಸ, ಭಾಷೆ, ಸಂಸ್ಕೃತಿ, ವಿಜ್ಞಾನ - ಹೀಗೆ ಸಾಹಿತ್ಯವನ್ನು ಹಲವು ದೃಷ್ಟಿಕೋನಗಳಿಂದ ಅಧ್ಯಯನ ಮಾಡುವುದು ಸಾಧ್ಯ. ಕನ್ನಡದ ವಿಶಿಷ್ಟ ಸಾಹಿತ್ಯಪ್ರಕಾರಗಳಾದ ವಚನ ಹಾಗೂ ಕೀರ್ತನೆಗಳ ಅಧ್ಯಯನದಲ್ಲಿ ನೆರವಾಗುವ ಸವಲತ್ತುಗಳು ಇದೀಗ ಜಾಲಲೋಕದಲ್ಲಿ ಲಭ್ಯವಿವೆ.

'ವಚನ ಸಂಚಯ' ತಾಣ

ಸಾವಿರಾರು ವಚನಗಳನ್ನು ಒಂದೇಕಡೆ ಸಂಗ್ರಹಿಸಿಕೊಟ್ಟಿರುವ 'ವಚನ ಸಂಚಯ' ತಾಣ ಇಂತಹ ಸವಲತ್ತುಗಳಿಗೆ ಪ್ರಮುಖ ಉದಾಹರಣೆ. ನಿರ್ದಿಷ್ಟ ಪದವೊಂದನ್ನು ಯಾವ ವಚನಕಾರರು ಎಲ್ಲಿ, ಹೇಗೆ ಬಳಸಿದ್ದಾರೆ ಎನ್ನುವುದನ್ನೆಲ್ಲ ಇಲ್ಲಿ ಬಹಳ ಸುಲಭವಾಗಿ ಹುಡುಕಬಹುದು; ಆ ಮಾಹಿತಿಯನ್ನು ಭಾಷೆ, ಇತಿಹಾಸ ಮುಂತಾದ ಹಲವು ಕ್ಷೇತ್ರಗಳ ಸಂಶೋಧನೆಯಲ್ಲಿ ಬಳಸಬಹುದು. ಬಹಳಷ್ಟು ಸಂದರ್ಭಗಳಲ್ಲಿ ಮುದ್ರಣಕ್ಕಾಗಿಯಷ್ಟೆ ಕಂಪ್ಯೂಟರೀಕೃತವಾಗುವ ಪಠ್ಯದಿಂದ ಬೇರೆಬೇರೆ ರೀತಿಗಳಲ್ಲಿ ಹೇಗೆ ಪ್ರಯೋಜನ

ಒಳನೋಟ, ವಿಶ್ಲೇಷಣೆ, ಚಿಂತನೆಗಳಿಗೆ ಕರ್ನಾಟಕದಲ್ಲಿ ಯಾವತ್ತೂ ಕೊರತೆ ಇಲ್ಲ. ಕೊರತೆ ಇರುವುದು ಅವುಗಳನ್ನು ಕಾರ್ಯಗತಗೊಳಿಸಲು ಬೇಕಾದ ರಾಜಕೀಯ ಸಂಕಲ್ಪಶಕ್ತಿಯಲ್ಲಿ.

❖ ಎಸ್. ಎಲ್. ಭೈರಪ್ಪ

ಕನ್ನಡದಲ್ಲೇ ಪ್ರೋಗ್ರಾಮಿಂಗ್

ನಿರ್ದಿಷ್ಟ ವಿಷಯಕ್ಕೆ ಸಂಬಂಸಿದ ಮಾಹಿತಿಯನ್ನು ನಮ್ಮ ಅಗತ್ಯಕ್ಕೆ ತಕ್ಕಂತೆ ಸಿದ್ಧಪಡಿಸಿ ನೀಡುವ ಈ ಸಾಧನಗಳೂ ಇದೀಗ ಕನ್ನಡ ಕಲಿಯುತ್ತಿವೆ. ಗೂಗಲ್ ಸಂಸ್ಥೆ ರೂಪಿಸಿರುವ 'ಜೆಮಿನಿ ಎಐ' ಎಂಬ ಸಾಧನ ಈಗಾಗಲೇ ಕನ್ನಡದ ಪ್ರಶ್ನೆಗಳಿಗೂ ಉತ್ತರ ನೀಡಬಲ್ಲದು. ಕನ್ನಡದಲ್ಲೇ ಪ್ರೋಗ್ರಾಮಿಂಗ್ ಕನ್ನಡದ ಬಳಕೆದಾರರಿಗೆ ತಂತ್ರಜ್ಞಾನದ ಇಷ್ಟೆಲ್ಲ ಸವಲತ್ತುಗಳನ್ನು ಒದಗಿಸಲು ಅನೇಕ ಪರಿಣತರು ಸಾಕಷ್ಟು ಪ್ರೋಗ್ರಾಮುಗಳನ್ನು ಬರೆದಿರುತ್ತಾರೆ. ಬಹುತೇಕ ಪ್ರೋಗ್ರಾಮಿಂಗ್ ಭಾಷೆಗಳು ಇಂಗ್ಲಿಷಿನ ಪದಗಳನ್ನೇ ಬಳಸುತ್ತವಾದರೂ ಕೋಡಿಂಗ್ ಮಾಡಲು ಇಂಗ್ಲಿಷ್ ಲಿಪಿಯನ್ನೇ ಬಳಸಬೇಕೆಂಬ ನಿರ್ಬಂಧವೇನೂ ಇಲ್ಲ. ಸೂಕ್ತ ವ್ಯವಸ್ಥೆಗಳನ್ನು ಮಾಡಿಕೊಂಡರೆ ಇಂಗ್ಲಿಷ್ ಲಿಪಿಯಲ್ಲಿ ಕೋಡಿಂಗ್ ಮಾಡಿದಷ್ಟೇ ಸುಲಭವಾಗಿ ಕನ್ನಡ ಅಥವಾ ಬೇರಾವುದೇ ಲಿಪಿಯನ್ನೂ ಬಳಸುವುದು ಸಾಧ್ಯ. ಈ ನಿಟ್ಟಿನಲ್ಲಿ ಕೆಲ ಪ್ರಯತ್ನಗಳು ಈಗಾಗಲೇ ನಡೆದಿವೆ ಎನ್ನುವುದು ವಿಶೇಷ. ಕನ್ನಡದಲ್ಲೇ ಕೋಡಿಂಗ್ ಮಾಡುವುದನ್ನು ಸಾಧ್ಯವಾಗಿಸಿದ್ದ 'ಕರ್ಪೂರ' ಎಂಬ ತಂತ್ರಾಂಶವನ್ನು ಪ್ರೊ. ಬಿ.ಎ.ಪಾಟೀಲರು 1990ರ ದಶಕದಲ್ಲೇ ರೂಪಿಸಿದ್ದರು. ಇದೇ ರೀತಿ ಚಿಕ್ಕ ಮಕ್ಕಳಿಗೆ ಕೋಡಿಂಗ್ ಕಲಿಸಲು ಬಳಕೆಯಾಗುತ್ತಿದ್ದ 'ಲೋಗೋ' ಭಾಷೆಯನ್ನು ಡಾ. ಯು. ಬಿ. ಪವನಜ ಕನ್ನಡಕ್ಕೆ ತಂದಿದ್ದಾರೆ. ಮಕ್ಕಳಿಗೆ ಪ್ರೋಗ್ರಾಮಿಂಗ್ ಹೇಳಿಕೊಡಲು ವಿಶ್ವದೆಲ್ಲೆಡೆ ವ್ಯಾಪಕವಾಗಿ ಬಳಕೆಯಾಗುತ್ತಿರುವ 'ಸ್ಕ್ರ್ಯಾಚ್' ಅನ್ನು ಕನ್ನಡ ಭಾಷೆಯ ಮೂಲಕ ಮಕ್ಕಳಿಗೆ ಪರಿಚಯಿಸುವ ಕೆಲ ಪ್ರಯತ್ನಗಳೂ ಇದೀಗ ನಡೆದಿವೆ. ಮಾಹಿತಿ ತಂತ್ರಜ್ಞಾನ ಕುರಿತು ಮಾಹಿತಿ ಮಾಹಿತಿ ತಂತ್ರಜ್ಞಾನ ಕ್ಷೇತ್ರ ದಿನದಿನಕ್ಕೂ ಬದಲಾಗುತ್ತಿರುತ್ತದೆ.

ಪಡೆದುಕೊಳ್ಳಬಹುದು ಎನ್ನುವುದಕ್ಕೆ ವಚನ ಸಂಚಯ ಒಂದು ಉತ್ತಮ ಉದಾಹರಣೆ. ಇದೇ ರೀತಿ ದಾಸಸಾಹಿತ್ಯದ ಅಧ್ಯಯನದಲ್ಲಿ ನೆರವಾಗುವ 'ದಾಸಸಂಚಯ' ತಾಣ ಕೂಡ ಇದೆ. ಮಾಹಿತಿಯ ಮೂಲಗಳು ಆನ್‌ಲೈನ್ ವಿಶ್ವಕೋಶಗಳ ಪೈಕಿ ಅಪಾರ ಜನಪ್ರಿಯತೆ ಗಳಿಸಿಕೊಂಡಿರುವ ವಿಕಿಪೀಡಿಯ ಕನ್ನಡದಲ್ಲೂ ಇದೆ. ಯಾರು ಬೇಕಾದರೂ ತಮ್ಮ ಆಸಕ್ತಿಯ ವಿಷಯಗಳ ಕುರಿತು ಮಾಹಿತಿ ಸೇರಿಸಲು ಅನುವುಮಾಡಿಕೊಡುವುದು ಈ ತಾಣದ ವೈಶಿಷ್ಟ್ಯ. ಉದ್ದೇಶಪೂರ್ವಕವಾಗಿಯೋ ಮಾಹಿತಿಯ ಕೊರತೆಯಿಂದಲೋ ತಪ್ಪು ವಿವರಗಳು ವಿಕಿಪೀಡಿಯದಲ್ಲಿ ಆಗಿಂದಾಗ್ಗೆ ಸೇರಿಕೊಳ್ಳುತ್ತವೆ ಎನ್ನುವುದು ಇದೇ ವೈಶಿಷ್ಟ್ಯದ ಪರಿಣಾಮ; ಆದರೆ ತಪ್ಪು ಸರಿಪಡಿಸುವುದು ಕೂಡ ಯಾರು ಬೇಕಿದ್ದರೂ ಮಾಡಬಹುದಾದ ಕೆಲಸವಾದ್ದರಿಂದ ಈ ತಪ್ಪುಗಳನ್ನು ಕ್ಷಿಪ್ರವಾಗಿ ಗುರುತಿಸಿ ಸರಿಪಡಿಸುವುದೂ ಸಾಧ್ಯವಾಗುತ್ತದೆ.

ನಿಘಂಟುಗಳು ಬರಿಯ ವಿಶ್ವಕೋಶಗಳಷ್ಟೆ ಅಲ್ಲ

ವಿಕಿಪೀಡಿಯಕ್ಕೆ ಮಾಹಿತಿ ಸೇರಿಸುವುದು ಹೇಗೆ ಎನ್ನುವ ಬಗ್ಗೆ ಮಾರ್ಗದರ್ಶನವೂ ಆನ್‌ಲೈನ್‌ನಲ್ಲೇ ಸಿಗುತ್ತದೆ. ರಾಜ್ಯ ಸರಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ವಹಿಸುತ್ತಿರುವ 'ಕಣಜ' ಅಂತರಜಾಲ ಜ್ಞಾನಕೋಶ ಹಾಗೂ ಭಾರತ ಸರಕಾರ ರೂಪಿಸಿರುವ 'ಭಾರತವಾಣಿ', ಕನ್ನಡದಲ್ಲಿರುವ ಇನ್ನೆರಡು ವಿಶ್ವಕೋಶಗಳು. ನಿಘಂಟುಗಳು ಬರಿಯ ವಿಶ್ವಕೋಶಗಳಷ್ಟೆ ಅಲ್ಲ, ಕನ್ನಡದ ಹಲವಾರು ನಿಘಂಟುಗಳೂ ವಿಶ್ವವ್ಯಾಪಿ ಜಾಲದಲ್ಲಿವೆ. ಹಿರಿಯ ವಿದ್ವಾಂಸರಾದ ಪ್ರೊ. ಜೀವಿಯವರು ರಚಿಸಿದ ನಿಘಂಟುಗಳು ಮೊದಲಿಗೆ ಬರಹ ಜಾಲತಾಣದ ಮೂಲಕ ಉಚಿತವಾಗಿ ಲಭ್ಯವಾದವು. ಈ ನಿಘಂಟುಗಳಷ್ಟೇ ಅಲ್ಲದೆ ವಿಜ್ಞಾನ-ತಂತ್ರಜ್ಞಾನ ಪದಸಂಪದ, ಕೃಷಿ ವಿಜ್ಞಾನ ತಾಂತ್ರಿಕ ಪದಕೋಶ, ಪತ್ರಿಕಾ ಪದಕೋಶ, ಸಂಕ್ಷಿಪ್ತ ಆಡಳಿತ ಪದಕೋಶ ಮುಂತಾದ ಅನೇಕ ನಿಘಂಟುಗಳು ಕರ್ನಾಟಕ ಸರ್ಕಾರದ 'ಪದಕಣಜ' ಜಾಲತಾಣದಲ್ಲಿವೆ. 'ಭಾರತವಾಣಿ'ಯಲ್ಲೂ ಹಲವು ನಿಘಂಟುಗಳಿವೆ. ಶ್ರೀ. ವಿ. ಕೃಷ್ಣ ಅವರು ಸಿದ್ಧಪಡಿಸಿರುವ ಕನ್ನಡ - ಇಂಗ್ಲಿಷ್ ನಿಘಂಟು 'ಅಲ್ರ್' ಜಾಲತಾಣದ ಮೂಲಕ ಲಭ್ಯವಿದೆ. ಮೈಸೂರು ವಿವಿ ಹಾಗೂ ಕನ್ನಡ ಸಾಹಿತ್ಯ ಪರಿಷತ್ತು ಪ್ರಕಟಿಸಿರುವ ನಿಘಂಟುಗಳೂ ಜಾಲಲೋಕದಲ್ಲಿವೆ.

ಪುಸ್ತಕಗಳ ಹೊಸ ರೂಪ ಕಂಪ್ಯೂಟರಿನಲ್ಲಿ ಅಥವಾ ಮೊಬೈಲ್ ಫೋನ್-ಟ್ಯಾಬ್ಲೆಟ್ಟುಗಳಲ್ಲಿ ಓದಬಹುದಾದ ಪುಸ್ತಕಗಳನ್ನು 'ಇ-ಬುಕ್'ಗಳೆಂದು ಕರೆಯುವುದು ನಮಗೆ ಗೊತ್ತು. ಇಂಗ್ಲಿಷಿನ ಪುಸ್ತಕ-ಪತ್ರಿಕೆಗಳು ಹೀಗೆ ಡಿಜಿಟಲ್ ರೂಪದಲ್ಲಿ



ಪ್ರಕಟವಾಗಿ ಅಪಾರ ಜನಪ್ರಿಯತೆ ಗಳಿಸಿಕೊಂಡಿರುವುದನ್ನೂ ನಾವು ಕೇಳಿದ್ದೇವೆ. ಇಂತಹ ವ್ಯವಸ್ಥೆಗಳ ಮೂಲಕ ಕನ್ನಡ ಪುಸ್ತಕಗಳೂ ಲಭ್ಯವಾಗುತ್ತಿವೆ. ಓದುವ ಪುಸ್ತಕಗಳ ಜೊತೆಗೆ ಕನ್ನಡದ ಕೇಳು ಪುಸ್ತಕಗಳೂ (ಆಡಿಯೋಬುಕ್) ಇವೆ. ಹೆಸರಾಂತ ಲೇಖಕರ ಕತೆ - ಕಾದಂಬರಿಗಳ ಧ್ವನಿಮುದ್ರಣವನ್ನು ಇದೀಗ ವಿವಿಧ ಜಾಲತಾಣಗಳಲ್ಲಿ ಕೊಳ್ಳಬಹುದು, ಡೌನ್‌ಲೋಡ್ ಮಾಡಿಕೊಂಡು ಕೇಳಬಹುದು. ಎಐ ಮತ್ತು ಕನ್ನಡ ಇತ್ತೀಚಿನ ವರ್ಷಗಳಲ್ಲಿ ಅತ್ಯಂತ ಹೆಚ್ಚು ಕುತೂಹಲ ಮೂಡಿಸಿರುವ ಮಾಹಿತಿ ತಂತ್ರಜ್ಞಾನದ ಹೊಸ ಕ್ಷೇತ್ರಗಳಲ್ಲಿ ಆರ್ಟಿಫಿಶಿಯಲ್ ಇಂಟಲಿಜೆನ್ಸ್ (ಎಐ) ಕೂಡ ಒಂದು. ಅದರಲ್ಲೂ ವಿವಿಧ ಬಗೆಯ ಮಾಹಿತಿಯನ್ನು ತಮ್ಮಷ್ಟಕ್ಕೆ ತಾವೇ ರೂಪಿಸಬಲ್ಲ, 'ಜನರೇಟಿವ್ ಎಐ' ಎಂಬ ಗುಂಪಿಗೆ ಸೇರುವ, 'ಚಾಟ್ ಜಿಪಿಟಿ'ಯಂತಹ ತಂತ್ರಾಂಶ ಸಾಧನಗಳು ಇಡೀ ಪ್ರಪಂಚದ ಗಮನವನ್ನೇ ತಮ್ಮತ್ತ ಸೆಳೆದಿವೆ.

ಹೊಸ ಸಂಗತಿಗಳ ಕುರಿತು ತಿಳಿಯಬೇಕು

ಹೀಗಿರುವಾಗ ಇಲ್ಲಿನ ಹೊಸ ಸಂಗತಿಗಳ ಕುರಿತು ತಿಳಿದುಕೊಳ್ಳುತ್ತಲೇ ಇರುವುದು ಅನಿವಾರ್ಯ. ಅಂತಹ ಮಾಹಿತಿಯನ್ನು ಕನ್ನಡದಲ್ಲೇ ನೀಡುವ ಕೆಲವು ತಾಣಗಳಿವೆ. ಆದರೆ ಇಂತಹ ಬಹಳಷ್ಟು ತಾಣಗಳಲ್ಲಿ ದೊರಕುವ ಮಾಹಿತಿ ಕೇವಲ ಪರಿಚಯಾತ್ಮಕ ಹಂತದಲ್ಲಷ್ಟೇ ಇರುತ್ತದೆ. ಇದನ್ನು ಮೀರಿ, ಮಾಹಿತಿ ತಂತ್ರಜ್ಞಾನ ಕ್ಷೇತ್ರದ ಸಾಧ್ಯತೆಗಳು ಮತ್ತು ಅಲ್ಲಿನ ಅವಕಾಶಗಳ ಕುರಿತು ಕನ್ನಡದ ವಿದ್ಯಾರ್ಥಿಗಳಿಗೆ ಕನ್ನಡದಲ್ಲೇ ತಿಳಿಸಬೇಕಾದ್ದೂ ಇಂದಿನ ಅಗತ್ಯಗಳಲ್ಲೊಂದು. ಇದರಿಂದಾಗಿ ಅವರು ಎಲ್ಲರ ಜೊತೆಗೆ ಸಮಾನವಾಗಿ ಸ್ಪರ್ಧಿಸಬಹುದಲ್ಲದೆ, ಮಾಹಿತಿ ತಂತ್ರಜ್ಞಾನದ ಸವಲತ್ತುಗಳನ್ನು ನಮ್ಮ ಭಾಷೆಗೆ - ಪರಿಸರಕ್ಕೆ ಒಗ್ಗಿಸುವ ನಿಟ್ಟಿನಲ್ಲಿ ಪ್ರೇರೇಪಿತರಾಗುವ ಸಾಧ್ಯತೆಯೂ ಹೆಚ್ಚಿರುತ್ತದೆ. ಮೊದಲ ಬಾರಿಗೆ ಮಾಹಿತಿ ತಂತ್ರಜ್ಞಾನದ ಸಂಪರ್ಕಕ್ಕೆ ಬರುತ್ತಿರುವವರಿಗೆ ಅದರ ಎಲ್ಲ ಸವಲತ್ತುಗಳನ್ನೂ ಅವರ ಭಾಷೆಯಲ್ಲೇ ನೀಡುವ ನಿಟ್ಟಿನಲ್ಲಿ ಪ್ರಯತ್ನಗಳು ನಡೆದಿರುವ ಈ ಸಂದರ್ಭದಲ್ಲಿ ಇದು ಹಲವಾರು ವಿದ್ಯಾರ್ಥಿಗಳಿಗೆ ತಮ್ಮದೇ ಭಾಷೆಯಲ್ಲಿ, ತಮ್ಮದೇ ಭಾಷೆಗಾಗಿ ಕೆಲಸ ಮಾಡುವ ಅವಕಾಶವನ್ನೂ ಒದಗಿಸಬಲ್ಲದು. ಅಷ್ಟೇ ಏಕೆ, ಮಾಹಿತಿ ತಂತ್ರಜ್ಞಾನದ ವ್ಯಾಪ್ತಿ ಗ್ರಾಮೀಣ ಪ್ರದೇಶಗಳಲ್ಲೂ ಕ್ಷಿಪ್ರವಾಗಿ ವಿಸ್ತರಿಸುತ್ತಿರುವ ಈ ಕಾಲದಲ್ಲಿ ಅಲ್ಲಿನ ಗ್ರಾಹಕರನ್ನೇ ಗಮನದಲ್ಲಿಟ್ಟುಕೊಂಡ ನವೋದ್ಯಮಗಳ ಸ್ಥಾಪನೆ ಹಾಗೂ ಬೆಳವಣಿಗೆಗೂ ಇದು ಕಾರಣವಾಗಬಲ್ಲದು.

ಪೆಣ್ಣಲ್ಲವೆ ತಮ್ಮನೆಲ್ಲ ಪಡೆದ ತಾಯಿ । ಪೆಣ್ಣಲ್ಲವೆ ಪೊರೆದವಳು
ಪೆಣ್ಣುಪೆಣ್ಣೆಂದೇತಕೆ ಬೀಳುಗಳೆವರು । ಕಣ್ಣು ಕಾಣದ ಗಾವಿಲರು

ಸಂಚಿಯ ಹೊನ್ನಮ್ಮ

ಜಿಲ್ಲಾ ಉಸ್ತುವಾರಿ ಸಚಿವ ಎನ್‌.ಚಲುವರಾಯಸ್ವಾಮಿ ವಿಶೇಷ ಸಂದರ್ಶನ

ಸಮ್ಮೇಳನದ ನೆನಪಿಗೆ ಕನ್ನಡ ಭವನ



ಸಾಹಿತ್ಯ ಸಮ್ಮೇಳನ ಅರ್ಥಪೂರ್ಣ ಮತ್ತು ಭಿನ್ನವಾಗಿರಬೇಕು. ಕನ್ನಡದ ಕಂಪೂ ಪಸರಿಸಬೇಕು, ಹಣ ಉಳಿಸಿ ತಾಲೂಕು ಅಥವಾ ಜಿಲ್ಲಾ ಮಟ್ಟದಲ್ಲಿ ಕನ್ನಡ ಭವನ ಕಟ್ಟುವ ಚಿಂತನೆ. ಸಕ್ಕರೆ ನಾಡಿನಲ್ಲಿ ಕನ್ನಡದ ನುಡಿತೇರು ಎಳೆಯಲು,ಕನ್ನಡ ಕಂಪು ಪಸರಿಸುವ ಸಾಹಿತ್ಯ ಪರಿಷತ್ತಿನ ಸಡಗರ-ಸಂಭ್ರಮಕ್ಕೆ ರಾಜ್ಯ ಸರ್ಕಾರದ ನೆರವು ಇಂಬು ನೀಡಿದೆ. ಈ ಸಂದರ್ಭದಲ್ಲಿ 'ಉದಯವಾಣಿ' ಗೆ ಸಂದರ್ಶನ ನೀಡಿರುವ ಉಸ್ತುವಾರಿ ಸಚಿವರೂ ಆಗಿರುವ **ಎನ್‌.ಚಲುವರಾಯಸ್ವಾಮಿ** ಸಾಹಿತ್ಯ ಸಮ್ಮೇಳನದ ಸಂಭ್ರಮ ಇಮ್ಮಡಿಗೊಳಿಸುವ ಮಾತುಗಳನ್ನಾಡಿದ್ದಾರೆ.



❖ ದೇವೇಶ ಸೂರಗುಪ್ಪ

ಮುಖ್ಯ ವಿಷಯಬಿಟ್ಟು ಅಡ್ಡ ದಾರಿ ತುಳಿಯಬೇಡಿ. ಕೆಲಸಕ್ಕೆ ಬಾರದ ಹರಟೇಲೇ ಜನ ಮುದುಕರಾಗ್ತಾರೆ, ಕಾಲ ಸರಿಯುತ್ತಾ ಇರುತ್ತದೆ.

❖ *ಪೂರ್ಣಚಂದ್ರ ತೇಜಸ್ವಿ*

ಮೂವತ್ತು ವರ್ಷಗಳ ನಂತರ ಮಂಡ್ಯದಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನ ನಿಮ್ಮ ಉಸ್ತುವಾರಿಯಲ್ಲಿ ನಡೆಯುತ್ತಿದೆ. ಈ ಸಮ್ಮೇಳನವನ್ನು ಇತರೆ ಸಾಹಿತ್ಯ ಸಮ್ಮೇಳನಕ್ಕಿಂತ ಎಷ್ಟು ವಿಭಿನ್ನವಾಗಿ ಮಾಡಬೇಕೆಂದು ಯೋಚಿಸಿದ್ದೀರಿ?

ಈ ಹಿಂದೆ 1993ರಲ್ಲಿ ಮಂಡ್ಯದಲ್ಲಿ ಸಾಹಿತ್ಯ ಸಮ್ಮೇಳನ ನಡೆದಿತ್ತು. ಆಗ ನಾನು ಜಿಲ್ಲಾ ಪಂಚಾಯ್ತಿ ಉಪಾಧ್ಯಕ್ಷನಾಗಿ ಸಾಹಿತ್ಯ ಸಮ್ಮೇಳನ ನಡೆಸುವ ಅವಕಾಶ ಸಿಕ್ಕಿತ್ತು. ಆಗ ಅದರಲ್ಲಿ ಭಾಗವಹಿಸಿದ್ದೆ. ಈಗ ನಾನೇ ಸರ್ಕಾರದ ಭಾಗವಾಗಿದ್ದೇನೆ. ಜತೆಗೆ ಉಸ್ತುವಾರಿ ಸಚಿವನಾಗಿದ್ದು ಸಾಹಿತ್ಯ ಸಮ್ಮೇಳನ ನಡೆಸುವ ಮತ್ತೊಂದು ಅವಕಾಶ ಸಿಕ್ಕಿದೆ. ಪಕ್ಷಾತೀತವಾಗಿ ನಮ್ಮೆಲ್ಲ ಸಾರ್ವಜನಿಕ ಸಂಘಟನೆಗಳು, ಸಾಹಿತ್ಯ ಸಂಸ್ಥೆಗಳ ಜತೆಗೂಡಿ ಅದ್ದೂರಿಯಾಗಿ ಸಾಹಿತ್ಯ ಸಮ್ಮೇಳನ ನಡೆಸಲಾಗುವುದು. ರೈತರ ಗೋಷ್ಠಿಗಳು, ಯುವ ಗೋಷ್ಠಿಗಳು, ಮಂಡ್ಯ-ಮೈಸೂರು ಸಂಸ್ಕೃತಿಯ ಬಗ್ಗೆ ಹೆಚ್ಚು ಗೋಷ್ಠಿಗಳನ್ನು ಹಮ್ಮಿಕೊಳ್ಳಲಾಗಿದೆ. ಜತೆಗೆ ಎಲ್ಲಾ ಶಾಸಕರು, ಮಾಜಿ ಶಾಸಕರು ಮತ್ತು ಆದಿಚುಂಚನಗಿರಿ ಶ್ರೀಗಳು ಕೂಡ ಭಾಗಿಯಾಗಲಿದ್ದಾರೆ. ಮುಖ್ಯಮಂತ್ರಿಗಳು, ಉಪ ಮುಖ್ಯಮಂತ್ರಿಗಳು ಕೂಡ ಬಹಳ ಆಸಕ್ತಿಯಿಂದ ನಾವು ಕೇಳಿದ ತಕ್ಷಣ 25 ಕೋಟಿ ರೂ.ಬಿಡುಗಡೆ ಮಾಡಿದ್ದಾರೆ. ಸಮ್ಮೇಳನಾಧ್ಯಕ್ಷರ ಆಯ್ಕೆ ವಿಚಾರದಲ್ಲಿ ಉತ್ತಮ ಹೆಜ್ಜೆಯಿರಿಸಲಾಗಿದೆ. ಗೋ. ರು.ಚ ಆಯ್ಕೆ ಬಗ್ಗೆ ಪ್ರಶಂಸೆ ವ್ಯಕ್ತವಾಗುತ್ತಿದೆ. ಭಿನ್ನ ರೀತಿಯಲ್ಲಿ ಸಮ್ಮೇಳನ ನಡೆಸಲಾಗುವುದು.

• ನಿಮ್ಮ ಪ್ರಕಾರ ಈ ಸಮ್ಮೇಳನ ಯಾವ ಯಾವ ಕಾರಣಕ್ಕೆ ಭಿನ್ನವಾಗಿದೆ ಅನ್ನಿಸುತ್ತದೆ?

ಉತ್ತರ ಮತ್ತು ದಕ್ಷಿಣ ಕರ್ನಾಟಕದ ಜತೆಗೆ ನಮ್ಮ ಮಂಡ್ಯ ಜಿಲ್ಲೆಯ ಸಂಪ್ರದಾಯ ಏನಿದೆಯೋ ಆ ಎಲ್ಲಾ ಸಂಪ್ರದಾಯಗಳು ಈ ಸಾಹಿತ್ಯ ಸಮ್ಮೇಳನದಲ್ಲಿ ಇರಲಿವೆ. ಜತೆಗೆ ದುಬೈ, ಅಮೆರಿಕಾ ಸೇರಿದಂತೆ ಎಲ್ಲಾ ಕನ್ನಡ ಸಂಘಟನೆಗಳನ್ನು, ಹೊರನಾಡ ಕನ್ನಡಿಗರನ್ನು ಕೂಡ ಆಹ್ವಾನಿಸಲಾಗಿದೆ. ಸುವರ್ಣ ಕರ್ನಾಟಕ ಸಂಭ್ರಮದ ಹಿನ್ನೆಲೆಯಲ್ಲಿ ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಿದ 50 ಜನರನ್ನು ಸನ್ಮಾನಿಸಲಾಗುವುದು. ಜತೆಗೆ 87ನೇ ಅಖಿಲ ಕರ್ನಾಟಕ ಸಾಹಿತ್ಯ ಸಮ್ಮೇಳನದ ಹಿನ್ನೆಲೆಯಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ 87 ಜನ ಸಾಧಕರನ್ನು ಕೂಡ ಸನ್ಮಾನಿಸಲಾಗುತ್ತದೆ.

25 ಕೋಟಿ ರೂ.ಅಷ್ಟು ಭಾರೀ ಮೊತ್ತದ ಅನುದಾನ ಪಡೆದು ಸಾಹಿತ್ಯ ಸಮ್ಮೇಳನ ಆಚರಿಸುವ ಅಗತ್ಯ ಇದೆಯಾ?. ಮುಂದಿನ ದಿನಗಳಲ್ಲಿ ಇನ್ನೂ ಹೆಚ್ಚು ಅನುದಾನ ಕೇಳಲು ಇದು ಮೇಲ್ಪಂಕ್ತಿ ಹಾಕಿಕೊಟ್ಟಂತೆ ಆಗುವುದಿಲ್ಲವೇ?

ಈಗಾಗಲೇ ಸರ್ಕಾರ ಮಂಡ್ಯ ಸಾಹಿತ್ಯ ಸಮ್ಮೇಳನಕ್ಕಾಗಿ 25 ಕೋಟಿ ರೂ. ನೀಡಿದೆ. ಈ ಹಿಂದೆ ಹಾವೇರಿಯಲ್ಲಿ ನಡೆದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಕೂಡ ಸರ್ಕಾರ 25 ಕೋಟಿ ರೂ. ನೀಡಿತ್ತು. ಮಂಡ್ಯದಲ್ಲಿ ಖರ್ಚು ವೆಚ್ಚ ಹೆಚ್ಚಾಗಬಹುದು ಎಂಬ ಕಾರಣಕ್ಕೆ ಸಾಹಿತ್ಯ ಪರಿಷತ್ತು ಕೂಡ 30 ಕೋಟಿ ರೂ. ಅನುದಾನಕ್ಕೆ ಸರ್ಕಾರದ ಮುಂದಿಟ್ಟಿತ್ತು. ಆದರೆ ಈಗ 25 ಕೋಟಿ ರೂ. ಬಿಡುಗಡೆ ಮಾಡಿದೆ. ಅಂತಹದ್ದೇನಾದರೂ ಕಠಿಣ ಪರಿಸ್ಥಿತಿ ಇದ್ದರೆ ಅನುದಾನ ಹೆಚ್ಚಳ ಮಾಡೋಣ ಎಂದು ಮುಖ್ಯಮಂತ್ರಿಗಳು ಹೇಳಿದ್ದಾರೆ. ಆದರೆ ನಾವು ಇಷ್ಟೇ ಅನುದಾನದಲ್ಲಿ ಸಮ್ಮೇಳನ ಮಾಡಬೇಕು ಎಂದು ಮಿತಿ ಇಟ್ಟುಕೊಂಡಿಲ್ಲ. ಕಡಿಮೆ ಅನುದಾನದಲ್ಲಿ ಕೂಡ ಸಾಹಿತ್ಯ ಸಮ್ಮೇಳನ ಮುಗಿಸಬಹುದು.

• ಮಂಡ್ಯ ನಗರದಿಂದ 7 ಕಿ.ಮೀ ದೂರದಲ್ಲಿ ಸಮ್ಮೇಳನ ನಡೆಯುತ್ತಿದೆ. ಇದರಿಂದ ಸಮ್ಮೇಳನಕ್ಕೆ ಬರುವ ಜನರಿಗೆ,



87ನೇ ಸಾಹಿತ್ಯ ಸಮ್ಮೇಳನಾಧ್ಯಕ್ಷರಾಗಿ ಆಯ್ಕೆಯಾದ ಗೊರುಚ ಅವರಿಗೆ ಸಚಿವ ಚಲುವರಾಯಸ್ವಾಮಿ ಆಹ್ವಾನ ನೀಡಿದರು.

ಮಂಡ್ಯ ಜಿಲ್ಲಾ ಪ್ರವಾಸೋದ್ಯಮ ಅಭಿವೃದ್ಧಿಗೆ ಸಮ್ಮೇಳನ ಎಷ್ಟು ಪೂರಕ?

ಮಂಡ್ಯ ಪ್ರವಾಸೋದ್ಯಮಕ್ಕೂ ಸಾಹಿತ್ಯ ಸಮ್ಮೇಳನ ಅನುಕೂಲವಾಗಲಿದೆ. ಮಂಡ್ಯ ಜಿಲ್ಲೆ ಹಾಗೂ ಸುತ್ತಮುತ್ತ ಪ್ರವಾಸಿ ತಾಣಗಳ ಬಗ್ಗೆ ಬೆಳಕು ಚೆಲ್ಲುವ ಗೋಷ್ಠಿಯನ್ನೂ ಸಮ್ಮೇಳನದಲ್ಲಿ ಇಡಲಾಗಿದೆ. ಇದಲ್ಲದೆ, ಕೆಆರ್‌ಎಸ್, ರಂಗನತಿಟ್ಟು, ಮೇಲುಕೋಟೆಸೇರಿದಂತೆ ಹಲವು ಪ್ರವಾಸಿ ತಾಣಗಳು ಇವೆ. ಈ ಎಲ್ಲಾ ಪ್ರವಾಸಿ ತಾಣಗಳನ್ನು ಸಂಪರ್ಕಿಸುವ ರೀತಿಯಲ್ಲಿ ವಿಶೇಷ ಸಾರಿಗೆ ವ್ಯವಸ್ಥೆಯನ್ನು ಸಮ್ಮೇಳನದ ಸಂದರ್ಭದಲ್ಲಿ ಮಾಡಲು ಸಾಧ್ಯವೇ ಎಂಬುದನ್ನೂ ಯೋಚಿಸಲಾಗುತ್ತಿದೆ.

ಹುದ್ದೆ, ಮುದ್ದೆ, ನಿದ್ದೆಗಳ ನಿರಂತರ ಸೆಣಸಾಟವೇ ಬದುಕಿನ ಉದ್ದೇಶವೆಂದು ಈಗಿನ ಜನರು ಬಗೆದಿದ್ದಾರೆ. ಅವರಿಗೆ ಹಿಂದಿನವರ ಧ್ಯೇಯಾದರ್ಶ, ದೇಶ ಭಾಷೆಗಳ ಬಗೆಗಿನ ಸೇವಾತತ್ಪರತೆ ಮನದಟ್ಟಾಗಬೇಕು.

❖ *ಕೆ. ಎಸ್. ನಿಸಾರ್ ಅಹಮದ್*


87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ
ಸಕ್ಕರೆ ನಾಡು ಮಂಡ್ಯದಲ್ಲಿ ನಡೆಯುವ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಆಗಮಿಸುವ ಕನ್ನಡ ಪ್ರೇಮಿಗಳಿಗೆ, ಎಲ್ಲಾ ರೈತರ ಬಾಂಧವರಿಗೆ ತುಂಬು ಹೃದಯದ ಸುಸ್ವಾಗತ.....
ಶುಭ ಕೋರುವವರು:
ದರ್ಶನ್ ಪುಟ್ಟಣ್ಣಯ್ಯ
ಶಾಸಕರು
ಮೇಲುಕೋಟೆ ವಿಧಾನಸಭಾ ಕ್ಷೇತ್ರ
ಪಾಂಡವಪುರ ತಾಲ್ಲೂಕು, ಮಂಡ್ಯ ಜಿಲ್ಲೆ



ಅದರಲ್ಲೂ ಹೆಂಗಸರು- ಮಕ್ಕಳು ಮತ್ತು ಹಿರಿಯರಿಗೆ ತೊಂದರೆ ಆಗುವುದಿಲ್ಲವೇ?

ಸಾಹಿತ್ಯ ಸಮ್ಮೇಳನ ನಡೆಯುವ ಸ್ಥಳ ಮಂಡ್ಯದಿಂದ ಹೆಚ್ಚೇನೂ ದೂರವಿಲ್ಲ. ಆ ಹಿನ್ನೆಲೆಯಲ್ಲಿ ಮಂಡ್ಯದಿಂದ ಸಾಹಿತ್ಯ ಸಮ್ಮೇಳನ ಸ್ಥಳಕ್ಕೆ ಹೋಗಲು ಜನರಿಗೆ ಉಚಿತ ಬಸ್ ವ್ಯವಸ್ಥೆ ಮಾಡಲಾಗಿದೆ. ಜತೆಗೆ ಮೈಸೂರಿನಿಂದ ಮಂಡ್ಯಕ್ಕೆ ಬರುವವರಿಗೆ ಅನುಕೂಲವಾಗಲಿ ಎಂಬ ಉದ್ದೇಶದಿಂದ ವಿಶೇಷ ಬಸ್ ವ್ಯವಸ್ಥೆಯನ್ನು ಮಾಡಲಾಗಿದೆ. ಮೂರು ದಿನಗಳ ಕಾಲ ವಿಶೇಷ ಬಸ್ ಗಳು ಮಂಡ್ಯ-ಮೈಸೂರು ನಡುವೆ ಓಡಾಟ ನಡೆಸಲಿವೆ. ಈಗ ಸುಮಾರು 80 ಎಕರೆ ಪ್ರದೇಶದಲ್ಲಿ ಸಾಹಿತ್ಯ ಸಮ್ಮೇಳನ ನಡೆಯುತ್ತಿದೆ. ಆದರೆ ಮಂಡ್ಯ ಸಿಟಿಯಲ್ಲಿ ಅಷ್ಟೊಂದು ದೊಡ್ಡ ಪ್ರಮಾಣ ಜಾಗ ಸಿಗುವುದಿಲ್ಲ. ಹಾವೇರಿ ಸಾಹಿತ್ಯ ಸಮ್ಮೇಳನದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಜನರು ಸೇರಿದ್ದರು. ಜತೆಗೆ ಸಮಾನಾಂತರ ವೇದಿಕೆಗಳಲ್ಲಿ ಗೋಷ್ಠಿಗಳು ನಡೆಯಬೇಕು. ಒಂದು ದಿನವಾದರೆ ಏನಾದರೂ ಮಾಡಬಹುದು. ಮೂರು ದಿನವಾದರೆ ಕಷ್ಟವಾಗುತ್ತದೆ. ಆ ಹಿನ್ನೆಲೆಯಲ್ಲಿ ಮಂಡ್ಯದ ನಗರ ಹೊರ ಪ್ರದೇಶದಲ್ಲಿ ಸಾಹಿತ್ಯ ಸಮ್ಮೇಳನ ಆಯೋಜಿಸಲಾಗಿದೆ. ಜನರಿಗೆ ತೊಂದರೆ ಆಗದ ರೀತಿಯಲ್ಲಿ ಸೌಲಭ್ಯ ಕಲ್ಪಿಸಲಾಗುವುದು.

• ಈ ಹಿಂದೆ ಮಂಡ್ಯದಲ್ಲಿ ನಡೆದ ಸಮ್ಮೇಳನದ ಸಂದರ್ಭದಲ್ಲಿ ಅನುದಾನದ ಹಣವನ್ನು ಎಚ್ಚರದಿಂದ ಬಳಸಿ, ಸಮ್ಮೇಳನ ಮುಗಿದ ನಂತರ ಆಧುನಿಕ ಮಂಡ್ಯದ ಶಿಲ್ಪಿ ಕೆ.ವಿ.ಶಂಕರ ಗೌಡರ ಪುತ್ಥಳಿ ನಿರ್ಮಿಸಲಾಯಿತು. ರೈತ ಸಭಾಂಗಣಕ್ಕೆ ಹೊಸ ರೂಪ ನೀಡಲಾಯಿತು. ಈ ಬಾರಿ ನಿಮ್ಮ ಯೋಜನೆ ಏನಿದೆ?

ಹಲವು ಜನರು ಭಿನ್ನ ರೀತಿಯ ಸಲಹೆಗಳನ್ನು ನೀಡಿದ್ದಾರೆ. ಕೆಲವರು ಜಿಲ್ಲೆಯ ಏಳೂ ತಾಲೂಕುಗಳಲ್ಲಿ ಸಾಹಿತ್ಯ ಪರಿಷತ್ತಿನ ಕಚೇರಿ ಆಗಬೇಕು. ಕೆಲವರು ಕೇಂದ್ರಸ್ಥಳವಾದ ಮಂಡ್ಯದಲ್ಲಿ ಕನ್ನಡ ಭವನ ಕಟ್ಟಿ ಎನ್ನುತ್ತಿದ್ದಾರೆ. 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ನೆನಪಿನಲ್ಲಿ ಕನ್ನಡಭವನ ಕಟ್ಟುವುದು ಸೇರಿದಂತೆ ಹಲವು ಆಲೋಚನೆಗಳಿವೆ. ಶಾಸಕರ ಮತ್ತು ಜಿಲ್ಲಾಡಳಿತದ ಸಲಹೆ ಪಡೆದು ಮುಖ್ಯಮಂತ್ರಿಗಳ ಜತೆಗೂ ಮಾತನಾಡುತ್ತೇನೆ.

ಸಾಹಿತ್ಯ ಸಮ್ಮೇಳನದ ನಿರ್ಣಯಗಳು ಹೆಚ್ಚಿದ್ದರೆ ಅವುಗಳನ್ನು ಸರ್ಕಾರ ಅನುಷ್ಠಾನ ಗೊಳಿಸುವುದು ಕಷ್ಟವಾಗುತ್ತದೆ. ಒಂದೆರಡು ಇದ್ದರೆ ಅನುಷ್ಠಾನ ಸರ್ಕಾರಕ್ಕೂ ಸುಲಭವಾಗುತ್ತದೆ. ಈ ಹಿನ್ನೆಲೆಯಲ್ಲಿ ಮಂಡ್ಯ ಸಾಹಿತ್ಯ ಸಮ್ಮೇಳನದಲ್ಲಿ ಒಂದೆರಡು ನೆನಪಿನಲ್ಲಿ ಉಳಿಯುವಂತಹ ನಿರ್ಣಯಗಳನ್ನು ಅಂಗೀಕರಿಸಲಾಗುವುದು.

• ಸಾಹಿತ್ಯ ಸಮ್ಮೇಳನದಲ್ಲಿ ಬಾಡೂಟ ವಿಚಾರವಾಗಿ ಚರ್ಚೆ ನಡೆಯುತ್ತಿದೆಯಲ್ಲ?

ಜನರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುವ ನಿಟ್ಟಿನಲ್ಲಿ ಕೆಲಸ ನಡೆಯಲಿದೆ. ಆದರೆ, ಆಹಾರ ಅವರವರ ಆಯ್ಕೆಯಾಗಿದೆ. ಇಂತಹದ್ದೆ ಆಹಾರ ತಿನ್ನಿ ಎಂದು ಹೇಳಲಾಗದು. ಹಾಗೆಂದು ಮಾಂಸಾಹಾರ ಸೇವನೆ ಮಾಡಬಾರದು ಎಂದು ಹೇಳುವ ಪ್ರಶ್ನೆಯೇ ಇಲ್ಲ. ಸಾಹಿತ್ಯ ಸಮ್ಮೇಳನದಂತಹ ದೊಡ್ಡ ಸಮಾರಂಭ ಮಾಡುವುದಾದರೆ ನಿರ್ವಹಣೆ ಮಾಡುವುದು ತುಂಬಾ ಕಷ್ಟ. ನಮ್ಮ ಮನೆಗಳಲ್ಲೇ ಸಣ್ಣ ರೀತಿಯಲ್ಲಿ ಬೀಗರ ಊಟ ಮಾಡಿದರೇ ಉತ್ತಮ ರೀತಿಯ ಊಟೋಪಚಾರ ನೀಡುವುದು ಕಷ್ಟವಾಗುತ್ತದೆ. ಈ ಹಿನ್ನೆಲೆಯಲ್ಲಿ ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಮುಂದುವರಿಯುತ್ತೇನೆ.



• ಸಾಹಿತ್ಯ ಸಮ್ಮೇಳನದಲ್ಲಿ ಅಂಗೀಕರಿಸಿದ ನಿರ್ಣಯಗಳು ನಿರ್ಣಯಗಳಾಗಿಯೇ ಉಳಿದು ಬಿಡುತ್ತವೆ ಎಂಬ ಮಾತಿದೆ. ಇದಕ್ಕೆ ಏನು ಹೇಳುವಿರಿ?

ಸಾಹಿತ್ಯ ಸಮ್ಮೇಳನದ ನಿರ್ಣಯಗಳು ಹೆಚ್ಚಿದ್ದರೆ ಅವುಗಳನ್ನು ಸರ್ಕಾರ ಅನುಷ್ಠಾನ ಗೊಳಿಸುವುದು ಕಷ್ಟವಾಗುತ್ತದೆ. ಒಂದೆರಡು ಇದ್ದರೆ ಅನುಷ್ಠಾನ ಸರ್ಕಾರಕ್ಕೂ ಸುಲಭವಾಗುತ್ತದೆ. ಈ ಹಿನ್ನೆಲೆಯಲ್ಲಿ ಮಂಡ್ಯ ಸಾಹಿತ್ಯ ಸಮ್ಮೇಳನದಲ್ಲಿ ಒಂದೆರಡು ನೆನಪಿನಲ್ಲಿ ಉಳಿಯುವಂತಹ ನಿರ್ಣಯಗಳನ್ನು ಅಂಗೀಕರಿಸಲಾಗುವುದು. ◆

ವಾಸ್ತವ ಮತ್ತು ಆದರ್ಶಗಳ ಸಂಘರ್ಷದ ಪ್ರಸ್ತಾಪ ಮಾಡುವಾಗ ನನಗೆ ಬದುಕು ಮತ್ತು ಕಲೆಯ ನಡುವಿನ ಇಂದಿನ ವಿಷಮ ನೆಲೆಯೂ ಕಾಡುವುದು.

❖ ಡಾ. ಎಚ್.ಎಸ್. ವೆಂಕಟೇಶಮೂರ್ತಿ

ಕನ್ನಡದಲ್ಲೂ ಮಾರ್ಕೆಟಿಂಗ್‌ಗೆ ಅವಕಾಶ ಸಿಗಬೇಕು





❖ ನರೇಂದ್ರ ರೈ ದೇರ್ಲ, ಪುತ್ತೂರು

ಕನ್ನಡದ ಬೆಳವಣಿಗೆಗೆ ಭಾಷಾ ಮಾಧ್ಯಮವೇ ಶತ್ರು

ಈ ಹಿಂದೆ ಮೂರು ತಲೆಮಾರು ಕಲಿತ ಶಾಲೆಗಳಿದ್ದವು

ಕನ್ನಡದಲ್ಲಿ ಓದಿದರೆ ನಮ್ಮ ಮಕ್ಕಳಿಗೆ ಭವಿಷ್ಯ ಇಲ್ಲ, ಭಾಷೆಯೂ ಸೇರಿ ಮಾನವಿಕ ವಿಷಯಗಳ ಪದವಿಗಳಿಗೂ ವಿದ್ಯಾರ್ಥಿಗಳು ಸೇರುವುದಿಲ್ಲ, ವಿಶ್ವವಿದ್ಯಾನಿಲಯದ ಕನ್ನಡ ವಿಭಾಗ ಭಾಗಶಃ ಖಾಲಿ ಸುರಿಯುತ್ತಿದೆ, ಕನ್ನಡ ಐಚ್ಛಿಕಕ್ಕೆ ಮಕ್ಕಳೇ ಇಲ್ಲ; ಈ ಎಲ್ಲಾ ಸಮಸ್ಯೆಗಳಿಗೂ ಅವರು ಓದುತ್ತಿರುವ ಕನ್ನಡ ಮಾಧ್ಯಮವೇ ಕಾರಣ ಎಂಬ ಆರೋಪ ಅವ್ಯಾಹತವಾಗಿದೆ. ಹೋಬಳಿ ಸಾಹಿತ್ಯ ವೇದಿಕೆ ಗಳಿಂದ ಹಿಡಿದು ರಾಷ್ಟ್ರ ಸಾಹಿತ್ಯ ಸಮ್ಮೇಳನದ ಮಹಾವೇದಿಕೆಗಳಲ್ಲೂ ವಿಶ್ವವಿದ್ಯಾ ನಿಲಯಗಳ ಗಂಭೀರ ಗೋಷ್ಠಿಗಳಲ್ಲೂ ಈ ಸಮಸ್ಯೆ ಬಾಯಿಯಾಗುತ್ತಿರುವುದನ್ನು ನಾನು ಇತ್ತೀಚಿಗೆ ಕೇಳಿದ್ದೇನೆ.

ಮೊನ್ನೆ ಮೊನ್ನೆ ಕನ್ನಡದ ಹಿರಿಯ ಲೇಖಕರೊಬ್ಬರು ಯಾವ ಕನ್ನಡ ನನ್ನ ಮಗುವಿನ ಭವಿಷ್ಯಕ್ಕೆ ಭದ್ರತೆಯನ್ನು ನೀಡುವುದಿಲ್ಲವೋ ಆ ಮಾಧ್ಯಮ ನಮಗೆ ಬೇಕಾ ಎಂದು ಪ್ರಶ್ನಿಸಿದ್ದನ್ನು ಕೇಳಿದ್ದೇನೆ.

ನಮ್ಮ ನೆಲವಿದು ಹೊನ್ನ ನೆಲವಿದು ಚೆಲುವ ಕನ್ನಡ ನಾಡಿದು
ತಾಯಿ ಭಾರತಿ ಮಮತೆ ಮಡಿಲಿನ ಕುವರಿ ಬೆಡಗಿನ ಬೀಡಿದು.

❖ *ಎಂ. ಎನ್. ವ್ಯಾಸರಾವ್*

87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಹಾರ್ದಿಕ ಸ್ವಾಗತ

ಸಾಧನೆಗಳು ಮಾತನಾಡಬೇಕೇ ಹೊರತು ಮಾತೇ ಸಾಧನೆಯಾಗಬಾರದು ಎನ್ನುವ ಮಾತಿನಂತೆ ಶಾಸಕ ಪಿ.ಎಂ.ನರೇಂದ್ರಸ್ವಾಮಿ ಅವರು ಮಳವಳ್ಳಿ ತಾಲ್ಲೂಕಿನ ಸಮಗ್ರ ಅಭಿವೃದ್ಧಿ ಸಾವಿರಾರು ಕೋಟಿ ರೂ.ಅನುದಾನ ತಂದು ಶಿಕ್ಷಣ, ಆರೋಗ್ಯ, ನೀರಾವರಿ ಸೇರಿದಂತೆ ಮೂಲಭೂತ ಸೌಕರ್ಯಗಳಿಗೆ ಒತ್ತು ನೀಡುವ ಮೂಲಕ ತಮ್ಮ ಶಾಸಕ ಸ್ಥಾನದ ಹಿರಿಮೆಗೆ ಹೆಚ್ಚಿಸಿದ್ದಾರೆ.

ಮಳವಳ್ಳಿ ಪಟ್ಟಣದಲ್ಲಿ 8 ಕೋಟಿ ರೂ. ವೆಚ್ಚದಲ್ಲಿ 600 ಆಸನವುಳ್ಳ ಡಾ.ಬಿ.ಆರ್.ಅಂಬೇಡ್ಕರ್ ಭವನ ನಿರ್ಮಾಣ ಮಾಡಿದ್ದಾರೆ. ವಿದ್ಯಾರ್ಥಿಗಳಿಗೆ ತರಬೇತಿ, ಸಾಂಸ್ಕೃತಿಕ ಕಾರ್ಯಕ್ರಮ ಸೇರಿದಂತೆ ಮಹಾನೀಯರ ಜಯಂತಿಗಳನ್ನು ಆಚರಿಸಲು ಸೂಕ್ತ ವೇದಿಕೆ ಎನಿಸಿಕೊಂಡಿದೆ. ಸದ್ಯದಲ್ಲಿಯೇ ಪ್ರವಾಸಿ ಮಂದಿರ ಬಳಿ ಡಾ.ಬಿ.ಆರ್.ಅಂಬೇಡ್ಕರ್ ವೃತ್ತದ ಬಳಿ ಮಂಟಪ ಮತ್ತು ಬಾಬಾ ಸಾಹೇಬರ ಪುತ್ಥಳಿ ನಿರ್ಮಾಣ ಮಾಡುವ ಗುರಿ ಹೊಂದಿದ್ದಾರೆ. ರಸ್ತೆಬದಿಯ ಮೀನು ಮಾರಾಟ ತಪ್ಪಿಸಿ ಮೀನುಗಾರರಿಗೆ ಆಧುನಿಕ ಸುಸಜ್ಜಿತ ಮೀನು ಮಾರುಕಟ್ಟೆ ಸೌಲಭ್ಯ ಒದಗಿಸಿದ್ದಾರೆ.

ಸಾರ್ವಜನಿಕ ಆಸ್ಪತ್ರೆಗೆ ಹೈಟೆಕ್ ಸ್ಪರ್ಶ ನೀಡಿ ಅಲ್ಲಿಯೇ 10 ಕೋಟಿ ರೂ.ವೆಚ್ಚದಲ್ಲಿ ಮಹಿಳಾ ಮತ್ತು ಮಕ್ಕಳ ಆಸ್ಪತ್ರೆ ನಿರ್ಮಾಣ ಮಾಡಿ ತಾಯಿ, ನವಜಾತ ಶಿಶು ಮತ್ತು ಅಪೌಷ್ಠಿಕ ಮಕ್ಕಳ ಹಾರೈಕೆಗೆ ಸವಲತ್ತು ನೀಡಲಾಗಿದೆ. ಅಕ್ಕಮಹಾದೇವಿ ಅವರ ಹೆಸರಿನಲ್ಲಿ ಸ್ತ್ರೀಶಕ್ತಿ ಭವನ ನಿರ್ಮಿಸಿ ಸಾವಿರಾರು ಮಹಿಳೆಯರಿಗೆ ಸ್ವಯಂ ಉದ್ಯೋಗ ತರಬೇತಿಗೆ ಅನುಕೂಲ ಮಾಡಿಕೊಟ್ಟಿದ್ದಾರೆ.

ತಿಟ್ಟಮಾರನಹಳ್ಳಿ ಏತನೀರಾವರಿ ಯೋಜನೆ, ನೆನೆಗುದಿಗೆ ಬಿದ್ದಿದ್ದ ಸುರುಗಿತೋಪು, ಮಲ್ಲಿಕ್ಯಾತನಹಳ್ಳಿ, ಡಿ.ಹಲಸಹಳ್ಳಿ, ಗಾಣಾಳು, ಇಳಕಲ್ಮಡು, ನಂಜಾಪುರ ಹಾಗೂ ತೊರೆಕಾಡನಹಳ್ಳಿ ಏತ ನೀರಾವರಿ ಯೋಜನೆಗೆ ಚಾಲನೆ, ಹಲಗೂರು ಹೋಬಳಿಯ 26 ಕೆರೆಗಳಿಗೆ 10.50 ಕೋಟಿ ರೂ. ವೆಚ್ಚದಲ್ಲಿ ಭೀಮಾ ಜಲಾಶಯದಿಂದ ನೀರು ಹರಿಸುವ ಯೋಜನೆಯನ್ನು ಅನುಷ್ಠಾನಗೊಳಿಸಲಾಗಿದೆ.

ಮಳವಳ್ಳಿ ಪಟ್ಟಣದ ಮೈಸೂರು ರಸ್ತೆ ಅಗಲೀಕರಣಗೊಳಿಸಿ ದ್ವಿಪಥ ರಸ್ತೆಯನ್ನಾಗಿ ಅಭಿವೃದ್ಧಿಪಡಿಸಲಾಗಿದೆ. ಮದ್ದೂರು ಎಪಿಎಂಸಿಯಿಂದ ಮಳವಳ್ಳಿ ವ್ಯಾಪ್ತಿಯನ್ನು ಹೊರತಂದು ಪ್ರತ್ಯೇಕ ಎಂಪಿಎಂಸಿ ನಿರ್ಮಿಸಿ 15 ಕೋಟಿ ರೂ.ವೆಚ್ಚದಲ್ಲಿ ಮಾರುಕಟ್ಟೆ ಅಭಿವೃದ್ಧಿ, ಸಾರಿಗೆ ವಾಹನ ಚಾಲನಾ ತರಬೇತಿ ಶಾಲೆ ಸ್ಥಾಪಿಸಿ ತರಬೇತಿಗೆ ಅನುಕೂಲ ಕಲ್ಪಿಸಿ ವಿವಿಧ ಸೌಲಭ್ಯಗಳೊಂದಿಗೆ ಯುವಕರು ತರಬೇತಿ ಪಡೆಯಲು ವ್ಯವಸ್ಥೆ. ದೊಡ್ಡಕೆರೆ ದಡವನ್ನು ಆಧುನೀಕರಣಗೊಳಿಸಿ ವಾಕಿಂಗ್ ಟ್ರಾಕ್, ಸುಂದರ ಪಾರ್ಕ್ ನಿರ್ಮಾಣ. ಪಟ್ಟಣಕ್ಕೆ 74 ಕೋಟಿ ರೂ. ವೆಚ್ಚದಲ್ಲಿ ಶಾಶ್ವತವಾಗಿ ಕುಡಿಯುವ ನೀರಿನ ಸೌಲಭ್ಯ. ಸುಮಾರು 50 ಕೋಟಿ ರೂ.ವೆಚ್ಚದಲ್ಲಿ ಕಿರುಗಾವಲು ಬಹುಗ್ರಾಮ ಕುಡಿಯುವ ನೀರಿನ ಯೋಜನೆ ಜಾರಿ. ಪಟ್ಟಣದ ಹೊರವಲಯದ ಮಾಗನೂರು ಬಳಿ ಸರ್ಕಾರಿ ಪಾಲಿಕ್ನಿಟೆಕ್ ಕಾಲೇಜು ಆರಂಭಿಸಿ ಗ್ರಾಮೀಣ ಪ್ರದೇಶದ ಮಕ್ಕಳಿಗೆ ತಾಂತ್ರಿಕ ಶಿಕ್ಷಣದ ಸೌಲಭ್ಯ. ವಿದ್ಯುತ್ ಸೋರಿಕೆ ಮತ್ತು ಅವಘಡ ತಪ್ಪಿಸಲು ವಿದ್ಯುತ್ ತಂತಿಗಳಿಗೆ ಕೇಬಲ್ ಅಳವಡಿಕೆಗೆ ಚಾಲನೆ.

ಹನಿ ನೀರಾವರಿಗೆ ಆದ್ಯತೆ



ಮಳವಳ್ಳಿ ತಾಲ್ಲೂಕಿನ ಹಿಂದುಳಿದ ಪ್ರದೇಶವಾದ ಬಿ.ಜಿಪುರ ಹೋಬಳಿ ವ್ಯಾಪ್ತಿಯ ಸುಮಾರು 25 ಸಾವಿರ ಎಕರೆಗೂ ಹೆಚ್ಚು ಪ್ರದೇಶಕ್ಕೆ 600ಕೋಟಿ ರೂ.ವೆಚ್ಚದ ಮಹಾತ್ವಕಾಂಕ್ಷಿ ಯೋಜನೆಯಾದ ಪುರಿಗಾಲಿ ಸಮಗ್ರ ತುಂತುರು ಹನಿ ನೀರಾವರಿ ಯೋಜನೆಗೆ ಅನುಷ್ಠಾನಗೊಳಿಸುವುದರ ಮೂಲಕ ಬರಡು ನೆಲದಲ್ಲಿ ಹಚ್ಚ ಹಸಿರಿನ ಹೊದಿಕೆ ಹೊದಿಸಲು ಮುಂದಾಗಿದ್ದಾರೆ. ಈಗಾಗಲೇ ಯೋಜನೆ ಜಾರಿ ಕಾರ್ಯ ಪ್ರಗತಿಯಲ್ಲಿದ್ದು, ಸದ್ಯದಲ್ಲಿಯೇ ರಾಜ್ಯದ ಬಹುದೊಡ್ಡ ಹನಿ-ತುಂತುರು ನೀರಾವರಿ ಯೋಜನೆ ಲೋಕಾರ್ಪಣೆಗೊಳ್ಳಲಿದೆ. ಯೋಜನೆ ವ್ಯಾಪ್ತಿಯಲ್ಲಿ 33 ಕೆರೆಗಳಿಗೆ ನೀರು ತುಂಬಿಸುವುದು, ಸಾಮೂಹಿಕ ಹಾಗೂ ಸಾವಯವ ಕೃಷಿಗೆ ಆದ್ಯತೆ ನೀಡಿ ಅಂತರಾಷ್ಟ್ರೀಯ ಮಟ್ಟದಲ್ಲಿ ಮಾರುಕಟ್ಟೆ ಸೌಲಭ್ಯ ಕಲ್ಪಿಸುವ ಗುರಿ ಹೊಂದಿದ್ದಾರೆ. ಅಲ್ಲದೇ ನಿರುದ್ಯೋಗ ನಿವಾರಣೆ ನಿಟ್ಟಿನಲ್ಲಿ ಸಾವಿರಾರು ಯುವಕ - ಯುವತಿಯರಿಗೆ ಉದ್ಯೋಗ ನೀಡುವುದರ ಜತೆಗೆ ತಾಲ್ಲೂಕಿನಲ್ಲಿ ಕೈಗಾರಿಕೋದ್ಯಮ ಅಭಿವೃದ್ಧಿಗೆ ಹೊಸ ಕಾಮಗಾರಿಗಳನ್ನು ಸಿದ್ಧಗೊಳಿಸಲು ನಿರ್ಧರಿಸಿದ್ದಾರೆ.



ಶ್ರೀ ಪಿ.ಎಂ. ನರೇಂದ್ರ ಸ್ವಾಮಿ
ಶಾಸಕರು ಹಾಗೂ ಮಾಜಿ ಸಚಿವರು
ಮಳವಳ್ಳಿ ವಿಧಾನ ಸಭಾ ಕ್ಷೇತ್ರ

ತಾಲ್ಲೂಕಿನ ಹಾಡ್ಲಿ, ಯತ್ತಂಬಾಡಿ, ತಳಗವಾದಿ, ವಡಿಕೆಪುರ, ಹೆಬ್ಬಣಿ ಸೇರಿದಂತೆ ಹಲವೆಡೆ ವಿದ್ಯುತ್ ವಿತರಣಾ ಕೇಂದ್ರ ಸ್ಥಾಪನೆ. ಪಟ್ಟಣದಲ್ಲಿ ಸಮರ್ಪಕ ವಿದ್ಯುತ್ ಪೂರೈಕೆಗೆ 3 ಕೋಟಿ ರೂ. ವೆಚ್ಚದಲ್ಲಿ ಅಡಚಣೆ ರಹಿತ ವಿದ್ಯುತ್ ಯೋಜನೆ ಜಾರಿ. ಮೊದಲ ಬಾರಿಗೆ ಶಾಸಕರಾಗಿದ್ದ ವೇಳೆ 32 ಕೋಟಿ ರೂ.ವೆಚ್ಚದಲ್ಲಿ ನಿರಂತರ ಜ್ಯೋತಿ ಯೋಜನೆ ಜಾರಿ.

ಮಳವಳ್ಳಿಪಟ್ಟಣದಲ್ಲಿತಾಲ್ಲೂಕುಕ್ರೀಡಾಂಗಣ ನಿರ್ಮಿಸಿ ಭಕ್ತಕನಕದಾಸರ ಹೆಸರು ನಾಮಕರಣ, ಮಾರೇಹಳ್ಳಿಕೆರೆಯ ಹೂಳೆತ್ತುವಿಕೆ ಹಾಗೂ ತಡೆಗೋಡೆ ಬಲಗೊಳಿಸಿ ನೀರು ಸಂಗ್ರಹಣಾ ಸಾಮರ್ಥ್ಯ ವೃದ್ಧಿಸಿ ಕೆರೆಯ ವ್ಯಾಪ್ತಿಯ ನಾಲೆಗಳಿಗೆ 15 ಕೋಟಿ ರೂ.ವೆಚ್ಚದಲ್ಲಿ ಆಧುನೀಕರಣ, ಕನಕಪುರ ರಸ್ತೆಯಲ್ಲಿ ಅಗ್ನಿಶಾಮಕ ಠಾಣೆ ನಿರ್ಮಾಣ, ಶೈಕ್ಷಣಿಕ ಕ್ಷೇತ್ರದ ಬಲವರ್ಧನೆಗಾಗಿ ಖಾಲಿ ಉಳಿದಿದ್ದ ಶಿಕ್ಷಕರ ಹುದ್ದೆಗೆ ಅತಿಥಿ ಶಿಕ್ಷಕರ ನೇಮಕ, ಹೋಬಳಿವಾರು ನವೋದಯ, ಆದರ್ಶ ಶಾಲೆಗಳ ಸ್ಥಾಪನೆ, ತಾಂತ್ರಿಕ ಶಿಕ್ಷಣಕ್ಕಾಗಿ ಎಲ್ಲ ಸರ್ಕಾರಿ ಶಾಲೆಗಳಿಗೆ ಟ್ಯಾಬ್ ವಿತರಣೆ. ಜಿಲ್ಲಾ ಹಾಗೂ ತಾಲ್ಲೂಕು ಕೇಂದ್ರ ಸಂಪರ್ಕಿಸುವ ರಸ್ತೆಗಳ ಅಭಿವೃದ್ಧಿ, ನೆಟ್ಕಲ್ ಸೇರಿದಂತೆ ಶಾಶ್ವತ ಕುಡಿಯುವ ನೀರು ಯೋಜನೆ ಜಾರಿ.

ಗ್ರಾಮೀಣ ಪ್ರದೇಶಗಳಲ್ಲಿಡಾ.ಬಿ.ಆರ್.ಅಂಬೇಡ್ಕರ್ ಹಾಗೂ ಬಾಬು ಜಗಜೀವನ್ ರಾಂ ಭವನಗಳ ನಿರ್ಮಾಣ, ಮಾಧವ ಮಂತ್ರಿ ಮತ್ತು ರಾಮಸ್ವಾಮಿ ನಾಲಾ ಆಧುನೀಕರಣ, ವಿದ್ಯುತ್ ಕೊರತೆ ನೀಗಿಸಲು 120 ಕೋಟಿ ರೂ. ವೆಚ್ಚದಲ್ಲಿ ಹೆಬ್ಬಣಿ ಬಳಿ ವಿದ್ಯುತ್ ಸ್ವೀಕರಣ ಕೇಂದ್ರ ಸ್ಥಾಪನೆ, ಪಟ್ಟಣದಲ್ಲಿ ಮಹಿಳಾ ಕಾಲೇಜು ಹಾಗೂ ಪಶು ಇಲಾಖೆಯ ಉಪನಿರ್ದೇಶಕ ಕಚೇರಿಯ ಕಟ್ಟಡ ನಿರ್ಮಾಣ, ಕಿರುಗಾವಲು ಸಮುದಾಯ ಆರೋಗ್ಯ ಕೇಂದ್ರ ಸ್ಥಾಪನೆ, ಬೆಳಕವಾಡಿ ಮತ್ತು ಹಲಗೂರಿನಲ್ಲಿ ಪೊಲೀಸ್ ಠಾಣೆ ಮತ್ತು ವಸತಿ ಸಂಕೀರ್ಣ ಸ್ಥಾಪನೆ, ಹಲಗೂರು, ಹುಸ್ಕೂರು, ಸರಗೂರು ಗ್ರಾಮಗಳ ಬಳಿ ವಸತಿ ಶಾಲೆಗಳ ನಿರ್ಮಾಣ, ಕಿತ್ತೂರು ರಾಣಿ, ಮೊರಾಜಿ, ಇಂದಿರಾ ಗಾಂಧಿ ವಸತಿ ಶಾಲೆ ಸ್ಥಾಪನೆ, 15 ಕೋಟಿ ರೂ.ವೆಚ್ಚದಲ್ಲಿ ಅಲ್ಪಸಂಖ್ಯಾತರ ಕಾಲೋನಿಗಳ ಅಭಿವೃದ್ಧಿಗೆ ಚಾಲನೆ.



ಕನ್ನಡ ಭಾಷೆಯ ಭವಿಷ್ಯ ಶಾಲೆಗಳಲ್ಲಿದೆ

ಇದು ಮಕ್ಕಳ ಕಥೆಯಾದರೆ ಅವರ ಪೋಷಕರೂ ಭಾಷಿಕವಾಗಿ ಬದಲಾಗುತ್ತಿರುವುದು ಇನ್ನೊಂದು ಚೋದ್ಯ, ಪ್ರಾದೇಶಿಕ, ನಾಟೀ ಭಾಷೆಯನ್ನು ಉಳಿಸುವವರು ಅಕ್ಷರ ಪರಿಚಯವಿಲ್ಲದ ಹಳ್ಳಿಗರು ಎಂಬುದು ಭಾಷಾ ತಜ್ಞರ ಅಭಿಪ್ರಾಯ. ಆದರೆ ಶಾಲೆಗೆ ಹೋಗದ ಎಷ್ಟೋ ಹಳ್ಳಿಗರು ಪ್ರಯತ್ನಪಟ್ಟು ಆಂಗ್ಲ ಶಬ್ದಗಳನ್ನು ಬಳಸುವುದನ್ನು ನಾವು ಗ್ರಾಮಗಳ ಜಗಲಿ-ಅಂಗಡಿ ಮುಂಗಟ್ಟೆಗಳಲ್ಲಿ ಕಾಣಬಹುದು. ಆಚೆ ಕೂತ, ನಿಂತ ಶಿಕ್ಷಕರ ಮುಂದೆ ನಾವೆಲ್ಲಿ ಕಡಿಮೆಯಾಗಿ ಬಿಡುತ್ತೇನೆಯೋ ಎಂಬ ಭ್ರಮೆ ನಾಟೀ ಜನರನ್ನು ಆವರಿಸಿದೆ. ದಕ್ಷಿಣ ಭಾರತದ ನಾಲ್ಕು ರಾಜ್ಯಗಳಲ್ಲಿ ರಾಜ್ಯ ಭಾಷೆಯ ಮೇಲೆ ಒಲವು ಕಡಿಮೆಯಾಗುತ್ತಿರುವ ಪ್ರಮಾಣ ಕನ್ನಡಿಗರಲ್ಲೇ ಹೆಚ್ಚು. ಭಾಷಿಕ ಪ್ರೀತಿ, ವಾರಸುದಾರಿಕೆಯ ಕುಸಿತದ ಪ್ರಶ್ನೆ ಬಂದಾಗಲೆಲ್ಲಾ ನಮಗೆ ಎಂಟು ಜ್ಞಾನಪೀಠಗಳು ಈ ಅನುಮಾನ- ಅವಮಾನಗಳಿಂದ ಪಾರಾಗಲು ಮುಖವಾಡ ಗಳಾಗುತ್ತವೆ. ಭಾರತದ ಬೇರೆ ಭಾಷೆಗಳಿಗಿಂತ ನಾವೇ ಶ್ರೇಷ್ಠ ಎಂಬ ಸಿದ್ಧ ಉತ್ತರ ನಮ್ಮಲ್ಲಿರುತ್ತದೆ. ಮಕ್ಕಳಿಲ್ಲ ಎಂಬ ಒಂದೇ ಕಾರಣಕ್ಕೆ ಮುಚ್ಚುತ್ತೇವೆ ಎನ್ನುವುದು, ಅಲ್ಲಿಯೇ ಶಿಕ್ಷಣ ಮೌಲ್ಯ ಚೆನ್ನಾಗಿಲ್ಲ ಎನ್ನುವುದು ಸುಲಭ. ಆದರೆ ಇಡೀ ಕನ್ನಡ ಭಾಷೆಯ ಭವಿಷ್ಯ ಅದೇ ಶಾಲೆಗಳಲ್ಲಿರುವುದ ರಿಂದ ಮುಚ್ಚುವುದನ್ನು ಸಲೀಸಾಗಿ ನಿರ್ಧರಿಸುವುದು ಯುಕ್ತವಲ್ಲ.

ಲೋಕ ಭಾಷೆಯೂ ಬೆಳೆಯಲಿ

ಕರಾವಳಿಯ ತುಳು ಭಾಷೆಯ ಪ್ರಸಿದ್ಧ ಲೇಖಕ ಪ್ರಾಧ್ಯಾಪಕರೊಬ್ಬರು ನನ್ನ ತಂದೆಗೆ ತುಳು ಅನ್ನ ಕೊಟ್ಟಿದೆ, ನನಗೆ ಕನ್ನಡ ಅನ್ನ ಕೊಡುತ್ತಿದೆ, ನನ್ನ ತಂದೆಯ ತುಳು ನನ್ನ ಕನ್ನಡ ನನ್ನ ಮಗುವಿಗೆ ಬದುಕು ಕೊಡಬಹುದೆನ್ನುವ ಗ್ಯಾರಂಟಿ ಇಲ್ಲ, ಆಕೆಗೆ ಇಂಗ್ಲಿಷಿನಲ್ಲಿ ಮಾತ್ರ ಭವಿಷ್ಯ ಎಂದದ್ದನ್ನು ಇತ್ತೀಚಿಗೆ ಕಿವಿಯಾರೆ ಕೇಳಿದ್ದೇನೆ.

ಕನ್ನಡವನ್ನು ಟೀಕಿಸಬೇಕಾ?

ಗಾಂಧಿ ಒಮ್ಮೆ ಹೇಳಿದ ಮಾತಿದು, ಭಾರತ ಜಗತ್ತಿನಾದ್ಯಂತ ಬೆಳಗುವ ಜೊತೆಗೆ ಜಗತ್ತಿನ ಬೆಳಕು ಭಾರತದಲ್ಲಿ ಬೆಳಗಬೇಕೆಂದು. ಬೆಳಗುವುದೆಂದರೆ ಅದು ಭಾಷೆಯ ದಾರಿಯಲ್ಲಿ ಎಂಬುದನ್ನು ನಾವು ಮೊದಲು ಅರ್ಥೈಸಬೇಕು. ಇವತ್ತು ಜಪಾನಿಯರಿಗೆ ಜಪಾನ್ ಭಾಷೆ, ಜರ್ಮನಿಯರಿಗೆ, ಚೀನಾದವರಿಗೆ ಅಲ್ಲಿಯ ಭಾಷೆ ಜಗತ್ತಿನಲ್ಲಿ ಬೆಳಗುವುದಕ್ಕೆ ಕಾರಣವಾಗುವುದಾದರೆ ನಾವು ನಮ್ಮನ್ನು ಟೀಕಿಸಬೇಕಾ? ಕನ್ನಡವನ್ನು ಟೀಕಿಸಬೇಕಾ? ಇದೊಂದು ದೊಡ್ಡ ಪ್ರಶ್ನೆ.

ತಪ್ಪು ಖಂಡಿತ ಕನ್ನಡದಲ್ಲ, ಅದನ್ನು ಬಳಸುವ ಜನರದ್ದು, ಬಳಸುವಂತೆ ಮಾಡುವ ಪ್ರಭುತ್ವದ್ದು. ಎಲ್ಲೆಲ್ಲಿ ನಮ್ಮ ಮಾರುಕಟ್ಟೆಯ ವಸ್ತುಗಳು ಚಲಿಸುತ್ತವೆಯೋ ಅಲ್ಲೆಲ್ಲ ಭಾಷೆಯನ್ನು ಚಲಿಸುವ ಹಾಗೆ ಮಾಡಿದ ಜಗತ್ತಿನ ತಾಂತ್ರಿಕವಾಗಿ ನಂಬರ್ ಒನ್ ಆಗಿರುವ ದೇಶಗಳನ್ನು ಒಮ್ಮೆ ಗಮನಿಸಿ. ಅಲ್ಲೆಲ್ಲ ನಾವು ಆರಾಧಿಸುವ ಇಂಗ್ಲಿಷ್ ಇಲ್ಲ, ಕನ್ನಡದಲ್ಲಿ ಮಾರುಕಟ್ಟೆಯ ಅವಕಾಶದ ದಾರಿಯನ್ನು ಸೃಷ್ಟಿಸದಿರುವ ನಮ್ಮನ್ನೇ ನಾವು ಟೀಕಿಸಬೇಕು.

ಇತ್ತೀಚೆಗೆ ಕರಾವಳಿಯಲ್ಲಿ ಉಚಿತವಾಗಿ ಅನ್ನ ಕೊಡುತ್ತಾರೆ ಎನ್ನುವ ಕಾರಣಕ್ಕಾಗಿ ದೇವಸ್ಥಾನಗಳಲ್ಲಿ ಸಾಹಿತ್ಯ ಸಮ್ಮೇಳನವನ್ನು ಏರ್ಪಡಿಸುವುದನ್ನು ನಾನು ಕಂಡಿದ್ದೇನೆ. ಮುಂದೆ ಚರ್ಚ್, ಮಸೀದಿ, ಬಸದಿಗಳಲ್ಲೂ ಮಧ್ಯಾಹ್ನದ ಉಚಿತ ಊಟ ಸಿಗುತ್ತೆ ಅನ್ನೋ ಒಂದೇ ಕಾರಣಕ್ಕೆ ಸಾಹಿತ್ಯ ಪರಿಷತ್ತು ಸಮ್ಮೇಳನಗಳನ್ನು ಏರ್ಪಡಿಸಬಹುದು. ಆದರೆ ಈ ದೇಶದ ಎಲ್ಲಾ ಸಮುದಾಯದ ಮತದ ಭಾಷೆಯ ಮಕ್ಕಳು ಸೇರುವ ಕನ್ನಡ ಶಾಲೆಯ ಅಂಗಳದಲ್ಲಿ ಸಾಹಿತ್ಯ ಸಮ್ಮೇಳನಗಳನ್ನು ಏರ್ಪಡಿಸಿದರೆ ಯಾವ ಮಗುವಿನಲ್ಲಿ ಕನ್ನಡ ಅಕ್ಷರ ಮಾತು ಧ್ವನಿಯನ್ನು ನಾವು ಎಲ್ಲಿ ಬಿತ್ತಬೇಕೋ ಅದೇ ಜಾಗದಲ್ಲಿ ಸಾಮೂಹಿಕವಾಗಿ ಸಾಧ್ಯವಾಗುತ್ತದೆ.

ಊರು ಕಟ್ಟಿದ ಕೀರ್ತಿ

ಕನ್ನಡದ ಘನತೆಯನ್ನು ಲೋಕಕ್ಕೇರಿಸಿದ ಜ್ಞಾನಪೀಠ ಪ್ರಶಸ್ತಿ ವಿಜೇತರು ಪಂಪ ಪ್ರಶಸ್ತಿ, ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ವಿಜೇತರ ಮೂಲ ಬೇರುಗಳಿರುವುದು ಈ ರಾಜ್ಯದ ಹಳ್ಳಿಗಾಡಿನ ಕನ್ನಡ ಶಾಲೆಗಳಲ್ಲಿ ಎಂಬುದು ಎಲ್ಲರಿಗೂ ಗೊತ್ತಿರುವ ಸಂಗತಿ. ಸೂಕ್ಷ್ಮವಾಗಿ ಗಮನಿಸಿದರೆ ಕನ್ನಡ ನಾಡಿನ ಎಷ್ಟೋ ಸರ್ಕಾರಿ ಕನ್ನಡ ಶಾಲೆಗಳ ಅರ್ಥಾತ್ ಸರ್ಕಾರಿ ಶಾಲೆಗಳ ಗೋಡೆ-ಬೆಂಚುಗಳಲ್ಲಿ ಕನ್ನಡ ಕವಿಗಳ ಮೊದಲ ಕವನಗಳ ಸಾಲುಗಳಿರಬಹುದು. ಕಾವ್ಯಾಭ್ಯಾಸದ ಕಾಗುಣಿತಗಳಿರಬಹುದು.

ಇಂದಿಗೂ ಇಂಥ ಶಾಲೆಗಳ ಜಗಲಿಯಲ್ಲಿ ನಿಂತಾಗ ಕನ್ನಡದ ಕವಿಗಳಿಗೆ ರೋಮಾಂಚನವಾ ಗಬಹುದು. ಇಂಥ ನೈತಿಕ, ಭಾಷಿಕ ವಾರಿಸುದಾರಿಕೆಯನ್ನು ಸೃಷ್ಟಿಸಲು ಕಾರಣವಾಗುವುದು ಬರೀ ಆ ಶಾಲೆಯ ಸ್ಥಾವರರೂಪಿ ಗೋಡೆ ಮಾಡುಗಳಲ್ಲ. ದೀರ್ಘಕಾಲದಿಂದ ಅಪ್ಪನನ್ನು, ಮಗನನ್ನು, ಮೊಮ್ಮಗನನ್ನು ಹೀಗೆ ಮೂರು ತಲೆಮಾರನ್ನು ತಿದ್ದಿದ ಆ ಕನ್ನಡ ಶಾಲೆಗಳು ಇಡೀ ಸಮುದಾಯದ ಪಾಲಿಗೆ ಕನ್ನಡದಲ್ಲೇ ಊರನ್ನು ತಿದ್ದಿದ, ಕಟ್ಟಿದ ಕೀರ್ತಿಗೆ ಪಾತ್ರವಾಗಿದ್ದವು.

ಇದೇ ನಮ್ಮ ತಾಯಿನಾಡು ಇದೇ ನಮ್ಮ ತೊಟ್ಟಿಲು | ಅನ್ನ ನೀರು ಸಲಹಿದಂಥ ತಟ್ಟೆ ಬಟ್ಟಲು
ಆದಿ ಪಂಪ ಆಸೆಪಟ್ಟ ದುಂಬಿಯಾಗಿ ಹುಟ್ಟಲು | ನಂದನಕ್ಕೆ ಇಲ್ಲಿಂದ ಇರುವುದೊಂದೆ ಮೆಟ್ಟಲು
❖ *ಸು. ರಂ. ಎಕ್ಕುಂಡಿ*


೮೭ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಹಾರ್ದಿಕ ಶುಭಾಶಯಗಳು
ಪುರಸಭಾ ನಾಗಮಂಗಲ, ಮಂಡ್ಯ ಜಿಲ್ಲೆ
ಶುಭ ಕೋರುವವರು
ಅಲಿ ಅನ್ಸಾರ್
ಅಧ್ಯಕ್ಷರು, ವಾರ್ಡ್ ಸಂಖ್ಯೆ-12
ವಸಂತ ಲಕ್ಷ್ಮಿ
ಉಪಾಧ್ಯಕ್ಷರು, ವಾರ್ಡ್ ಸಂಖ್ಯೆ-19
ರಮೇಶ್
ಸ್ಥಾಯಿ ಸಮಿತಿ ಅಧ್ಯಕ್ಷರು, ವಾರ್ಡ್-5
ಶ್ರೀನಿವಾಸ್
ಮುಖ್ಯಾಧಿಕಾರಿ
ಪುರಸಭಾ ಸದಸ್ಯರು ನಾಗಮಂಗಲ
ತಿಮ್ಮಪ್ಪ
ಸದಸ್ಯರು, ವಾರ್ಡ್-6
ಚನ್ನಪ್ಪ
ಸದಸ್ಯರು, ವಾರ್ಡ್-23
ಶಂಕರಲಿಂಗೇಗೌಡ
ಸದಸ್ಯರು, ವಾರ್ಡ್-17
ವರದರಾಜು
ಸದಸ್ಯರು ವಾರ್ಡ್-1
ರತ್ನಮ್ಮ
ಸದಸ್ಯರು ವಾರ್ಡ್-2
ಸೌಮ್ಯ
ಸದಸ್ಯರು, ವಾರ್ಡ್-3
ಭಾರತಿ
ಸದಸ್ಯರು, ವಾಡ್-4
ಚಂದ್ರಕಲಾ
ಸದಸ್ಯರು, ವಾರ್ಡ್-7
ವಿಜಯಕುಮಾರ್
ಸದಸ್ಯರು, ವಾರ್ಡ್-8
ಸಯಿದಾ ಸುಮಯ್ಯ
ಸದಸ್ಯರು, ವಾಡ್-9
ಜಾಫರ್ ಷರೀಫ್
ಸದಸ್ಯರು-ವಾರ್ಡ್-10
ರಿಜ್ವಾನ್ ಷರೀಫ್
ಸದಸ್ಯರು-ವಾರ್ಡ್-11
ಆಶಾ
ಸದಸ್ಯರು-ವಾರ್ಡ್-13
ಮುಬೀನ್‌ತಾಜ್
ಸದಸ್ಯರು-ವಾರ್ಡ್-14
ನಾಜೀಯಾ ಸುಲ್ತಾನ್
ಸದಸ್ಯರು-15
ರಿಹಾನ
ಸದಸ್ಯರು, ವಾರ್ಡ್-16
ಮಂಜುನಾಥ್
ಸದಸ್ಯರು, ವಾರ್ಡ್-18
ರೂಪ
ಸದಸ್ಯರು, ವಾರ್ಡ್-20
ಪ್ರಭಾಕರ
ಸದಸ್ಯರು, ವಾರ್ಡ್-21
ಜ್ಯೋತಿ
ಸದಸ್ಯರು, ವಾರ್ಡ್-22
ನಾಮ ನಿರ್ದೇಶಿತ ಸದಸ್ಯರುಗಳು
ಮುಖ್ಯಾಧಿಕಾರಿಗಳು, ಸದಸ್ಯರುಗಳು ಹಾಗೂ ಕಛೇರಿ ಸಿಬ್ಬಂದಿ ವರ್ಗದವರು



ಮಾತೃ ಭಾಷೆಯನ್ನು ಮರೆಯುವ ಕೆಲಸ ಸಲ್ಲದು

ಕನ್ನಡಕ್ಕೇ ಪೆಟ್ಟು

ನಮ್ಮ ರಾಜ್ಯದಲ್ಲಿಂದು ಅಂದಾಜು ಸುಮಾರು ಐವತ್ತು ಸಾವಿರ ಸರ್ಕಾರಿ ಪ್ರಾಥಮಿಕ ಶಾಲೆಗಳಿವೆ. ವಿದ್ಯಾರ್ಥಿಗಳ ಕೊರತೆಯಿಂದ ಪ್ರತಿವರ್ಷ ನೂರಾರು ಶಾಲೆಗಳು ಸುದ್ದಿಯಾಗದೆ ಮುಚ್ಚುತ್ತಿವೆ. ಈ ನಡುವೆ ಮುಚ್ಚಬೇಕು. ಮುಚ್ಚಬಾರದು ಎಂಬ ವಾದ-ವಿವಾದ ತರ್ಕವನ್ನು ಇಟ್ಟುಕೊಂಡು ಬೆಳೆಯುತ್ತಿವೆ. ಜಗತ್ತು ಅಂಗೈಯ ಗೋಲಿಯಾದ ನವಮಾಧ್ಯಮ ಜಾಗತೀಕರಣದ ಈ ಕಾಲಮಾನದಲ್ಲಿ ನಾಲ್ಕು- ಐದನೆಯ ಹೊಸ ತಲೆಮಾರು ಸ್ಥಳೀಯ ಭಾಷೆಯ ಜೊತೆಗೆ ಲೋಕಭಾಷೆಯ ಬಗ್ಗೆಯೂ ಯೋಚಿಸತೊಡಗುತ್ತದೆ. ಯಾವ ಭಾಷೆ ತನ್ನ ಮಗುವಿನ ಭವಿಷ್ಯ ಬದುಕಿಗೆ ಪೂರಕವಾಗಿರುತ್ತದೆ ಎಂದು ಚೋದಕ ಮನಸ್ಸು ಯೋಚಿಸಲಾರಂಭಿಸಿತೋ ಆಗ ಸಹಜವಾಗಿ ಕನ್ನಡಕ್ಕೇ ಪೆಟ್ಟು ಬೀಳುತ್ತದೆ.ಇದರಿಂದಾಗಿ ದಿನೇದಿನೇ 'ಮಾಧ್ಯಮ ವಲಸೆ' ತೀವ್ರಗೊಳ್ಳುತ್ತಿದೆ. ಈ ಮಾಧ್ಯಮ ವಲಸೆ ಇಂದು ಕಣ್ಣಿಗೆ ಕಟ್ಟುವಂತೆ ಕಾಣುತ್ತಿರುವುದು ಈ ಕನ್ನಡ ಸರ್ಕಾರಿ ಶಾಲೆಗಳಲ್ಲಿ, ಬೇರೆ ಕ್ಷೇತ್ರಗಳದ್ದು ಪಕ್ಕನೆ ಕಾಣಿಸುವುದಿಲ್ಲ.

ಓದುವವರ ಸಂಖ್ಯೆ ಕಡಿಮೆ

ಜಾಗತೀಕರಣದ ದಿನಮಾನದಲ್ಲಿ ಇವೆಲ್ಲಾ ಅನಿವಾರ್ಯ. ಓದುವವರ ಸಂಖ್ಯೆ ಕನ್ನಡದಲ್ಲಿ ಕಡಿಮೆಯಾಗುತ್ತಿದೆ. ಪ್ರಾದೇಶಿಕ ಭಾಷೆಗಳು ಮುಂದೆ ಒಂದೊಂದೇ ನಶಿಸುತ್ತವೆ ಎಂಬ ವಾದವನ್ನು ಪಕ್ಕದ ಕೇರಳ, ತಮಿಳುನಾಡುಗಳ ಸಾಂಸ್ಕೃತಿಕ ಭಾಷಿಕ ನೆಲೆಗಟ್ಟಿನಲ್ಲಿಲ್ಲಿಟ್ಟು ನೋಡುವಂತಿಲ್ಲ. ಅಲ್ಲಿ ಜಾಗತೀಕರಣ ಅಥವಾ ಆಂಗ್ಲ ಭಾಷೆಯ ತೀವ್ರತೆ ಅಲ್ಲಿಯ ಪ್ರಾದೇಶಿಕ ಸಂಸ್ಕೃತಿಯ ಮೇಲೆ, ಭಾಷಾ ಸಮೃದ್ಧಿಯಮೇಲೆ ಯಾವುದೇ ತೊಂದರೆ ಕೊಟ್ಟಿಲ್ಲ. ಕೇರಳ-ತಮಿಳುನಾಡಿನ ರಾಜ್ಯಭಾಷೆಯ ಶಾಲೆಗಳಿಗೆ ಮುಚ್ಚುವ ಸ್ಥಿತಿ ಇನ್ನೂ ಬಂದಿಲ್ಲ.

ಗ್ರಾಮದ ಕನ್ನಡ ಶಾಲೆಯನ್ನು ಬಿಟ್ಟು ಪೇಟೆಯ ಕನ್ನಡ ಶಾಲೆಗೆ ವಲಸೆ ಹೋಗುವವರ ಪ್ರಮಾಣ ಶೇ.5ರಷ್ಟೂ ಇಲ್ಲ. ಹಳ್ಳಿಯ ಕನ್ನಡ ಶಾಲೆಯಿಂದ ಹಳ್ಳಿಯ ಅಥವಾ ಪೇಟೆಯ ಇಂಗ್ಲಿಷ್ ಶಾಲೆಗಳಿಗೆ ಹೋಗುವವರ ಸಂಖ್ಯೆಯೇ ಗರಿಷ್ಠ. ಸಾಮಾಜಿಕ-ಕೌಟುಂಬಿಕ ಹಿನ್ನೆಲೆಯಲ್ಲ ಈ ಸ್ಥಾನಾಂತರಕ್ಕೆ ತಂದೆಗಿಂತ ತಾಯಿಯೇ ಹೆಚ್ಚು ಬೋಧಕಳಾಗಿರುತ್ತಾಳೆ. ಮಗು ಓದುವ ಶಾಲೆಯ ಗೋಡೆ-ಮಾಡು, ಹಾಕಿಸುವ ಸಮವಸ್ತ್ರ, ಶೂ, ಟೈ, ಬ್ಯಾಗು, ಮಾಧ್ಯಮ, ಪಡೆಯುವ ಅಂಕ ಎಲ್ಲವೂ ಸಾಮಾಜಿಕ ಪ್ರತಿಷ್ಠೆ ಸಭ್ಯತೆಯ ಮಾಪನವಾಗುತ್ತಿರುವ ಸಂದರ್ಭದಲ್ಲಿ ಇಂಥ ವಲಸೆ ಹೆಚ್ಚು ವೇಗ ಪಡೆಯುತ್ತದೆ.

ಇಂದು ಕನ್ನಡದ ಗ್ರಾಮಗಳಲ್ಲಿಯೆ ಎರಡು ಬಗೆಯ ವಲಸೆಗಳಿವೆ. ಒಂದು ಶಿಕ್ಷಣಕ್ಕಾಗಿ ಮಗುವಿನ ವಲಸೆ. ಎರಡು ಉದ್ಯೋಗಕ್ಕಾಗಿ ತಂದೆ-ತಾಯಿಯರ ವಲಸೆ. ಹಳ್ಳಿಗಳಿಂದ ಇಂಥ ಮಕ್ಕಳು ಹಳದಿ ಬಸ್ಸು ಹತ್ತಿದರೆ ಹೆತ್ತವರು ಅದೇ ವೇಳೆಗೆ ಕೆಂಪು ಬಸ್ಸು ಹತ್ತುತ್ತಾರೆ. ತಲುಪುವ ಗುರಿ ಮಾತ್ರ ಒಂದೇ. ಮಧ್ಯಮ ವರ್ಗದವರು ಸ್ವಂತ ಮನೆ ಕಟ್ಟಿಯೋ, ಬಾಡಿಗೆ ಮನೆ ಗೊತ್ತು ಮಾಡಿಯೋ ಪೇಟೆಯಲ್ಲಿ ಈ ಮೇಲಿನ ಕಾರಣಗಳಿಗಾಗಿ ಉಳಿದರೆ ಇನ್ನುಳಿದವರು ಮುಂಜಾನೆ ಹೋಗಿ ಸಂಜೆ ಹಿಂದಿರುಗುತ್ತಾರೆ. ಈಗ ಪೇಟೆಯಲ್ಲಿ ಓದುವ ಮಗು ದೊಡ್ಡದಾಗುವ ಹೊತ್ತಿಗೆ ಹಳ್ಳಿಮನೆ ಮತ್ತು ಹಳ್ಳಿಶಾಲೆ ಶಾಶ್ವತವಾಗಿ ಖಾಲಿಯಾಗುತ್ತವೆ.

ಎರಡು ವಿಷಯಗಳಿಗೆ ಹೆಚ್ಚು ಆದ್ಯತೆ

ಗ್ರಾಮ-ಪೇಟೆಗಳಲ್ಲಿ ಆಂಗ್ಲ ಶಾಲೆಯನ್ನು ತೆರೆಯುವ ಯಜಮಾನರು ಅಥವಾ ಶಿಕ್ಷಣ ಉದ್ಯಮಿಗಳು ವ್ಯಾಪಾರ ಕುದುರಿಸುವ ಉದ್ದೇಶದಿಂದ ಇತ್ತೀಚೆಗೆ ಎರಡು ವಿಷಯಗಳಿಗೆ ಹೆಚ್ಚು ಆದ್ಯತೆ ನೀಡುತ್ತಿದ್ದಾರೆ. ಮೊದಲನೆಯದು-ವರ್ಷದಿಂದ ವರ್ಷಕ್ಕೆ ಹೆಚ್ಚು ವಿದ್ಯಾರ್ಥಿಗಳನ್ನು ಸೇರಿಸಬಲ್ಲ, ಸಂಖ್ಯಾವೃದ್ಧಿಯಾಗಲು ಚೋದಕವಾಗಿ ಕೆಲಸ ಮಾಡಬಲ್ಲ ಚತುರ ವೇಗಿ ಮುಖ್ಯೋಪಾಧ್ಯಾಯರ ನೇಮಕ, ವಿದ್ಯಾರ್ಥಿಗಳು ಯಾವುದೇ ಊರಲ್ಲಿರಲಿ ಅವರನ್ನು ತುಂಬಿಸಿ ತಂದು ಶಾಲೆಯ ಅಂಗಳದಲ್ಲಿ ಸುರಿಯಬಲ್ಲ ವ್ಯಾನು, ಅವುಗಳ ಚಾಲಕರು, ಇಂಥವರು ಇಂದು ತಮ್ಮ ಚತುರತೆಯನ್ನೇ ಮೌಲ್ಯ ಮಾಡಿಕೊಂಡು ಬೇಡಿಕೆ ಕುದುರಿಸಿ ಸಂಸ್ಥೆಗಳನ್ನು ಬದಲಾಯಿಸುತ್ತಿರುವುದು ಮಾಮೂಲು.

'ಭಾಷಾ ಮಾಧ್ಯಮ' ಕೆಲಸ

ಯಾವ ಯಾವ ಶಾಲೆಗಳಲ್ಲಿ ಇನ್ನೂ ಕನ್ನಡದ ಮಕ್ಕಳು ಉಳಿದಿದ್ದಾರೆ. ವಲಸೆ ಯಾಕಿಲ್ಲ ಎಂದು ಸಮೀಕ್ಷಿಸಿದರೆ ಅದು ಬಹುಪಾಲು ಮುಸ್ಲಿಂ, ಕೃಷಿಕ, ಹಿಂದುಳಿದ ಕೊಳೆಗೇರಿಯವರನ್ನು ಹೊಂದಿದ ಪರಿಸರವಾಗಿರುತ್ತದೆ. ಸಾಮಾಜಿಕ, ಆರ್ಥಿಕವಾಗಿ ಹಿಂದುಳಿದ ಪ್ರದೇಶಗಳಲ್ಲಿ ಇನ್ನು ಸ್ವಲ್ಪ ಮಕ್ಕಳು ಸರ್ಕಾರಿ ಶಾಲೆಗಳಲ್ಲೇ ಓದುತ್ತಿದ್ದಾರೆ. ಮೊನ್ನೆಮೊನ್ನೆಯವರೆಗೆ ಈ ಸಮಸ್ಯೆಯನ್ನು ಮೂಲಭೂತ ಸೌಲಭ್ಯದ ಕೊರತೆಯೆಂದು ವ್ಯಾಖ್ಯಾನಿಸಲಾಗುತ್ತಿತ್ತು. ಆದರೆ ಇತ್ತೀಚೆಗೆ ಸರ್ಕಾರಿ ಕನ್ನಡ ಶಾಲೆಗಳು ಭೌತಿಕವಾಗಿ ಮತ್ತು ಬೌದ್ಧಿಕವಾಗಿ ಖಾಸಗಿಯಷ್ಟೇ ಬೆಳೆದಿವೆ. ಸುಸಜ್ಜಿತ ಆವರಣ, ಕುಡಿಯುವ ನೀರು, ಶೌಚಾಲಯ, ಬಿಸಿಯೂಟ, ಮಳೆಕೊಯ್ಲು ಹೀಗೆ ಎಲ್ಲವೂ ಇದೆ. ಕಠಿಣ ಪರೀಕ್ಷೆ ಎದುರಿಸಿ ತೇರ್ಗಡೆ ಹೊಂದಿ ಬಂದ ಪ್ರತಿಭಾವಂತ ಅನುಭವಿ ತರಬೇತಿ ಪಡೆದ ಶಿಕ್ಷಕರಿದ್ದಾರೆ. ಪ್ರತಿವರ್ಷ ಅವರನ್ನು ಬೇರೆ ಹೊರೆ ಯೋಜನೆಯಡಿಯಲ್ಲಿ ತರಬೇತುಗೊಳಿಸಲಾಗುತ್ತದೆ. ವೈಚಾರಿಕ ಮತ್ತು ಕಂಪ್ಯೂಟರೀಕೃತ ಪರಿಕರ-ತಂತ್ರಜ್ಞಾನಗಳ ಬಳಕೆಯಾಗುತ್ತಿದೆ. ಆದರೆ ಈ ಬುದ್ಧಿವಂತಿಕೆ,ತಾಂತ್ರಿಕತೆ, ಬೋಧನಾ ವಿಧಾನ ಎಲ್ಲವನ್ನೂ ಮೀರುವ ಹಾಗೆ 'ಭಾಷಾ ಮಾಧ್ಯಮ' ಕೆಲಸ ಮಾಡುತ್ತಿದೆ. ◆

ಸರಹದ್ದ ಗಡಿಯಲ್ಲಿ ಗಿರಿಯೇರು ಮುಡಿಯಲ್ಲಿ ಬೆಂಗಳೂರು । ಹಚ್ಚೋಣ ಕನ್ನಡದ ಪ್ರೀತಿದೀಪ
ಕಾವೇರಿ ತಡಿಯಲ್ಲಿ ಗೊಮ್ಮಟನ ಅಡಿಯಲ್ಲಿ । ಕನ್ನಡದ ನುಡಿಯಲ್ಲಿ ಅರ್ಥದೀಪ

❖ ಎಚ್. ಎಸ್. ವೆಂಕಟೇಶ ಮೂರ್ತಿ


೮೭ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಹಾರ್ದಿಕ ಶುಭಾಶಯಗಳು
ಪುರಸಭಾ ಕಾರ್ಯಾಲಯ, ಶ್ರೀರಂಗಪಟ್ಟಣ
ಸಕ್ಕರೆ ನಾಡು ಮಂಡ್ಯದಲ್ಲಿ ನಡೆಯುವ ೮೭ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಆಗಮಿಸುವ ಕನ್ನಡ ಪ್ರೇಮಿಗಳಿಗೆ, ಎಲ್ಲಾ ರೈತರ ಬಾಂಧವರಿಗೆ ತುಂಬು ಹೃದಯದ ಸುಸ್ವಾಗತ.....
ಶುಭ ಕೋರುವವರು
ರಮೇಶ್ ಬಂಡಿಸಿದ್ದೇಗೌಡ
ಮಾನ್ಯ ಶಾಸಕರು, ಶ್ರೀರಂಗ ಪಟ್ಟಣ
ಶ್ರೀನಿವಾಸ
ಉಪ ವಿಭಾಗಾಧಿಕಾರಿಗಳು ಹಾಗೂ ಆಡಳಿತಾಧಿಕಾರಿಗಳು
ಪುರಸಭೆ - ಶ್ರೀರಂಗ ಪಟ್ಟಣ
ಎಂ. ರಾಜಣ್ಣ
ಮುಖ್ಯಾಧಿಕಾರಿಗಳು
ನಾಮ ನಿರ್ದೇಶಿತ ಸದಸ್ಯರುಗಳು
ಮುಖ್ಯಾಧಿಕಾರಿಗಳು, ಸದಸ್ಯರುಗಳು ಹಾಗೂ ಕಛೇರಿ ಸಿಬ್ಬಂದಿ ವರ್ಗದವರು

ಸಕ್ಕರೆ ನಾಡಿನ ಸಾರಸ್ವತ ಲೋಕದ ದಿಗ್ಗಜರು

ಸಕ್ಕರೆ ನಾಡು ಎಂದೇ ಪ್ರಖ್ಯಾತವಾಗಿರುವ ಮಂಡ್ಯ ಜಿಲ್ಲೆ ತನ್ನದೇ ಆದ ವೈವಿಧ್ಯಮಯ ವಿಶಿಷ್ಟ್ಯ ಗಳಿಂದಾಗಿ ಅನನ್ಯ ಸ್ಥಾನ ಪಡೆದಿದೆ. ಮನಮೋಹಕ ಕಲೆ, ಸಾಹಿತ್ಯ, ಸಂಸ್ಕೃತಿ, ಸಂಗೀತ, ರಂಗಭೂಮಿ, ಸಮಾಜ ಸೇವೆ ಹೀಗೆ ಮುಂತಾದ ಮೈಲಿಗಲ್ಲುಗಳ ಮೂಲಕ ಕನ್ನಡ ನಾಡಿನಲ್ಲಿ ಮಂಡ್ಯ ಜಿಲ್ಲೆ ಬೆಳಗಿದೆ. ಕನ್ನಡ ಸಾರಸ್ವತ ಲೋಕಕ್ಕೆ ವಿನೂತನ ಕೃತಿಗಳನ್ನು ಸಮರ್ಪಿಸುವ ಮೂಲಕ ಸಕ್ಕರೆ ನಾಡಿನ ಸಾಹಿತ್ಯ ದಿಗ್ಗಜರು ಮಾಡಿರುವ ಸಾಧನೆ ಅಪಾರ, ಅವಿಸ್ಮರಣೀಯ.



❖ ಯೋಗೀಶ್ ತೀರ್ಥಪುರ

ಎ.ಎನ್.ಮೂರ್ತಿರಾವ್



ಕನ್ನಡದ ಪ್ರಬಂಧಕಾರ, ವಿಮರ್ಶಕ ಎ.ಎನ್. ಮೂರ್ತಿ ರಾವ್. 1900 ಜೂ.16ರಂದು ಅಕ್ಕಿಹೆಬ್ಬಾಳಲ್ಲಿ ಎಂ.ಸುಬ್ಬರಾವ್ ಮತ್ತು ಪುಟ್ಟಮ್ಮ ದಂಪತಿ ಪುತ್ರರಾಗಿ ಜನಿಸಿದ ಇವರು, ಪ್ರಾಧ್ಯಾಪಕರಾಗಿ, ಕಸಾಪ ಅಧ್ಯಕ್ಷ ರಾಗಿ, ಸೇವೆ ಸಲ್ಲಿಸಿದರು. ಕೈವಾರದಲ್ಲಿ ನಡೆದ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಕನ್ನಡಾಭಿ ಮಾನಿಗಳ ಪ್ರೀತಿಗೆ ಪಾತ್ರರಾಗಿದ್ದರು. ಹಗಲುಗನಸುಗಳು, ಚಿತ್ರಗಳು ಪತ್ರಗಳು, ಸಂಜೆಗಣ್ಣಿನ ಹಿನ್ನೋಟ ಸೇರಿದಂತೆ ಅನೇಕ ರೀತಿಯ ಸಾಹಿತ್ಯ ರಚಿಸಿದ್ದಾರೆ. ಕೇಂದ್ರ ಸಾಹಿತ್ಯ ಅಕಾಡೆಮಿ, ಪಂಪ ಪ್ರಶಸ್ತಿ ಪಡೆದ ರಾಯರು 24-08-2003ರಂದು ನಿಧನರಾದರು.

ಬಿ.ಎಂ.ಶ್ರೀಕಂಠಯ್ಯ



ಕನ್ನಡದ ಕಣ್ವ ಎಂದು ಪ್ರಖ್ಯಾತರಾದವರು ಬಿ.ಎಂ.ಶ್ರೀಕಂಠಯ್ಯ. ಇವರು 1884 ಜ.3ರಂದು ತಾಯಿ ಭಾಗೀರಥಮ್ಮ ಅವರ ಊರಾದ ತುಮಕೂರು ಜಿಲ್ಲೆಯ ಸಂಪಿಗೆ ಗ್ರಾಮದಲ್ಲಿ ಜನಿಸಿದ್ದರೂ ಕೂಡ, ತಂದೆ ಮೈಲಾರಯ್ಯ ಅವರ ಊರು ನಾಗಮಂಗಲ ತಾಲೂಕಿನ ಬೆಳ್ಳೂರು. ಮೈಸೂರಿನಲ್ಲಿ ಪ್ರೌಢ ಶಿಕ್ಷಣ, ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ಬಿಎ, ಮದ್ರಾಸ್ ವಿವಿಯಲ್ಲಿ ಬಿ.ಎಲ್ ಪದವಿ, ಇಂಗ್ಲಿಷ್‌ನಲ್ಲಿ ಎಂಎ ಪದವಿ ಪಡೆದ ಇವರು, ಇಂಗ್ಲಿಷ್ ಗೀತೆಗಳು, ಕನ್ನಡದ ಬಾವುಟ (ಸಂಪಾದಿತ), ಗದಾಯುದ್ಧ ನಾಟಕಂ, ಅಶ್ವತ್ಥಾಮನ್ ಸೇರಿದಂತೆ ಕನ್ನಡದ ಎಲ್ಲಾ ಪ್ರಕಾರದಲ್ಲೂ ಸಾಹಿತ್ಯ ರಚಿಸಿದ್ದಾರೆ. 1928ರ ಕಲಬುರಗಿ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆವಹಿ ಸಿದ್ದ ಬಿ.ಎಂ.ಶ್ರೀ ರಾಜಸೇವಾಸಕ್ತ ಎಂಬ ಬಿರುದು ಪಡೆದರು. 1944ರಲ್ಲಿ ಧಾರವಾಡದ ಕಲಾ ಕಾಲೇಜಿನಲ್ಲಿ ಪ್ರಿನ್ಸಿಪಾಲರಾಗಿದ್ದ ಬಿಎಂಶ್ರೀ 1946 ಜನವರಿ 5ರಂದು ಮೃತಪಟ್ಟರು.

ಆರ್.ನರಸಿಂಹಾಚಾರ್



ಸಂಶೋಧನೆ, ಭಾಷಾ ವಿಜ್ಞಾನ, ಶಾಸನ, ಗ್ರಂಥ ಸಂಪಾದನಾ ಕ್ಷೇತ್ರದಲ್ಲಿ ಮಿಂಚಿ ಖ್ಯಾತರಾದವರು ಆರ್.ನರಸಿಂಹಾಚಾರ್. ಶ್ರೀರಂಗಪಟ್ಟಣದ ಸಮೀಪದ ಮಂಡ್ಯದ ಕೊಪ್ಪಲುವಿನಲ್ಲಿ 1861 ಏ.9ರಂದು ತಿರುನಾರಾಯಣ ಪೆರುಮಾಳ್, ಶಿಂಗಮ್ಮಾಳು ದಂಪತಿಗೆ 3ನೇ ಮಗುವಾಗಿ ಜನಿಸಿದ ಇವರು, ಕನ್ನಡಕ್ಕೆ ಸಲ್ಲಿಸಿದ ಸೇವೆ ಅಪಾರ. 1882ರಲ್ಲಿ ಬಿ.ಎ. 1893ರಲ್ಲಿ ಮದ್ರಾಸ್ ವಿವಿಯಿಂದ ಕನ್ನಡ ಎಂಎ ಪದವಿ ಪಡೆದಿದ್ದು, ನೀತಿಮಂಜರಿ ಪದ್ಯ, ನೀತಿ ವಾಕ್ಯಮಂಜರಿ (ಗದ್ಯ), ಕರ್ನಾಟಕ ಕವಿ ಚರಿತೆ ಸಂಪುಟಗಳನ್ನು ರಚಿಸಿದ್ದು, ಕರ್ನಾಟಕ ಭಾಷಾಭೂಷಣ ಮತ್ತು ಕಾವ್ಯಾವಲೋಕನ ಕೃತಿ ಸಂಪಾದಿಸಿದ್ದಾರೆ.

ಕೆ.ಎಸ್.ನರಸಿಂಹಸ್ವಾಮಿ



ಕನ್ನಡದ ಪ್ರಥಮ ಪ್ರೇಮ ಕವನ ಸಂಕಲನವಾದ ತೀನಂಶ್ರೀ ಅವರ ಒಲುಮೆ ಕೃತಿಯ ಪ್ರೇರಣೆಯಿಂದ ಮೈಸೂರು ಮಲ್ಲಿಗೆ ಪುಸ್ತಕದ ಮೂಲಕ ನಕ್ಷತ್ರದಂತೆ ಮಿನುಗಿದವರು ಕೆ.ಎಸ್. ನರಸಿಂಹಸ್ವಾಮಿ. ಕಿಕ್ಕೇರಿ ಸುಬ್ಬರಾಯರು ಮತ್ತು ಹೊಸ ಹೊಳಲು ನಾಗಮ್ಮನವರ ಪುತ್ರನಾಗಿ ಕಿಕ್ಕೇರಿಯಲ್ಲಿ 26-1-1915ರಂದು ಜನಿಸಿದರು. ಬಿ.ಎ ಪೂರ್ಣಗೊಳಿಸಿದ ಇವರು, ಮೈಸೂರು ಮಲ್ಲಿಗೆ, ಐರಾವತ, ದೀಪದ ಮಲ್ಲಿ, ದುಂಡು ಮಲ್ಲಿಗೆ ಸೇರಿದಂತೆ ಅನೇಕ ಪ್ರೇಮ ಗೀತೆಗಳನ್ನು ರಚಿಸಿದ್ದಾರೆ. ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಪಂಪ ಪ್ರಶಸ್ತಿ ಪಡೆದಿದ್ದಾರೆ. 1990ರ ಮೈಸೂರು ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದ ಕೆಎಸ್ ಎನ್ 2003 ಡಿ.28ರಂದು ನಿಧನರಾದರು.

ತಾಯೇ ನಿನ್ನ ಪ್ರೀತಿಯ ಬಾಗಿನ ಎಲ್ಲಕೂ ಮೀರಿದ್ದು | ಗಾಳಿ ನೀರು ಅನ್ನದ ರಕ್ಷೆ ಮಾತಿಗೆ ನಿಲುಕದ್ದು
ಕನ್ನಡದಂಥ ಕಂಪಾಡುವ ನುಡಿ ನಾಲಿಗೆಗೇರಿದ್ದು | ಕುಮಾರವ್ಯಾಸ ಪಂಪ ಕುವೆಂಪು ಬಂಧುಗಳಾದದ್ದು

❖ *ಡಾ. ಲಕ್ಷ್ಮೀನಾರಾಯಣ ಭಟ್ಟ*


87ನೇ ಅಖಿಲ ಭಾರತ
ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ
ಆಗಮಿಸುವ ಸರ್ವರಿಗೂ
ಹಾರ್ದಿಕ ಶುಭಾಶಯಗಳು...
ಶುಭ ಕೋರುವವರು
ಶ್ರೀ ಎಸ್.ಪಿ. ಸ್ವಾಮಿ
ಮನ್‌ಮುಲ್ ನಿರ್ದೇಶಕರು ಗೆಜ್ಜಲಗೆರೆ
ಹಾಗೂ ಬಿಜೆಪಿ ಮುಖಂಡರು
ಮದ್ದೂರು ವಿಧಾನಸಭಾ ಕ್ಷೇತ್ರ.
ಎಸ್. ಶಿವರಾಜು
ಎಳನೀರು ವ್ಯಾಪಾರಿಗಳು
ಎ.ಪಿ.ಎಂ.ಸಿ. ಮಾಜಿ ನಿರ್ದೇಶಕರು ಹಾಗೂ
ಯುವ ಮುಖಂಡರು ಮತ್ತು ವೀರಾಂಜನೇಯ ಟ್ರೇಡರ್ಸ್ ಮಾಲೀಕರು
ಎಚ್.ಕೆ.ವಿ. ನಗರ, ಮದ್ದೂರು ತಾ|

ತ್ರಿವೇಣಿ

ಕನ್ನಡದ ಕಾದಂಬರಿಗಳ ಮೂಲಕ ಎಲ್ಲರನ್ನೂ ಆಕರ್ಷಿಸಿದವರು ತ್ರಿವೇಣಿ ಎಂಬ ಕಾವ್ಯ ನಾಮದಿಂದ ಪ್ರಖ್ಯಾತರಾದ ಭಾಗೀರಥಿ ಅವರು. ಬಿ.ಎಂ.ಶ್ರೀ ಅವರ ತಮ್ಮ ಬಿ.ಎಂ.ಕೃಷ್ಣಸ್ವಾಮಿಯವರ 2ನೇ ಮಗಳಾದ ತ್ರಿವೇಣಿ 1928 ಸೆ.1ರಂದು



ಜನಿಸಿದ್ದು, ಅವರ ಹುಟ್ಟು ಹೆಸರು ಭಾಗೀರಥಿ. ಹುಟ್ಟಿದಾಗ ಇಟ್ಟ ಭಾಗೀರಥಿ ಎಂಬ ಹೆಸರು ಶಾಲೆಗೆ ಸೇರಿದಾಗ ಅನಸೂಯ ಎಂದಾಯಿತು. ಇವರು ಸಣ್ಣಕಥೆಗಳ ಮೂಲಕ ಸಾಹಿತ್ಯ ರಂಗ ಪ್ರವೇಶಿಸಿ ಕಾದಂಬರಿಗಾರ್ತಿಯಾಗಿ ಹೆಸರಾದರು. ಎರಡು ಮನಸ್ಸು, ಸಮಸ್ಯೆಯ ಮಗು, ಹೂವು ಹಣ್ಣು, ಅಪಜಯ, ಸೋತುಗೆದ್ದವಳು, ಕೀಲುಗೊಂಬೆ, ಕಾಶೀಯಾತ್ರೆ ಸೇರಿದಂತೆ ಅನೇಕ ಕಾದಂಬರಿ ಬರೆದಿದ್ದ ತ್ರಿವೇಣಿ ಅವರು 1963 ಜುಲೈ 29ರಂದು ಕೈಲಾಸ ಸೇರಿದರು.

ಬಿ.ಸಿ.ರಾಮಚಂದ್ರಶರ್ಮ

ಆಧುನಿಕ ಕನ್ನಡ ಕಾವ್ಯಚರಿತ್ರೆಯಲ್ಲಿ ಹೆಸರು ಗಳಿಸಿದವರು ಬಿ.ಸಿ.ರಾಮಚಂದ್ರಶರ್ಮ. ನಾಗಮಂಗಲದ ಬಳಿಯ ಬೋಗಾದಿಯಲ್ಲಿ ಬಿ. ಚಂದ್ರಶೇಖರ ಶರ್ಮ ಮತ್ತು ಲಕ್ಷ್ಮೀದೇವಮ್ಮ ಇವರ ಮಗನಾಗಿ 1925 ನವೆಂಬರ್ 28ರಂದು ಜನ್ಮತಾಳಿದರು. ಮೈಸೂರು ವಿಶ್ವವಿದ್ಯಾನಿಲಯದಿಂದ ಬಿ.ಎಸ್ಸಿ, ಬಿ.ಎಡ್ ಪದವಿ ಪಡೆದ ಶರ್ಮ, ಅಧ್ಯಾಪಕರಾಗಿ ಸೇವೆ ಸಲ್ಲಿಸಿದ್ದಾರೆ. ಕವನ ಸಂಕಲನವಾದ ಹೃದಯಗೀತ, ಏಳುಸುತ್ತಿನ ಕೋಟೆ,



ಬುವಿನೀಡಿದ ಸ್ಫೂರ್ತಿ, ಹೇಸರಗತ್ತೆ, ಬ್ರಾಹ್ಮಣ ಹುಡುಗ, ಮಾತು ಮಾಟ, ಸಪ್ತಪದಿ, ಕಥಾ ಸಂಕಲನವಾದ ಮಂದಾರ ಕುಸುಮ, ಏಳನೆಯ ಜೀವ, ಬೆಳಗಾಯಿತು, ಕತೆಗಾರನ ಕತೆ, ನಾಟಕಗಳಾದ ಸೆರಗಿನ ಕೆಂಡ, ನೆರಳು, ಬಾಳ ಸಂಜೆ, ನೀಲಿ ಕಾಗದ ಹೀಗೆ ಅನೇಕ ಕೃತಿಯನ್ನು ರಚಿಸಿದ್ದಾರೆ.

ಸುಜನಾ

ಸುಜನಾ ಎಂಬ ಕಾವ್ಯನಾಮದಿಂದ ಸಾಹಿತ್ಯ ಲೋಕದಲ್ಲಿ ಪ್ರಖ್ಯಾತರಾದ ಎಸ್.ನಾರಾಯಣ ಶೆಟ್ಟರು ಕೆ.ಆರ್.ಪೇಟೆ ತಾಲೂಕು ಹೊಸಹೊಳಲು



ಗ್ರಾಮದಲ್ಲಿ ಸುಬ್ಬಾಶೆಟ್ಟಿ ಮತ್ತು ಗೌರಮ್ಮ ದಂಪತಿ ಪುತ್ರನಾಗಿ 1930 ಏಪ್ರಿಲ್ 13ರಂದು ಹುಟ್ಟಿದ್ದರು. ಬಿ.ಎ.ಆನರ್ಸ್ (1953) ನಂತರ ಎಂಎ ಪದವಿ (1954) ಪಡೆದ ಸುಜನಾ, ಅದೇ ವರ್ಷ ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ಅಧ್ಯಾಪಕ ವೃತ್ತಿ ಆರಂಭಿಸಿ, ಮೈಸೂರು ವಿವಿ ಕುಲಸಚಿವರಾಗಿ (1985– 87) ಸೇವೆ ಸಲ್ಲಿಸಿದರು. ಕುವೆಂಪು, ತೀನಂಶ್ರೀ, ಡಿಎಲ್‌ಎನ್, ಪುತಿನ ಶಿಷ್ಯರಾಗಿ ಸಾಹಿತ್ಯ ಕೃಷಿ ಮಾಡಿದರು. ಮಂಗಳಾರತಿ, ನಾಣ್ಯ ಯಾತ್ರೆ, ಇಬ್ಬನಿ ಆರತಿ, ಚಿಲಿಪಿಲಿ (ಮಕ್ಕಳ ಕವನ ಸಂಕಲನ), ಹೃದಯ ಸಂವಾದ, ಕುಮಾರವ್ಯಾಸ, ಪುತಿನ ಸಾಹಿತ್ಯದ ಕೆಲವು ಹೊಳಹುಗಳು ಹೀಗೆ ವಿವಿಧ ಕೃತಿ ರಚಿಸಿದ ಸುಜನಾ, ವರ್ಧಮಾನ ಪ್ರಶಸ್ತಿ, ಸಾಹಿತ್ಯ ಅಕಾಡೆಮಿಯ ಗೌರವ ಪ್ರಶಸ್ತಿ, ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪಡೆದಿದ್ದು, ಮಂಡ್ಯ ಜಿಲ್ಲಾ ಸಾಹಿತ್ಯ ಸಮ್ಮೇಳನದ (1996) ಅಧ್ಯಕ್ಷರಾಗಿದ್ದರು.

ಜಿ.ನಾರಾಯಣ

ಕನ್ನಡ ವಿದ್ವಾಂಸರಾಗಿ, ಉತ್ತಮ ಆಡಳಿತಗಾರರಾಗಿ ಬೆಳಕುಕಂಡವರು ಜಿ.ನಾರಾಯಣ. ಇವರು 1923 ಸೆಪ್ಟೆಂಬರ್ 2ರಲ್ಲಿ ಮದ್ದೂರು ತಾಲೂಕಿನ ದೇಶಹಳ್ಳಿಯಲ್ಲಿ ಜನಿಸಿದರು. 1964ರಲ್ಲಿ ಬೆಂಗಳೂರಿನ ಮೇಯರ್ ಆಗಿ, 1969ರಲ್ಲಿ ಕಸಾಪ ಅಧ್ಯಕ್ಷರಾಗಿ, 1992ರಲ್ಲಿ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿ ಹೆಸರಾದರು. ಅಕ್ಷರವ ನೀವ್ ಕಲಿಯಿರಿ,



ಮಲೇರಿಯಾ ಹಾವಳಿ, ಕಬ್ಬಿನ ಕಥಾಂತರ, ರಾಷ್ಟ್ರೀಯ ಪದಗಳು, ಹೆಚ್ಚು ಬೆಳೆಯನ್ನು ಬೆಳೆಯಿರಿ ಮುಂತಾದ ಕೃತಿಗಳು ಸಾಹಿತ್ಯ ಕೃಷಿಗೆ ಸಾಕ್ಷಿಯಾಗಿದ್ದು, ನಾರಾಯಣರು 2011 ನವೆಂಬರ್ 19ರಂದು ಈ ಲೋಕವನ್ನಗಲಿದರು.

ಜಿ.ವೆಂಕಟಸುಬ್ಬಯ್ಯ

ನಿಘಂಟು ತಜ್ಞ ಎಂದೇ ಹೆಸರಾದ ಜಿ. ವೆಂಕಟಸುಬ್ಬಯ್ಯ ಅವರು ಗಂಜಾಂನಲ್ಲಿ ವಿದ್ವಾನ್ ತಿಮ್ಮಣ್ಣಯ್ಯ – ಶ್ರೀಮತಿ ಸುಬ್ಬಮ್ಮ ದಂಪತಿಯ ಹಿರಿಯ ಮಗನಾಗಿ 1913 ಆ.23ರಂದು ಹುಟ್ಟಿದರು. ಎಂಎ ಶಿಕ್ಷಣ ಪಡೆದ ಜಿ.ವಿ ಅವರು ಅನುಕಲ್ಪನೆ ಎಂಬ ವಿಮರ್ಶೆ, ಇಣುಕು ನೋಟ, ಕನ್ನಡ–ಕನ್ನಡ ಇಂಗ್ಲಿಷ್ ನಿಘಂಟು, ಕನ್ನಡ–ಕನ್ನಡ ಸಂಕ್ಷಿಪ್ತ ನಿಘಂಟು, ಕನ್ನಡ ನಿಘಂಟು ಶಾಸ್ತ್ರಪರಿಚಯ ಹೀಗೆ ನಿಘಂಟು ಶಾಸ್ತ್ರಕ್ಕೆ ಸಂಬಂಧಿಸಿದ ಕೃತಿಗಳನ್ನು ರಚಿಸಿದ್ದಾರೆ. ನಳಚರಿತ್ರೆ ಸಂಗ್ರಹ, ನಾಗರಸನ ಕನ್ನಡ ಭಗವದ್ಗೀತೆ, ಮುದ್ದಣ ಭಂಡಾರ ಕೃತಿಯನ್ನು



ಸಂಪಾದಿಸಿದ್ದಾರೆ. 2011 ಬೆಂಗಳೂರಿನಲ್ಲಿ ನಡೆದ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು. ವಿವಿಧ ಪ್ರಶಸ್ತಿಗಳನ್ನು ಪಡೆದಿದ್ದಾರೆ.

ಪ್ರೊ.ಕೆ.ಭೈರವಮೂರ್ತಿ

ಕವಿತೆ, ಶಿಶು ಸಾಹಿತ್ಯ, ಚುಟುಕು ಸಾಹಿತ್ಯ, ಚಿಂತನ ಕೃತಿಗಳ ಮೂಲಕ ಸಾಹಿತ್ಯ ಕ್ಷೇತ್ರವನ್ನು ಶ್ರೀಮಂತಗೊಳಿಸಿದವರು ಪ್ರೊ.ಕೆ.ಭೈರವಮೂರ್ತಿ. ಇವರು ಕೊತ್ತತ್ತಿ ಹೋಬಳಿಯ ಸಂತೆಕಸಲಗೆರೆ ಗ್ರಾಮದ ಕೃಷ್ಣಮೂರ್ತಿ ಮತ್ತು ಗೌರಮ್ಮ ದಂಪತಿ ಮಗನಾಗಿ 1945 ಮೇ 30ರಲ್ಲಿ ಜನ್ಮತಾಳಿದರು.



ಕನ್ನಡ ಅಧ್ಯಾಪಕರಾಗಿ ಸೇವೆ ಸಲ್ಲಿಸಿದ ಇವರು, ನಾನೂರಕ್ಕೂ ಹೆಚ್ಚು ಅಂಕಣ ಬರೆಹಗಳು, ಮೂರು ಸಾವಿರಕ್ಕೂ ಹೆಚ್ಚು ಆಧುನಿಕ ವಚನಗಳನ್ನು ಬರೆದಿದ್ದಾರೆ. ಮಂಡ್ಯ ಜಿಲ್ಲೆಯ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು. 15ಕ್ಕೂ ಹೆಚ್ಚು ಗ್ರಂಥ ಸಂಪಾದಿಸಿದ್ದಾರೆ.

ಜೀ.ಶಂ.ಪರಮಶಿವಯ್ಯ

ಜೀಶಂಪ ಎಂದೇ ವಿಖ್ಯಾತರಾದವರು ಜಾನಪದ ವಿದ್ವಾಂಸರಾದ ಜೀ.ಶಂ.ಪರಮಶಿವಯ್ಯನವರು. ಇವರು ನಾಗಮಂಗಲ ತಾಲೂಕಿನ ಅಂಚಲ ಜೀರಹಳ್ಳಿಯಲ್ಲಿ 1933 ನ.12ರಂದು ಜನಿಸಿದರು. ವಿದ್ಯಾರ್ಥಿ ಜೀವನದಲ್ಲೇ ಇವರು ಕವನಗಳನ್ನು ಬರೆಯುತ್ತಿದ್ದರು. ಮಹಾರಾಜ ಕಾಲೇಜಿನಲ್ಲಿ ಬಿ.ಎ, ಎಂ.ಎ ಪದವಿ ಪಡೆದು, 'ಜಾನಪದ' ಮಹಾಪ್ರಬಂಧ ಮಂಡಿಸಿ ಡಾಕ್ಟರೇಟ್ ಪದವಿ



ಗಳಿಸಿದರು. ಜಾನಪದ ಉಳಿವಿಗಾಗಿ ದುಡಿದರು. 1967ರಲ್ಲಿ ತರೀಕೆರೆಯಲ್ಲಿ ನಡೆದ ಪ್ರಥಮ ಜಾನಪದ ಸಮ್ಮೇಳನದ ವೇಳೆ ಜೀಶಂಪ ಸಂಪಾದಕತ್ವದಲ್ಲಿ ಪ್ರಕಟಗೊಂಡ 'ಹೊನ್ನಬಿತ್ತೇವು ಹೊಲಕೆಲ್ಲ' ಕೃತಿ ಜಾನಪದ ಕ್ಷೇತ್ರದ ಅಪೂರ್ವ ಕೃತಿಯಾಗಿದೆ. ಸಿಡಿಲ ಮರಿಗಳು, ಸಾಹಸಯಾತ್ರೆ, ಕಲಾಸಾಧಕ ಹೀಗೆ ಕೃತಿಗಳನ್ನು ರಚಿಸಿದ್ದ ಇವರಿಗೆ ಅನೇಕ ಪ್ರಶಸ್ತಿ, ಗೌರವ ಸಂದಿದ್ದು, 1995 ಜೂನ್ 17ರಂದು ಸ್ವರ್ಗಸೇರಿದರು.

ನಾಗತಿಹಳ್ಳಿ ಚಂದ್ರಶೇಖರ್

ಬಹುಮುಖ ಪ್ರತಿಭೆ ಹೊಂದಿರುವ ನಾಗತಿಹಳ್ಳಿ ಚಂದ್ರಶೇಖರ್ ಅವರು ಸಾಹಿತ್ಯ, ಸಿನಿಮಾ ಕ್ಷೇತ್ರದಲ್ಲಿ ನಕ್ಷತ್ರದಂತೆ ಮಿಂಚುತ್ತಿದ್ದಾರೆ. ಇವರು ನಾಗತಿಹಳ್ಳಿ ಗ್ರಾಮದಲ್ಲಿ 1958 ಆ.15ರಲ್ಲಿ ತಿಮ್ಮಶೆಟ್ಟಿ ಗೌಡ–ಪಾರ್ವತಮ್ಮ ದಂಪತಿ ಪುತ್ರನಾಗಿ ಜನಿಸಿದರು. ಕಥೆ,



ಕಾದಂಬರಿ ಒಳಗೊಂಡ ಸುಮಾರು 40ಕ್ಕೂ ಹೆಚ್ಚು ಕೃತಿಗಳು ಬೆಳಕು ಕಂಡಿವೆ. ರಾಜ್ಯೋತ್ಸವ ಪ್ರಶಸ್ತಿ ಸೇರಿದಂತೆ ವಿವಿಧ ಪ್ರಶಸ್ತಿ ಗಳನ್ನು ಗಳಿಸಿದ್ದಾರೆ.◆

ಒಬ್ಬ ಮನುಷ್ಯ, ಆತನ ಸ್ನೇಹಿತರು ಹೊಗಳಿ ಹಾಡುವಷ್ಟು ಒಳ್ಳೆಯವನೂ ಇರುವುದಿಲ್ಲ, ಅವನಿಗಾಗದವರು ತೆಗಳಿ ತಿರಸ್ಕರಿಸುವಷ್ಟು ಕೆಟ್ಟವನೂ ಇರುವುದಿಲ್ಲ.

❖ *ಮಾಸ್ತಿ ವೆಂಕಟೇಶ ಅಯ್ಯಂಗಾರ್*


೮೭ನೇ ಅಖಿಲ ಭಾರತ
ಕನ್ನಡ ಸಾಹಿತ್ಯ ಸಮ್ಮೇಳನದ ಶುಭಾಶಯಗಳು
HOTEL THIMMADAS
Pure - Veg
Hotel Thimmadas
: 9141996633
08232-298022
THIMMADAS STEELS
CTS BAR & RESTAURA
THIMMADAS
TOURS, TRAVELS & TRANSPORT
Bangalore - Mysore Road, Somanahalli, Maddur-571429.
Email : hotelthimmadas@gmail.com

ಕೊಕ್ಕರೆ ಬೆಳ್ಳೂರಿನಲ್ಲಿ ಹಕ್ಕಿಗಳ ಕಲರವ

ನವೆಂಬರ್‌ನಲ್ಲಿ ದೇಶ, ವಿದೇಶಗಳಿಂದ ಆಗಮಿಸುವ ಪಕ್ಷಿಗಳು

ಕೊಕ್ಕರೆಗಳ ಅಚ್ಚುಮೆಚ್ಚಿನ ತಾಣ ಬೆಳ್ಳೂರು





❖ **ಅನುಪಮಾ ಸತೀಶ್,**
ಕಿರುಗಾವಲು

ಕೊಕ್ಕರೆಗಳಿಗೆ ರಾಜ್ಯದಲ್ಲಿ ಅಚ್ಚುಮೆಚ್ಚಿನ ತಾಣಗಳ ಪೈಕಿ ಒಂದಾದ ಕೊಕ್ಕರೆ ಬೆಳ್ಳೂರಿನಲ್ಲಿ ಪಕ್ಷಿಗಳ ಕಲರವ ನೋಡುಗರ ಮನಸಿಗೆ ಮುದ ನೀಡುವಂತಿದೆ.

ಅಂತಾರಾಷ್ಟ್ರೀಯ ಮಟ್ಟದಲ್ಲಿ ಹೆಸರು ಮಾಡಿರುವ ಕೊಕ್ಕರೆ ಬೆಳ್ಳೂರಿನಲ್ಲಿ ನವೆಂಬರ್ ತಿಂಗಳು ಬಂತೆಂದರೆ ಫೆಲಿಕಾನ್ ಹಕ್ಕಿಗಳು ಬರಲು ಪ್ರಾರಂಭಿಸುತ್ತವೆ. ಹಾಗೆಯೇ ಪ್ರತೀವರ್ಷ ಜನವರಿಯಲ್ಲಿ ನಿಗದಿತ ಸಮಯಕ್ಕೆ ಪಾರ್ಕ್‌ಪೇಂಟರ್, ನೈಟ್‌ಎರಾನ್, ವೈಟ್‌ಹೇಬಿಸ್, ಹೆಜ್ಜಾರ್ಲೆ, ಪಾಂಡ್‌ಎರಾನ್, ಕಾರ್ಮೋರ್‌ರೆಂಟ್ ಸೇರಿದಂತೆ ವಿವಿಧ ಬಗೆಯ ಕೊಕ್ಕರೆಗಳು ಶ್ರೀಲಂಕಾ, ಬಾಂಗ್ಲಾದೇಶ, ಪಾಕಿಸ್ತಾನ ಹಾಗೂ ವಿವಿಧ ದೇಶದ ಮೂಲೆ-ಮೂಲೆಯಿಂದ ಇಲ್ಲಿಗೆ ಬರುತ್ತವೆ. ಮದ್ದೂರು ತಾಲೂಕಿನ ಬೆಳ್ಳೂರು ಗ್ರಾಮದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಕೊಕ್ಕರೆಗಳು ವಾಸಿಸುತ್ತಿ ರುವುದರಿಂದ ಈ ಗ್ರಾಮ ಕೊಕ್ಕರೆ ಬೆಳ್ಳೂರು ಎಂದೇ ಪ್ರಸಿದ್ಧಿ ಪಡೆದಿದೆ.

> **ಕನ್ನಡ ವಾಙ್ಮಯ ಬೆಳೆಸುವುದೆಂದರೆ ಉತ್ಕೃ ಷ್ಟ ಗ್ರಂಥಗಳ ಬೆಳವಣಿಗೆ ಅಷ್ಟೇ ಅಲ್ಲ. ಮುದ್ರಕರು, ಪುಸ್ತಕ ಮಾರುವವರು, ಲಘು, ಮಧ್ಯಮ, ಉದಾತ್ತ ಗ್ರಂಥಮಾಲೆಗಳನ್ನು ಹೊರಡಿಸಿ ವಾಙ್ಮಯ ಬೆಳೆಸಬೇಕು.**
>
> ❖ *ಆಲೂರು ವೆಂಕಟರಾಯರು*


87ನೇ ಅಖಿಲ ಭಾರತ ಕನ್ನಡ ಸಾಹಿತ್ಯ
ಸಮ್ಮೇಳನಕ್ಕೆ ಆಗಮಿಸುವ ಸರ್ವರಿಗೂ
ಹಾರ್ದಿಕ ಶುಭಾಶಯಗಳು
ಗೊ.ರು.ಚನ್ನಬಸಪ್ಪ ಅವರ
ನೇತೃತ್ವದಲ್ಲಿ ಮಂಡ್ಯದಲ್ಲಿ ನಡೆಯುವ
ಸಾಹಿತ್ಯ ಸಮ್ಮೇಳನಕ್ಕೆ ಸುಸ್ವಾಗತ....
ಶುಭ ಕೋರುವವರು
ಮಲ್ಲಿಕಾರ್ಜುನ್
ರಾಜ್ಯಾಧ್ಯಕ್ಷರು
ರಾಜ್ಯ ಆರ್‌ಟಿಓ ಅಧಿಕಾರಿಗಳ ಸಂಘ
ಮತ್ತು
ಸಮಾಜ ಸೇವಕರು, ಕೆ.ಆರ್. ಪೇಟೆ
ಜಿ.ಕೆ. ಮಹೇಶ್
ಅಧ್ಯಕ್ಷರು
ಆರ್.ಟಿ.ಓ. ಮಲ್ಲಿಕಾರ್ಜುನ್
ಅಭಿಮಾನಿಗಳ ಸಂಘ (ರಿ.)



ಬೆಳ್ಳೂರಿಗೆ ಹೋಗುವ ಮಾರ್ಗ

ಶಿಂಷಾನದಿ ದಂಡೆಯಲ್ಲಿರುವ ಭಾರತೀನಗರದಿಂದ 10 ಕಿ.ಮೀ., ಮದ್ದೂರಿನಿಂದ 12 ಕಿ.ಮೀ. ದೂರವಿರುವ ಕೊಕ್ಕರೆ ಬೆಳ್ಳೂರು ಪಕ್ಷಿಧಾಮ ಗೊತ್ತಿಲ್ಲದವರಿಲ್ಲ. ಪಕ್ಷಿಧಾಮ ಎಂಬ ಕಾರಣದಿಂದಾಗಿಯೇ ಇಂದು ಪ್ರವಾಸಿ ತಾಣವಾಗಿಯೂ ರೂಪುಗೊಂಡಿದೆ. ಕೊಕ್ಕರೆಗಳು ಸಕಾಲದಲ್ಲಿ ಬೆಳ್ಳೂರಿಗೆ ಬಂದಿಲ್ಲ ಎಂದರೆ ಗ್ರಾಮಸ್ಥರು ಮತ್ತು ಪ್ರವಾಸಿಗರಿಗೆ ತಳಮಳ ಶುರುವಾಗುತ್ತದೆ. ಕೊಕ್ಕರೆಗಳು ಬಾರದಿದ್ದರೆ ಕೇಡು ಸಂಭವಿಸುವುದು ನಿಶ್ಚಿತ ಎಂಬ ನಂಬಿಕೆ ಇಲ್ಲಿಯ ಜನರಲ್ಲಿ ಮನೆಮಾಡಿದೆ. ಕೊಕ್ಕರೆ ರಕ್ಷಣೆ ಹಾಗೂ ಕೊಕ್ಕರೆ ಬೆಳ್ಳೂರು ಅಭಿವೃದ್ಧಿ ದೃಷ್ಟಿಯಿಂದ ಸರ್ಕಾರ 1994ರಲ್ಲಿ ಹೆಜ್ಜೆರ್ಲೆ ಬಳಗ ಸ್ಥಾಪಿಸಿದೆ. ಮಳೆ, ಗಾಳಿಯಿಂದ ಗೂಡಿನಿಂದ ಮರಿಗಳು ಕೆಳಕ್ಕೆ ಬಿದ್ದು ಗಾಯಗೊಳ್ಳುವ ಕೊಕ್ಕರೆಗಳು ಮತ್ತು ಮರಿಗಳನ್ನು ರಕ್ಷಿಸಿ ಚಿಕಿತ್ಸೆ ನೀಡುವ ಕೆಲಸವನ್ನು ಬಳಗದ ಸದಸ್ಯರು ಮಾಡುತ್ತಿದ್ದಾರೆ. ಹೆಜ್ಜೆರ್ಲೆ ಬಳಗದೊಂದಿಗೆ ಗ್ರಾಮದ ಮಕ್ಕಳು ಕೈಜೋಡಿಸುತ್ತಾರೆ. ಇದೀಗ ಗ್ರಾಮದಲ್ಲಿ ಪಕ್ಷಿಮಾಹಿತಿ ಕೇಂದ್ರವನ್ನು ತೆರೆಯಲಾಗಿದೆ.

ಪ್ರವಾಸೋದ್ಯಮ ಸ್ಥಳವಾಗಿ ಅಭಿವೃದ್ಧಿ

ಇಲ್ಲಿನ ಸುತ್ತಮುತ್ತ ತೈಲೂರು ಕೆರೆ, ಅರೆತಿಪ್ಪೂರು ಗ್ರಾಮದ ಐತಿಹಾಸಿಕ ಸ್ಥಳ ಶ್ರಮಣಪ್ಪನ ಬೆಟ್ಟ ಹಾಗೂ ಅರಕನಹಳ್ಳಿ ಶಿಲಾಶಾಸನ ಸೇರಿದಂತೆ ಇನ್ನೂ ಹಲವು ಸ್ಥಳಗಳಿವೆ. ಇವುಗಳನ್ನು ಅಭಿವೃದ್ಧಿ ಮಾಡಿದರೆ ಈ ಭಾಗದಲ್ಲಿ ಒಂದು ಉತ್ತಮವಾದ ಪ್ರವಾಸೋದ್ಯಮ ಸ್ಥಳ ರೂಪುಗೊಳ್ಳುತ್ತದೆ. ಆದರೆ, ಸರ್ಕಾರದ ಇಚ್ಛಾಶಕ್ತಿ ಕೊರತೆಯಿಂದ ಅದು ಸಾಧ್ಯವಾಗಿಲ್ಲ ಎನ್ನುತ್ತಾರೆ ಪ್ರವಾಸಿಗರು.

ಹೆಜ್ಜಾರ್ಲೆಗಳಿಗೆ ಜಿಪಿಎಸ್ ಟ್ಯಾಗ್

ಕೊಕ್ಕರೆಗಳು ಯಾವ ದೇಶಗಳಿಗೆ ಹೋಗುತ್ತವೆ ಮತ್ತು ಬರುತ್ತವೆ ಎಂಬುದನ್ನು ತಿಳಿಯಲು ಜಿಪಿಎಸ್ ಅಳವಡಿಸಲಾಗಿದೆ. ಸಂಚಾರ ಮಾಡಿದ ಸಮಯ ಮತ್ತು ಎಷ್ಟು ದೂರ ಕ್ರಮಿಸಿವೆ ಎಂಬ ಅಧ್ಯಯನಕ್ಕೂ ಪ್ರಯೋಗ ನಡೆಯುತ್ತಿದೆ. ಹೆಜ್ಜಾರ್ಲೆ (ಪೆಲಿಕಾನ್)ಗಳ ಜೀವನ ಕ್ರಮ, ವಲಸೆಗಳ ಅಧ್ಯಯನಕ್ಕಾಗಿ ಕೊಕ್ಕರೆ ಬೆಳ್ಳೂರಿನ ಪಕ್ಷಿಧಾಮದಲ್ಲಿ ಅರಣ್ಯ ಇಲಾಖೆ ನೂತನ ಪ್ರಯೋಗಕ್ಕೆ ಮುಂದಾಗಿದ್ದು, ಮರಿಗಳಿಗೆ ಜಿಪಿಎಸ್ ಟ್ಯಾಗ್ ಅಳವಡಿಸಿ ಪ್ರಾಯೋಗಿಕ ಹಂತಕ್ಕೆ ಚಾಲನೆ ನೀಡಲಾಗಿದೆ. ಅರಣ್ಯ ಇಲಾಖೆ ವೈಲ್ಡ್‌ಲೈಫ್ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾ ಸಂಘಟನೆಯೊಂದಿಗೆ ಸೇರಿ ಈ ಕಾರ್ಯ ಮಾಡಲಾಗುತ್ತಿದೆ. ಈಗಾಗಲೇ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳ ಅನುಮತಿ ಪಡೆಯಲಾಗಿದೆ. ಜರ್ಮನಿಯಿಂದ ಉಪಕರಣ ತರಿಸಿದ್ದು, 4 ಲಕ್ಷ ರೂ. ವೆಚ್ಚ ಎಂದು ಅಂದಾಜಿಸಲಾಗಿದೆ. ಇದು ರಾಜ್ಯದಲ್ಲೇ ವಿನೂತನ ಪ್ರಯೋಗ ಎನ್ನಲಾಗಿದೆ. ಅಕ್ಟೋಬರ್, ನವೆಂಬರ್ ವೇಳೆಗೆ ಮತ್ತಷ್ಟು ಹಕ್ಕಿಗಳಿಗೆ ಟ್ಯಾಗ್ ಅವಳಡಿಸಲು ಯೋಜಿಸಲಾಗಿದೆ.



ಫೆಬ್ರವರಿ ತಿಂಗಳು ಬಂತೆಂದರೆ ಫೆಲಿಕಾನ್ ಕೊಕ್ಕರೆಗಳು ವರ್ಷದಲ್ಲಿ 6 ತಿಂಗಳ ಕಾಲ ಬೆಳ್ಳೂರಿನಲ್ಲಿ ನೆಲೆಸಿ ಗೂಡು ಕಟ್ಟಿಕೊಂಡು ವಾಸಿಸುತ್ತವೆ. ಈ ಪಕ್ಷಿಗಳನ್ನು ವೀಕ್ಷಿಸಲು ದೇಶ–ವಿದೇಶಗಳಿಂದ ಪಕ್ಷಿಪ್ರೇಮಿಗಳು ಬರುತ್ತಾರೆ. ಕೊಕ್ಕರೆ ವಿವಿಧ ಭಂಗಿ, ಆಹಾರ ಹಿಡಿಯಲು ಕುತೂಹಲಕರ ನೋಟ, ಒಂದಕ್ಕೊಂದು ಪ್ರೀತಿಮಾಡುವ ಮಧುರ ಕ್ಷಣಗಳು ಇವೆಲ್ಲವೂ ಇಲ್ಲಿನ ವೈಶಿಷ್ಟ್ಯ.

ಪಕ್ಷಿಗಳಿಗೆ ಕೊಕ್ಕರೆ ಬೆಳ್ಳೂರೇ ಇಷ್ಟ!

ರಾಜ್ಯದಲ್ಲಿ ಹಲವೆಡೆ ಪಕ್ಷಿಧಾಮಗಳಿವೆ. ಜೊತೆಗೆ ಶಿಂಷಾನದಿ ಪಾತ್ರದಲ್ಲಿ ನೂರಾರು ಹೆಮ್ಮರಗಳಿದ್ದರೂ ಹಕ್ಕಿಗಳಿಗೆ ಮಾತ್ರ ಶಿಂಷಾನದಿಯ ದಂಡೆಯ ಮೇಲಿನ ಶ್ರೀವೈದ್ಯನಾಥೇಶ್ವರ ದೇವಾಲಯ ಸಮೀಪದ ಕೊಕ್ಕರೇ ಬೆಳ್ಳೂರೇ ಇಷ್ಟ. ನವೆಂಬರ್–ಡಿಸೆಂಬರ್‌ನಲ್ಲಿ ಹೆಜ್ಜೆರ್ಲೆಗಳು ಬಂದು ಮೊಟ್ಟೆ ಇಡುತ್ತವೆ. ಜನವರಿಯಲ್ಲಿ ಬಣ್ಣದ ಕೊಕ್ಕರೆಗಳ ಆಗಮನ. ನಂತರ ವಿವಿಧ ಜಾತಿಗಳ ಹಕ್ಕಿಗಳ ದಂಡು ಬರುತ್ತವೆ. ಶಿಂಷಾ ನದಿ ಪಾತ್ರದಲ್ಲಿ ನೂರಾರು ಬಗೆಯ ಹೆಮ್ಮರಗಳಿ ದ್ದರೂ ಹಕ್ಕಿಗಳಿಗೆ ಸಂತಾನಾಭಿವೃದ್ಧಿಗೆ ಮಾತ್ರ ಕೊಕ್ಕರೆ ಬೆಳ್ಳೂರೇ ಸೂಕ್ತ ಸ್ಥಳ. ದೇಶ– ವಿದೇಶದಿಂದ ಪ್ರವಾಸಿಗರು ಬಾನಾಡಿಗಳ ಚಿಲಿಪಿಲಿ ಕೇಳಲು ಜನವರಿ ತಿಂಗಳನ್ನೇ ಕಾಯುತ್ತಿರುತ್ತಾರೆ. ಜನವರಿ ಯಿಂದ ಫೆಯಿಂಟೆಡ್, ವೈಟ್ ಹೇಬಿಸ್, ಲೈಟ್ ಹೆರಾನ್, ಪಾಂಡ್ ಹೆರಾನ್, ಕಾರ್ಮೋ ರೆಂಟ್, ಫೆಲಿಕಾನ್, ಹೆಜ್ಜೆರ್ಲೆ ಸೇರಿದಂತೆ ಹಲವು ಜಾತಿಯ ಹಕ್ಕಿಗಳು ಇಲ್ಲಿಗೆ ಬಂದು ವಂಶಾಭಿವೃದ್ಧಿ ಬಳಿಕ ಆಗಸ್ಟ್ ವೇಳೆಗೆ ಮರಿಗಳೊಂದಿಗೆ ವಾಪಸ್ ಹೋಗುತ್ತವೆ.◆

ಬಾಳ್ವೆ ಇರುವುದು ಕಲಿಯುವುದಕ್ಕೆ, ಕಲಿತು ತಿದ್ದಿಕೊಳ್ಳುವುದಕ್ಕೆ, ತಿದ್ದಿ ತೃಪ್ತಿ ಪಡೆಯುವುದಕ್ಕೆ. ಬಾಳು ಬೆದರುವುದಕ್ಕಾಗಿಯಲ್ಲ. ಬದುಕುವುದಕ್ಕಾಗಿ.

❖ *ಶಿವರಾಮ ಕಾರಂತ*



ಬಂಗಾರದೊಡ್ಡಿ ನಾಲೆ ಶ್ರೀರಂಗಪಟ್ಟಣಕ್ಕೆ ನೀರಿನ ಸೆಲೆ

ಕೆಆರ್‌ಎಸ್ ಜಲಾಶಯ ನಿರ್ಮಾಣಕ್ಕೂ ಮುನ್ನವೇ ನಿರ್ಮಿಸಿದ್ದ ಕಾಲುವೆ

❖ **ಗಂಜಾಂ ಮಂಜು,** ಶ್ರೀರಂಗಪಟ್ಟಣ

ಕ್ರಿ.ಶ.1638ರಿಂದ 1659ರವರೆಗೆ ಮೈಸೂರು ರಾಜ್ಯವನ್ನು ಒಡೆಯರ್ ರಾಜಮನೆತನದವರು ಆಳ್ವಿಕೆ ಮಾಡುತ್ತಿದ್ದ ಸಂದರ್ಭದಲ್ಲಿ ಶ್ರೀರಂಗಪಟ್ಟಣ ರಾಜಧಾನಿಯಾಗಿತ್ತು. ಆಗಿನ ಕಾಲದಲ್ಲೇ ಜನರು, ರೈತರ ಹಿತದೃಷ್ಟಿಯಿಂದ ಕಂಠೀರವ ನರಸರಾಜು ಒಡೆಯರ್ ನಿರ್ಮಿಸಿದ ಬಂಗಾರದೊಡ್ಡಿ ನಾಲೆ ಪ್ರಮುಖ ನೀರಿನ ಮೂಲಾಧಾರವಾಗಿತ್ತು. ನಾಲೆ ನಿರ್ಮಾಣವಾದ ಬಗೆ, ಕೃಷಿ ಚಟುವಟಿಕೆಗೆ ನೀರು ಬಳಕೆಯಾಗುತ್ತಿದ್ದ ಪ್ರಮಾಣದ ಕುರಿತು ಒಂದಿಷ್ಟು ಮಾಹಿತಿ ಇಲ್ಲಿದೆ....

ಪ್ರಸ್ತುತ ಮಂಡ್ಯ ಜಿಲ್ಲೆಯ ರೈತರು ಹಾಗೂ ಜನತೆಗೆ ಕೆ.ಆರ್.ಎಸ್. (ಕೃಷ್ಣರಾಜ ಸಾಗರ) ಜಲಾಶಯ ಜೀವನಾಡಿಯಾಗಿದೆ. ಕೃಷಿ ಚಟುವಟಿಕೆ, ಜನ ಹಾಗೂ ಜಾನುವಾರುಗಳ ದಾಹ ತೀರಿಸುತ್ತಾ ಜಿಲ್ಲಾದ್ಯಂತ ಹಸಿರು ಪರಿಸರದ ಸೌಂದರ್ಯ ಹೆಚ್ಚಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತಿದೆ. ಆದರೆ, ಕೆಆರ್ ಎಸ್ ಜಲಾಶಯ ನಿರ್ಮಾಣಕ್ಕೂ ಮುನ್ನ ಶ್ರೀರಂಗಪಟ್ಟಣಕ್ಕೆ ನೀರಿನ ಸೆಲೆಯಾಗಿದ್ದು 'ಬಂಗಾರದೊಡ್ಡಿ ಕಾಲುವೆ'... ಕಂಠೀರವ ನರಸರಾಜು ಒಡೆಯರ್ ಈ ನಾಲೆಯ ಸ್ಥಾಪಕರು.

ಕ್ರಿ.ಶ.1638ರಿಂದ 1659ರವರೆಗೆ ಶ್ರೀರಂಗಟಪ್ಪಣವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಮೈಸೂರು ರಾಜ್ಯವನ್ನು ಆಳ್ವಿಕೆ ಮಾಡಿದಂತಹ ಸಂದರ್ಭದಲ್ಲಿ ಜನರು ಹಾಗೂ ಕೃಷಿ ಚಟುವಟಿಕೆಗಳಿಗೆ ಅನುಕೂಲವಾಗಲೆಂಬ ಹಿನ್ನೆಲೆಯಲ್ಲಿ ನಾಲೆಯನ್ನು ನಿರ್ಮಿಸಿದ ಕೀರ್ತಿ ಕೀತಿ ಕಂಠೀರವ ನರಸರಾಜ ಒಡೆಯರ್ ಅವರಿಗೆ ಸಲ್ಲುತ್ತದೆ.

ತಾಲೂಕಿಗೆ ನರಸರಾಜ ಒಡೆಯರ್ ಕೊಡುಗೆ ಅಪಾರ

ಕೆಆರ್‌ಎಸ್ ಜಲಾಶಯ ನಿರ್ಮಿಸುವುದಕ್ಕೂ ಮುಂಚೆಯೇ ಅಂದರೆ, 375 ವರ್ಷಗಳ ಹಿಂದೆ ಶ್ರೀರಂಗಪಟ್ಟಣ ಮತ್ತು ಗಂಜಾಂಗೆ ಅನುಕೂಲವಾಗುವ ಉದ್ದೇಶದಿಂದ ಬಂಗಾರದೊಡ್ಡಿ ನಾಲೆಯನ್ನು ಒಡೆಯರ್ ತೋಡಿಸಿದ್ದರು.

ಮಡದಿ ನೆನಪಿಗಾಗಿ ನಾಲೆ!

ಗೂಳಿತಿಟ್ಟು ಪ್ರದೇಶದ ಚಂದ್ರವನ ಆಶ್ರಮದ

ಪುಣ್ಯಪುರುಷರ ನಾಡಿನಲ್ಲಿ ನಾವು ಹುಟ್ಟಿದೆವೆಂದು ಹೇಳಿಕೊಳ್ಳುವುದು ಸ್ವಾಭಾವಿಕ. ಆದರೆ, ಅವರ ಸಾಹಸದ ಎಲ್ಲೆಗಳನ್ನು ಮೀರಿ ಸಾಗುವಂಥ ಬದುಕನ್ನು ಬಾಳುವುದೇ ನಾವು ಪೂರ್ವಿಕರಿಗೆ ಸಲ್ಲಿಸಬೇಕಾದ ಕಾಣಿಕೆ.

❖ **ಎ. ಎನ್. ಮೂರ್ತಿರಾವ್**





ಶಿಥಿಲಾವಸ್ಥೆ ತಲುಪಿರುವ ನಾಲೆ

ಸಾಯಿಬಾಬಾ ಆಶ್ರಮದ ಎಡಭಾಗದಲ್ಲಿ ನಿರ್ಮಿಸಿರುವ ಈ ಮೇಲ್ಗಾಲುವೆಯನ್ನು ಚುರಕಿಗಾರೆ, ಕಲ್ಲು ಮತ್ತು ಇಟ್ಟಿಗೆಯಿಂದ ನದಿ ಮೇಲೆ ಸೇತುವೆ ನಿರ್ಮಿಸಿ, ಸೇತುವೆ ಮೇಲೆ ಕಾಲುವೆ ನಿರ್ಮಿಸಿ ಅದರ ಮೇಲೆ ರಸ್ತೆ ನಿರ್ಮಿಸಲಾಗಿದೆ. ಈ ಒಳ ಕಾಲುವೆ ಸದ್ಯ ಶಿಥಿಲಾವಸ್ಥೆಗೊಂಡು ಸೇತುವೆ ಮೇಲಿಂದ ನಾಲೆ ನೀರು ಸೋರಿಕೆಯಾಗುತ್ತಿತ್ತು. ಇದರಿಂದ ಪರ್ಯಾಯವಾಗಿ ಪಕ್ಕದಲ್ಲೊಂದು ನೂತನ ಸೇತುವೆ ನಿರ್ಮಿಸಿ ನಂತರ ಅದರಲ್ಲಿ ನಾಲೆ ಮೂಲಕ ನೀರು ಪೂರೈಕೆಯಾಗುವಂತೆ ಮಾಡಲಾಗಿದೆ. ಸುಮಾರು 50 ಕ್ಯುಸೆಕ್ಸ್ ನೀರು ಹರಿಯುವ ಸಾಮರ್ಥ್ಯ ಹೊಂದಿರುವ ಈ ನಾಲೆ ಗಂಜಾಂನ ಸಂಗಮದಲ್ಲಿ ಕಾವೇರಿ ನದಿ ಸೇರುತ್ತದೆ. ಈ ನಡುವೆ ಶ್ರೀರಂಗಪಟ್ಟಣ ಮತ್ತು ಗಂಜಾಂ ಗ್ರಾಮದ ಹಲವು ರೈತರಿಗೆ ಮೂಲಾಧಾರವಾಗಿದೆ. ಸುಮಾರು 2 ಸಾವಿರ ಎಕರೆ ಪ್ರದೇಶಕ್ಕೆ ಈ ಮೇಲ್ಗಾಲುವೆ ಮೂಲಕ ನೀರು ಸರಬರಾಜಾಗಿ ರೈತರ ಬೆಳೆಗಳಿಗೆ ನೀರುಣಿಸುತ್ತಿದ್ದು, ಈ ನಾಲೆಯನ್ನು ನಂಬಿಕೊಂಡು ರೈತರು ಭತ್ತ, ಕಬ್ಬು ಸೇರಿದಂತೆ ತೆಂಗು, ಬಾಳೆ ಇತರ ವಾಣಿಜ್ಯ ಬೆಳೆಗಳನ್ನು ಬೆಳೆದು ಜೀವನ ನಡೆಸುತ್ತಿದ್ದಾರೆ. ಈ ನಾಲೆ ಹರಿಯುವುದರಿಂದ ಕೊಳವೆ ಬಾವಿಗಳಿಗೂ (ಬೋರ್‌ವೆಲ್) ಸಹ ಮರು ಪೂರ್ಣವಾಗುತ್ತಿದೆ. ಆದರೆ, ಅಕ್ವಡಕ್ ಮೂಲಕವೇ ಹರಿದು ಬರುವ ಈ ನಾಲೆ ಅಕ್ವಡಕ್‌ನ್ನು ಉಳಿಸಿಕೊಳ್ಳಲು ಪಕ್ಕದಲ್ಲಿ ಬೇರೊಂದು ಸೇತುವೆ ನಿರ್ಮಿಸಿ ಶ್ರೀರಂಗಪಟ್ಟಣ ಮತ್ತು ಗಂಜಾಂ ರೈತರು ಸಂಕಷ್ಟಕ್ಕೆ ಸಿಲುಕದಂತೆ ನೋಡಿಕೊಳ್ಳಲಾಗಿದೆ. ಈ ಒಂದು ಅಕ್ವಡಕ್‌ನ್ನು ಸ್ಮಾರಕದಂತೆ ಹಿಂದಿನ ಸ್ಥಿತಿಯಲ್ಲೇ ಉಳಿಸಿಕೊಳ್ಳಾಗಿದೆ.

ಬಳಿ ಕಾವೇರಿ ನದಿಗೆ ಅಡ್ಡಲಾಗಿ ಅಣೆಕಟ್ಟೆ ನಿರ್ಮಿಸಿ, ಮಾಡಿ ಶ್ರೀರಂಗಪಟ್ಟಣ ಜನರ ಶ್ರೇಯೋಭಿವೃದ್ಧಿಗೆ ನಿರ್ಮಿಸಿದ ರಣಧೀರ ಕಂಠೀರವ ನರಸರಾಜ ಒಡೆಯರ್ ತಮ್ಮ ಮಡದಿ ಬಂಗಾರಮ್ಮ ನೆನಪಿಗೆ ಈ ನಾಲೆಯನ್ನು 1645 ಆಸುಪಾಸಿನಲ್ಲಿ ನಿರ್ಮಿಸಿರುವ ಪುರಾವೆಗಳಿವೆ.

ಸುತ್ತಲೂ ಕಾವೇರಿ ನೀರು ಹರಿಯುವ ಶ್ರೀರಂಗಪಟ್ಟಣ -ಗಂಜಾಂ ದ್ವೀಪದಲ್ಲಿನ ಬರಡು ಭೂಮಿಯನ್ನು ಫಲವತ್ತತೆ ಮಾಡಿ ನೀರಾವರಿ ಅಚ್ಚುಕಟ್ಟು ಪ್ರದೇಶವನ್ನಾಗಿಸಿದ ಧೀರ ರಣಧೀರ ಕಂಠೀರವ ನರಸರಾಜ ಒಡೆಯರ್ ಅವರ ಕೊಡುಗೆ ಅಪಾರ.

ಪಟ್ಟಣದ ನಾಗರಿಕರಿಗೆ ಈ ನಾಲೆ ಮೂಲಕ ಸುರಂಗ ಮಾರ್ಗದಂತೆ ಒಳ ಚರಂಡಿಗಳನ್ನು ನಿರ್ಮಿಸಿ ನಾಲೆಯಿಂದಲೇ ಪಟ್ಟಣದ ದೇವಾಲಯಗಳಿಗೆ ಕಾವೇರಿ ನದಿ ನೀರನ್ನು ಸುರಂಗ ಮಾರ್ಗದಲ್ಲಿನ ಚರಂಡಿ ಮೂಲಕ ಪಟ್ಟಣಕ್ಕೆ ಒದಗಿಸುತ್ತಿದ್ದರೆಂಬುದಕ್ಕೆ ಈಗಲೂ ಪಟ್ಟಣದಲ್ಲಿ ಕಾಣುವ ಹಳೆಯ ಸುರಂಗಗಳೇ ಸಾಕ್ಷಿ.

ಚಂದ್ರವನ ಆಶ್ರಮದ ಬಳಿಯಿರುವ ಬಂಗಾರ ದೊಡ್ಡಿ ನಾಲೆ ಗಂಜಾಂನ ಕಾವೇರಿ ಸಂಗಮದವರೆಗೂ ಸುಮಾರು 6 ಕಿ.ಮೀ. ಉದ್ದವಿದ್ದು, 1100 ಎಕರೆ ನೀರಾವರಿ ಗದ್ದೆ, ಹಾಗೂ 900 ಎಕರೆ ಬರಡು ಪ್ರದೇಶಕ್ಕೆ ಈ ನಾಲೆಯಿಂದ ನೀರೊದಗಿಸುವ ಕಾರ್ಯ ನಡೆಯುತ್ತಿತ್ತು. ಕೆ.ಆರ್. ಎಸ್. ಜಲಾಶಯ ಕಟ್ಟುವುದಕ್ಕೂ ಮುಂಚೆಯೇ ಈ



ಪ್ರದೇಶವನ್ನು 17ನೇ ಶತಮಾನದಲ್ಲಿ ನೀರಾವರಿ ಪ್ರದೇಶವನ್ನಾಗಿ ಮಾಡಲಾಯಿತು.

ಏಷ್ಯಾ ಖಂಡದಲ್ಲಿಯೇ 2ನೇ ನಾಲೆ

ಪಟ್ಟಣ ಹಾಗೂ ಗಂಜಾಂ ರೈತರಿಗೆ ಕೃಷಿ ಜೊತೆ ಕುಡಿಯುವ ನೀರನ್ನು ನದಿಯಿಂದ ನಾಲೆ ಮೂಲಕ ತಲುಪುವಂತೆ ಮಾಡಿ, ಬೆಳೆ ಬೆಳೆಯಲು ನಿರ್ಮಿಸಿದ ಈ ನಾಲೆ ಏಷ್ಯಾ ಖಂಡದಲ್ಲಿಯೇ ಎರಡನೇಯದ್ದೆಂಬ ಇತಿಹಾಸವಿದೆ. ಕಾವೇರಿ ನದಿಗೆ ಅಡ್ಡಲಾಗಿ ನದಿ ಮೇಲೆ ಸೇತುವೆ, ಸೇತುವೆ ಮೇಲೆ ನಾಲೆ ಸುರಂಗ ನಿರ್ಮಿಸಿ ನಾಲೆ ಮೇಲೆ ರಸ್ತೆ ನಿರ್ಮಿಸಲಾಗಿದೆ. ಈ ನಾಲೆ ಶ್ರೀರಂಗಪಟ್ಟಣಕ್ಕೆ ಪಶ್ಚಿಮದಲ್ಲಿ ಗೂಳಿತಿಟ್ಟು ಎಂಬಲ್ಲಿ ಕಾವೇರಿ ನದಿಗೆ ಒಡ್ಡು ನಿರ್ಮಿಸಿ ಗಂಜಾಂನ ಸಂಗಮ ಕೊನೆಗೆ ಸೇರುವಂತೆ ಸುಮಾರು 6 ಕಿ.ಮೀ. ಉದ್ದವಿದೆ. ಆದರೆ, ಈ ನಾಲೆ ಹರಿಯುವ ಮಾರ್ಗದಲ್ಲಿ ನದಿಯ ಮೇಲಿರುವಂತಹ ಮೇಲ್ಗಾಲುವೆ ಮೇಲೆ ನದಿ ದಾಟಲು ನಿರ್ಮಿಸಿದ ಸೇತುವೆ ಮೈಸೂರು-ಬೆಂಗಳೂರು ಮಾರ್ಗವಾಗಿದೆ. ◆

ಅಭಿವ್ಯಕ್ತಿ ಸ್ವಾತಂತ್ರ್ಯವೆಂದರೆ ಅದನ್ನು ಅವರು ದಯಪಾಲಿಸಬೇಕೆಂದು ಬೇಡಿ ಗಳಿಸಿಕೊಳ್ಳುವುದಲ್ಲ. ಅದು ನಮ್ಮ ಹಕ್ಕು. ಅನೇಕ ಪ್ರತಿರೋಧಗಳನ್ನು ಎದುರಿಸಿಯೂ ನಾವು ಮತ್ತೆ ಅದನ್ನು ಪ್ರತಿಷ್ಠಾಪಿಸಲು ಹೋರಾಡಬೇಕು.

❖ *ಚಂದ್ರಶೇಖರ ಪಾಟೀಲ (ಚಂಪಾ)*



ಶ್ರವಣಬೆಳಗೊಳಕ್ಕಿಂತಲೂ ಪುರಾತನ ಕ್ಷೇತ್ರ ಅರೆತಿಪ್ಪೂರು

12 ಅಡಿ ಎತ್ತರದ ಬಾಹುಬಲಿ ಮೂರ್ತಿ ಪ್ರಮುಖ ಆಕರ್ಷಣೆ

1200 ವರ್ಷಗಳ ಇತಿಹಾಸ ಹೊಂದಿರುವ ಅರೆತಿಪ್ಪೂರು



❖ ಅಣ್ಣೂರು ಸತೀಶ್,
ಭಾರತೀನಗರ

1200 ವರ್ಷಗಳ ಇತಿಹಾಸ ಹೊಂದಿರುವ ಅರೆತಿಪ್ಪೂರು ಜೈನ ಕ್ಷೇತ್ರವೆಂದೇ ಪ್ರಖ್ಯಾತಿಗಳಿಸಿರುವ ಸ್ಥಳ. ಶ್ರವಣಬೆಳಗೊಳಕ್ಕಿಂತ ಪುರಾತನ ಇತಿಹಾಸ ಹೊಂದಿರುವ ಈ ಕ್ಷೇತ್ರದಲ್ಲಿ ಬೆಟ್ಟದ ಮೇಲೆ ನೆಲೆಸಿರುವ 12 ಅಡಿ ಎತ್ತರದ ಬಾಹುಬಲಿ ಶಿಲಾ ಮೂರ್ತಿ ಪ್ರಮುಖ ಆಕರ್ಷಣೆ. ಶ್ರವಣಬೆಳ ಗೊಳದಲ್ಲಿರುವ ಮೂರ್ತಿ ಕ್ರಿ.ಶ.973ರಲ್ಲಿ ನಿರ್ಮಾಣವಾದರೆ, ಅರೆತಿಪ್ಪೂರು ಕ್ಷೇತ್ರದ ಶಿಲಾಮೂರ್ತಿ ಕ್ರಿ.ಶ. 843ರಲ್ಲಿ ನಿರ್ಮಾಣ ಗೊಂಡಿದೆ. ಮೊದಲು ಬಾಹುಬಲಿಗೆ ಮಹಾಮಸ್ತಕಾಭಿಷೇಕ ನೆರವೇರುವುದೂ ಇಲ್ಲೇ. ಬಳಿಕ ಶ್ರವಣಬೆಳಗೊಳದ ಬಾಹುಬಲಿಗೆ ಅಭಿಷೇಕ ನೆರವೇರಲಿದೆ.

ನಾಡಿನ ಜೈನ ಕ್ಷೇತ್ರವೆಂದೇ ಪ್ರಖ್ಯಾತವಾದ ಹಾಗೂ ಶ್ರವಣಬೆಳಗೊಳಕ್ಕಿಂತ ಪುರಾತನ ಇತಿಹಾಸ ಹೊಂದಿರುವ ಕ್ಷೇತ್ರವೆಂದರೆ ಮದ್ದೂರು ತಾಲೂಕು ಕೇಂದ್ರದಿಂದ 22 ಕಿ.ಮೀ. ದೂರದಲ್ಲಿರುವ ಅರೆತಿಪ್ಪೂರು ಜೈನ ಕ್ಷೇತ್ರ.

ತನ್ನನ್ನು ತಾನು ಗುರುತಿಸಿಕೊಂಡು, ತನ್ನ ಶಕ್ತಿ ಪರಿಮಿತಿಯನ್ನು ಅರಿತು, ತನ್ನ ತನದ ವೈಶಿಷ್ಟ್ಯವನ್ನು ಬೆಳೆಸಿಕೊಳ್ಳುತ್ತಾ ಉಳಿದವರ ಜತೆ ಸಮಭಾವದಿಂದ ಸಹಕರಿಸಲು ಕಲಿಸುವುದೇ ನಿಜ ಸಂಸ್ಕೃತಿ ಲಕ್ಷಣ.

❖ *ಗೋಪಾಲಕೃಷ್ಣ ಅಡಿಗ*


87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ
ಸಕ್ಕರೆ ನಾಡು ಮಂಡ್ಯದಲ್ಲಿ ನಡೆಯುವ 86ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಆಗಮಿಸುತ್ತಿರುವ ಕನ್ನಡ ಪ್ರೇಮಿಗಳಿಗೆ, ಎಲ್ಲಾ ರೈತ ಬಾಂಧವರಿಗೆ ತುಂಬು ಹೃದಯದ ಸುಸ್ವಾಗತ...
ಶ್ರೀ ಎಸ್.ಪಿ. ಸ್ವಾಮಿ
ಮನ್‌ಮುಲ್ ನಿರ್ದೇಶಕರು ಗೆಜ್ಜಲಗೆರೆ
ಹಾಗೂ ಬಿಜೆಪಿ ಮುಖಂಡರು
ಮದ್ದೂರು ವಿಧಾನಸಭಾ ಕ್ಷೇತ್ರ.
ಶುಭ ಕೋರುವ
ಸಂತೋಷ್ ಚನ್ನಸಂದ್ರ
ಯುವ ಮೋರ್ಚಾ ತಾಲ್ಲೂಕು ಅಧ್ಯಕ್ಷರು
ಮತ್ತು
ಮದ್ದೂರು ವಿಧಾನಸಭಾ ಕ್ಷೇತ್ರ



ವಿವಿಧೆಡೆಯಿಂದ ಆಗಮಿಸುವ ಜಿನ ಭಕ್ತರು

ಈ ಗ್ರಾಮ ದೇಶದಲ್ಲೇ ಖ್ಯಾತಿ ಗಳಿಸಿ ಜೈನಮುನಿಗಳು, ಜಿನಭಕ್ತರು ಇಲ್ಲಿಗೆ ಆಗಮಿಸುವಂತಾಗಲು ಪ್ರಮುಖ ಕಾರಣರೇ ಜಿಲ್ಲೆಯ ಪತ್ರಕರ್ತರು ಎಂದು ಸಿದ್ಧಾಂತ ಕೀರ್ತಿ ಸ್ವಾಮೀಜಿ ಅಭಿಪ್ರಾಯಪಟ್ಟಿದ್ದಾರೆ. ಮಂಡ್ಯ ಜಿಲ್ಲಾ ಪತ್ರಕರ್ತರು ಶ್ರವಣಬೆಳಗೋಳ ಮಠದ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿ ಅವರನ್ನು ಭೇಟಿಮಾಡಿ ಅರೆತಿಪ್ಪೂರಿನಲ್ಲೊಂದು ಬಾಹುಬಲಿ ಮೂರ್ತಿ ಇದೆ. ಅದನ್ನು ಅಲ್ಲಿ ಪೂಜೆ ಸಲ್ಲಿಸುವ ಮೂಲಕ ಆ ಕ್ಷೇತ್ರವನ್ನು ಅಭಿವೃದ್ಧಿಪಡಿಸಬೇಕೆಂದು ಮನವರಿಕೆ ಮಾಡಿಕೊಟ್ಟ ಹಿನ್ನೆಲೆಯಲ್ಲಿ 2017ರ ಡಿಸೆಂಬರ್ ತಿಂಗಳಿನಲ್ಲಿ ಅಲ್ಲೊಂದು ಮಠ ನಿರ್ಮಿಸಿ, ಇದನ್ನು ಅಭಿವೃದ್ಧಿಗೊಳಿಸಲು ಭಟ್ಟಾರಕರಸ್ವಾಮಿ ಮುನ್ನಡೆದಿದ್ದಾರೆ. ಮದ್ದೂರಿನಿಂದ 22 ಕಿ.ಮೀ., ಭಾರತೀನಗರದಲ್ಲಿ 13 ಕಿ.ಮೀ. ದೂರದಲ್ಲಿರುವ ಅರೆತಿಪ್ಪೂರು ಕ್ಷೇತ್ರಕ್ಕೆ ಈಗಾಗಲೇ ವಿವಿಧೆಡೆಯಿಂದ ಜಿನ ಸನ್ಯಾಸಿಗಳು, ಜಿನಭಕ್ತರು ಆಗಮಿಸುತ್ತಿದ್ದಾರೆ. ಈಗಾಗಲೇ ಈ ಕ್ಷೇತ್ರ ಬಹಳಷ್ಟು ಅಭಿವೃದ್ಧಿ ಕಂಡಿದೆ.

ದಕ್ಷಿಣ ಭಾರತದ ಅತೀ ಪ್ರಾಚೀನ ಅರೆತಿಪ್ಪೂರು ಶ್ರೀ ಕ್ಷೇತ್ರ 1200 ವರ್ಷಗಳ ಇತಿಹಾಸ ಹೊಂದಿದೆ ಎಂಬುದು ರಾಜ್ಯಕ್ಕಿರಲಿ, ಜಿಲ್ಲೆಯ ಬಹುತೇಕ ಜನರಿಗೇ ತಿಳಿದಿಲ್ಲ. ಇಂತಹ ಪವಿತ್ರ ಜೈನ ಕ್ಷೇತ್ರದ ಬೆಟ್ಟದ ಮೇಲೆ 12 ಅಡಿ ಎತ್ತರದ ಬಾಹುಬಲಿ ಶಿಲಾ ಮೂರ್ತಿಯಿದೆ. ಶ್ರವಣಬೆಳಗೋಳ ಕ್ಷೇತ್ರ ಅರೆತಿ ಪ್ಪೂರಿನ ತದ್ರೂಪ. ಶ್ರವಣಬೆಳಗೊಳದ ಬಾಹುಬಲಿ ಮೂರ್ತಿ ಕ್ರಿ.ಶ.973ರಲ್ಲಿ ನಿರ್ಮಾಣ ಗೊಂಡಿದೆ. ಇಲ್ಲಿಯ ಮೂರ್ತಿ ಕ್ರಿ.ಶ. 843ರಲ್ಲಿ ನಿರ್ಮಾಣ ಗೊಂಡಿದೆ. ಇಲ್ಲಿನ ಬಾಹುಬಲಿ ಮೂರ್ತಿ ಶ್ರವಣಬೆಳ ಗೊಳಕ್ಕಿಂತಲೂ ಪುರಾತನವಾಗಿರುವು ದರಿಂದ ಶ್ರವಣಬೆಳಗೊಳದ ಮಹಾಮತ್ಸಕಾಭಿಷೇಕ ಕ್ಕಿಂತಲೂ ಮುನ್ನ ಇಲ್ಲಿನ ಬಾಹುಬಲಿ ಮೂರ್ತಿಗೆ ಅಭಿಷೇಕ ನೆರವೇರಿಸಲಾಗುತ್ತದೆ. ಇಲ್ಲಿ ನಡೆಯುವ ಮಹಾ ಮಸ್ತಕಾಭಿಷೇಕ ವೀಕ್ಷಿಸಲು ದೇಶದ ವಿವಿಧೆಡೆಗಳಿಂದ ಸಹಸ್ರಾರು ಜಿನಭಕ್ತರು ಆಗಮಿಸುತ್ತಾರೆ. ಜೊತೆಗೆ ಜೈನಮುನಿಗಳು ಪಾಲ್ಗೊಳ್ಳುವುದು ವಿಶೇಷ.

ಆರತಿಪುರವಾಗಿದ್ದ ಅರೆತಿಪ್ಪೂರು

ಆರತಿಪುರವಾಗಿದ್ದ ಈ ಗ್ರಾಮ ಕಾಲಾನಂತರದಲ್ಲಿ ಜನಸಾಮಾನ್ಯರ ಆಡುಭಾಷೆಯಲ್ಲಿ ಅರೆತಿಪ್ಪೂರು ಆಗಿ ಪರಿವರ್ತನೆಯಾಗಿದ್ದರೂ ಇಲ್ಲಿರುವ ಶಿಲಾ ಶಾಸನಗಳು 1200 ವರ್ಷಗಳ ಹಿಂದಿನ ಗತವೈಭವಕ್ಕೆ ಕನ್ನಡಿ ಹಿಡಿದಿದೆ. ಚೋಳ, ಗಂಗರು ಹಾಗೂ



ಭಾರತೀನಗರ ಸಮೀಪದ ಅರೆತಿಪ್ಪೂರಿನ ಬೆಟ್ಟ.

ಹೊಯ್ಸಳರ ವಂಶಸ್ಥರು ಇಲ್ಲಿ ಆಡಳಿತವನ್ನು ನಡೆಸಿರುವುದಕ್ಕೆ ಶಿಲಾ ಶಾಸನಗಳಲ್ಲಿ ಮಾಹಿತಿ ಇದೆ. ಪ್ರಾಚೀನ ಭಾಷೆಯಲ್ಲಿರುವ ಈ ಲಿಪಿಯನ್ನು ಪುರಾತತ್ವ ಸರ್ವೇಕ್ಷಣಾ ಇಲಾಖೆ ಕನ್ನಡೀಕರಿಸಿ ವಿಶ್ವಕೋಶದಲ್ಲಿ ದಾಖಲಿಸಿವೆ. ಇಲ್ಲಿರುವ 24 ಜೈನಬಸದಿಗಳು ಜೈನತೀರ್ಥಂಕರರ ಹೆಜ್ಜೆ ಗುರುತುಗಳನ್ನು ಹೇಳುತ್ತವೆ. ದಕ್ಷಿಣ ಭಾರತದಲ್ಲಿ ಏಕಶಿಲಾ ಬಾಹುಬಾಲಿ ಮೂರ್ತಿಯನ್ನು ಒಳಗೊಂಡಿರುವ ಕ್ಷೇತ್ರಗಳಲ್ಲೇ ಅರೆತಿಪ್ಪೂರು ಬಹಳ ಹಿಂದಿನ ಇತಿಹಾಸ ಹೊಂದಿರುವುದು ಮಂಡ್ಯ ಜಿಲ್ಲೆಯ ಹೆಮ್ಮೆಯ ಸಂಗತಿ. 2017ರ ಡಿ.3ರಂದು ಈ ಅರೆತಿಪ್ಪೂರಿನ ಬಾಹುಬಾಲಿ ಕ್ಷೇತ್ರದಲ್ಲಿ ಬಾಹುಬಲಿಗೆ ಮಸ್ತಕಾಭಿಷೇಕದಲ್ಲಿ 1008 ಕಳಸಗಳಲ್ಲಿ ಪ್ರಮುಖವಾಗಿ ಜಲ, ಎಳನೀರು, ಕಬ್ಬಿನ ಹಾಲು, ಅರಿಶಿನ, ಗೋವಿನ ಹಾಲು, ಶ್ರೀಗಂಧ, ಕೇಸರಿ ಮತ್ತಿತರ ವೈವಿಧ್ಯಮಯ ಚೂರ್ಣಗಳು ಒಳಗೊಂಡಂತೆ ಮಸ್ತಕಾಭಿಷೇಕ ಮಾಡುವುದರ ಜೊತೆಗೆ ನವರತ್ನ ಅಭಿಷೇಕ ಕೂಡ ಪ್ರಮುಖ ಆಕರ್ಷಣೆಗೊಂಡಿತ್ತು. ◆

ಸಾರ್ವಜನಿಕ ಸಂಸ್ಥೆಗಳ ಕಾರ್ಯನಿರ್ವಹಣೆ ಟೀಕೆಗಳಿಗೆ ಒಳಗಾಗುವುದು ಸಹಜ. ಕೆಲಸ ಮಾಡದಿದ್ದಾಗ ಮಾತ್ರ ಟೀಕೆಗಳಿರುವುದಿಲ್ಲ. ಟೀಕೆಗಳು ಬರುತ್ತವೆಂದು ಕೆಲಸ ಮಾಡದೆ ಇರಲಾಗದು.

❖ *ಹಾ. ಮಾ. ನಾಯಕ್*



ಭೂ ವ್ಯಾಜ್ಯಗಳ ಪರಿಹಾರಕ ವರಾಹಸ್ವಾಮಿ

ಭೂದೇವಿ ಸಮೇತ ನೆಲೆಸಿರುವ ಏಕೈಕ ಭೂ ವರಾಹಸ್ವಾಮಿ ದೇವಾಲಯ

ವಿಷ್ಣುವಿನ 3ನೇ ಅವತಾರ | **ಬೂದು ಕಲ್ಲಿನ 17 ಅಡಿ ಎತ್ತರದ ವಿಗ್ರಹ**

ವಿಷ್ಣುವಿನ 3ನೇ ಅವತಾರ ವರಾಹಸ್ವಾಮಿ. ಇಲ್ಲಿನ ದೇಗುಲಕ್ಕೆ ಸುಮಾರು 2,500 ವರ್ಷಗಳ ಇತಿಹಾಸವಿದೆ. ಅಂದಿನ ರಾಜ ವೀರ ಬಲ್ಲಾಳನ ಕಾಲದಲ್ಲಿ ಭೂಮಿಯನ್ನು ಅಗೆದಾಗ, ಪದರಗಳಡಿ ಭೂಮಿಯಲ್ಲಿ ವರಾಹಸ್ವಾಮಿ ಬೃಹತ್ ವಿಗ್ರಹ ಪತ್ತೆಯಾಯಿತು. ಈ ದೇಗುಲದಲ್ಲಿ ಮಹಾನ್ ಋಷಿಗಳು ತಪಸ್ಸು ಮಾಡಿದ್ದಾರೆ. ಸ್ವಾಮಿಯ ವಿಗ್ರಹ ಸುಮಾರು 17 ಅಡಿ ಎತ್ತರವಿದ್ದು, ಬೂದು ಕಲ್ಲಿನಿಂದ ನಿರ್ಮಿಸಲ್ಪಟ್ಟಿದೆ. ಅಲ್ಲದೇ, ಈ ವಿಗ್ರಹಕ್ಕೆ ಮಹಾನ್ ಶಕ್ತಿಯಿದೆ ಎಂಬುದು ಭಕ್ತರ ನಂಬಿಕೆಯಾಗಿದೆ.



❖ ಅರುಣ್‌ಕುಮಾರ್, ಕೆ.ಆರ್.ಪೇಟೆ

ಮಂಡ್ಯ ಜಿಲ್ಲೆಯ ಅತ್ಯಂತ ಸುಪ್ರಸಿದ್ಧ ದೇವಾಲಯಗಳಲ್ಲಿ ಕೆ.ಆರ್.ಪೇಟೆ ತಾಲೂಕಿನ ಗಂಜಿಗೆರೆ ಸಮೀಪ ಹೇಮಾವತಿ ನದಿ ದಡದಲ್ಲಿರುವ ಕಲ್ಲಹಳ್ಳಿ ಗ್ರಾಮದಲ್ಲಿ ನೆಲೆಸಿರುವ ಭೂವರಾಹನಾಥಸ್ವಾಮಿ ದೇವಾಲಯವೂ ಒಂದು.

ಇದು ವಿಷ್ಣುವಿನ ಮೂರನೇ ಅವತಾರಕ್ಕೆ ಸಮರ್ಪಿತವಾಗಿದೆ. ಈ ದೇವಾಲಯ ಮೈಸೂರಿನ ಶ್ರೀಬ್ರಹ್ಮತಂತ್ರ ಸ್ವತಂತ್ರ ಪರಕಾಲಸ್ವಾಮಿ ಮಠದ ಶ್ರೀಲಕ್ಷ್ಮೀಹಯಗ್ರೀವ ಪರಕಾಲ ಸ್ವಾಮೀಜಿಯವರ ಅಧೀನದಲ್ಲಿದೆ.

ವಿಷ್ಣುವಿನ ಮೂರನೇ ಅವತಾರವೆಂದರೆ ಕಾಡು ಹಂದಿಯ ರೂಪ. ಇದನ್ನು ವರಾಹಸ್ವಾಮಿ ಎಂದು ಕರೆಯಲಾಗುತ್ತದೆ. ಈ ವಿಗ್ರಹ 17 ಅಡಿ ಎತ್ತರವಿದ್ದು, ಬೂದು ಕಲ್ಲಿನಿಂದ ನಿರ್ಮಿಸಲ್ಪಟ್ಟಿದೆ. ವಿಗ್ರಹವು ಕುಳಿತ ಭಂಗಿಯಲ್ಲಿ ಭೂದೇವಿಯನ್ನು ತನ್ನ ಎಡ ತೊಡೆಯ ಮೇಲೆ ಕೂರಿಸಿದೆ.

ಹೊಮ್ಮಿರಲು ಪ್ರೀತಿ ಎಲ್ಲಿಯದು ಭೀತಿ? । ನಾಡೊಲವೆ ನೀತಿ ಹಿಡಿ ನೆನಪ
ಮನೆಮನೆಗಳಲ್ಲಿ ಮನಮನಗಳಲ್ಲಿ । ಹಚ್ಚೇವು ಕನ್ನಡದ ದೀಪ.
❖ ಡಿ. ಎಸ್. ಕರ್ಕಿ



ಭೂದೇವಿಯು 3.5 ಅಡಿ ಎತ್ತರವಿದೆ. ಮುಖ್ಯ ವಿಗ್ರಹದ ಕೆಳಗೆ ಹನುಮಂತನ ವಿಗ್ರಹವನ್ನು ಸಹ ಕೆತ್ತಲಾಗಿದೆ. ವಿಗ್ರಹದ ಹಿಂಭಾಗದಲ್ಲಿ ಸುದರ್ಶನ ಚಕ್ರವನ್ನು ಕೆತ್ತಲಾಗಿದ್ದು, ದೇವರ ಮೇಲಿನ ಕೈ ಶಂಖ ಮತ್ತು ಚಕ್ರವನ್ನು ಹಿಡಿದಿರುತ್ತದೆ. ವಿಗ್ರಹದ ಕೆಳಗಿನ ಎಡಗೈ ಭೂದೇವಿ ಯನ್ನು ಅಪ್ಪಿಕೊಂಡಿದೆ ಮತ್ತು ಕೆಳಗಿನ ಬಲಗೈ ಅಭಯ ಮುದ್ರೆಯಲ್ಲಿದೆ.◆

ಭೂ ವರಾಹಸ್ವಾಮಿ ನೆಲೆ ನಿಂತಿದ್ದೇಗೆ?

ಭೂ ವರಾಹಸ್ವಾಮಿ ದೇವಾಲಯವು 2500 ವರ್ಷಗಳಿಗಿಂತಲೂ ಹಳೆಯದೆಂಬುದು ಇತಿಹಾಸ ತಿಳಿಸುತ್ತದೆ. ಈ ದೇವಾಲಯದಲ್ಲಿ ಋಷಿ ಗೌತಮರು ತಪಸ್ಸು ಮಾಡಿದರೆಂದು ನಂಬಲಾಗಿದೆ. ಈ ದೇವಾಲಯದ ಹಿಂದೆ ವೀರಬಲ್ಲಾಳ ರಾಜನ ಐತಿಹ್ಯವಿದೆ. ಬೇಟೆಯಾಡುವಾಗ, ರಾಜನು ಕಾಡಿನಲ್ಲಿ ಕಳೆದುಹೋದನೆಂದು ಮತ್ತು ಅವನು ಮರದ ಕೆಳಗೆ ವಿಶ್ರಾಂತಿ ಪಡೆಯುತ್ತಾನೆ ಎಂದು ನಂಬಲಾಗಿದೆ. ವಿಶ್ರಮಿಸುತ್ತಿರುವಾಗ ಒಂದು ವಿಚಿತ್ರವಾದ ಸಂಗತಿಯನ್ನು ಗಮನಿಸಿದ ಆತ, ನಾಯಿಯೊಂದು ಮೊಲವನ್ನು ಬೆನ್ನಟ್ಟುವುದನ್ನು ನೋಡಿದನು ಮತ್ತು ನಿರ್ದಿಷ್ಟ ಹಂತವನ್ನು ತಲುಪಿದ ನಂತರ, ಮೊಲವು ನಾಯಿಯನ್ನು ಬೆನ್ನಟ್ಟಲು ಪ್ರಾರಂಭಿಸಿತು. ಈ ಸ್ಥಳವು ಕೆಲ ಮಾಂತ್ರಿಕ ಶಕ್ತಿಗಳನ್ನು ಹೊಂದಿದೆ ಎಂದು ರಾಜನು ನಂಬುವಂತೆ ಮಾಡಿತು. ಆ ಜಾಗದಲ್ಲಿ ಭೂಮಿಯನ್ನು ಅಗೆಸಿದಾಗ ಭೂಮಿಯೊಳಗೆ ಅಡಗಿರುವ ವರಾಹಸ್ವಾಮಿಯ ಬೃಹತ್ ಶಿಲಾ ಮೂರ್ತಿ ಪತ್ತೆಯಾಯಿತು. ಈ ಘಟನೆಯ ನಂತರ, ರಾಜನು ದೇವಾಲಯವನ್ನು ಜೀರ್ಣೋದ್ಧಾರಗೊಳಿಸಿ ನಿತ್ಯ ಪೂಜೆ, ಪುನಸ್ಕಾರಗಳಿಗೆ ಅವಕಾಶ ಕಲ್ಪಿಸಿಕೊಟ್ಟನೆಂಬ ಇತಿಹಾಸವಿದೆ.

ತಿರುಪತಿ ಮಾದರಿ ಶ್ರೀಕ್ಷೇತ್ರ ಅಭಿವೃದ್ಧಿ

ಭೂ ವರಾಹನಾಥಸ್ವಾಮಿ ಕ್ಷೇತ್ರವನ್ನು ತಿರುಮಲ ತಿರುಪತಿಯ ಮಾದರಿ ಸಮಗ್ರವಾಗಿ ಅಭಿವೃದ್ಧಿಪಡಿಸಲು ಮುಂದಾಗಿರುವ ಮೈಸೂರಿನ ಪರಕಾಲಸ್ವಾಮಿ ಮಠವು ಹೊಯ್ಸಳ ಚಕ್ರವರ್ತಿ 3ನೇ ವೀರಬಲ್ಲಾಳನು ವರಾಹನಾಥ ಕ್ಷೇತ್ರವನ್ನು ಅಭಿವೃದ್ಧಿಪಡಿಸಿದ ಸವಿನೆನಪಿಗಾಗಿ ಹೊಯ್ಸಳ ವಾಸ್ತುಶಿಲ್ಪಕಲೆಯ ಮಾದರಿಯಲ್ಲಿ ಕಲ್ಲಿನಿಂದಲೇ ಮೂರು ಪ್ರಕಾರಗಳ ದೇವಾಲಯ ಹಾಗೂ 186 ಅಡಿ ಎತ್ತರದ ರಾಜಗೋಪುರ ನಿರ್ಮಾಣ ಕಾರ್ಯಕ್ಕೆ ಮುಂದಾಗಿದ್ದು, ಕಲ್ಲಿನ ಕೆತ್ತನೆಯ ಕಾರ್ಯಗಳು ಭರದಿಂದ ಸಾಗುತ್ತಿದೆ ಎಂದು ದೇವಸ್ಥಾನದ ಮ್ಯಾನೇಜಿಂಗ್ ಟ್ರಸ್ಟಿ ಶ್ರೀನಿವಾಸ್ ರಾಘವನ್ ಉದಯವಾಣಿಗೆ ತಿಳಿದ್ದಾರೆ.◆

ಭಕ್ತರಿಗೆ ಉಚಿತ ದಾಸೋಹ ವ್ಯವಸ್ಥೆ

ಸ್ವಾಮಿಯ ಕ್ಷೇತ್ರಕ್ಕೆ ಬಂದು ದರ್ಶನ ಪಡೆದರೆ ಭೂ ವ್ಯಾಜ್ಯಗಳು, ಗೃಹ, ಕಟ್ಟಡ, ನಿವೇಶನಗಳ ಸಮಸ್ಯೆಗಳು ಬಗೆಹರಿದು ಸುಲಲಿತವಾಗಿ ಕೆಲಸ ಕಾರ್ಯಗಳು ಸಂಪೂರ್ಣಗೊಳ್ಳುತ್ತವೆ ಎಂದು ಭಕ್ತರ ನಂಬಿಕೆ. ಪ್ರತಿ ರೇವತಿ ನಕ್ಷತ್ರದ ಶುಭ ದಿನದಂದು ಸ್ವಾಮಿಗೆ ವಿಶೇಷ ಅಭಿಷೇಕ, ಪುಷ್ಪಾಭಿಷೇಕ, ಪಟ್ಟಾಭಿಷೇಕ ಹಾಗೂ ಅಡ್ಡ ಪಲ್ಲಕ್ಕಿ ಉತ್ಸವಗಳು ಶ್ರದ್ಧಾಭಕ್ತಿಯಿಂದ ನಡೆಯುತ್ತಿವೆ. ಪ್ರತಿದಿನವು ಶ್ರೀಕ್ಷೇತ್ರಕ್ಕೆ ಭೇಟಿ ನೀಡುವ ಭಕ್ತರು ಹಾಗೂ ಯಾತ್ರಾರ್ಥಿಗಳಿಗೆ ಉಚಿತ ದಾಸೋಹ ವ್ಯವಸ್ಥೆಯನ್ನು ಶ್ರೀಮಠವು ಭಕ್ತರ ಸಹಕಾರದೊಂದಿಗೆ ಏರ್ಪಡಿಸಿದೆ.



ದೇವಾಲಯ ಎಲ್ಲಿದೆ?

ಭೂ ವರಾಹನಾಥ ಸ್ವಾಮಿ ಕಲ್ಲಹಳ್ಳಿ ಗ್ರಾಮವು ಮಂಡ್ಯ ಜಿಲ್ಲೆಯ ಕೆ.ಆರ್.ಪೇಟೆ ತಾಲೂಕಿನ ಬೂಕನಕೆರೆ ಹೋಬಳಿಯಲ್ಲಿದೆ. ಕೆ.ಆರ್.ಪೇಟೆಯಿಂದ 18 ಕಿ.ಮೀ. ಪಾಂಡವಪುರದಿಂದ 32 ಕಿ.ಮೀ., ಮೈಸೂರಿನಿಂದ 46 ಕಿ.ಮೀ. ದೂರದಲ್ಲಿದೆ. ಹೆಚ್ಚಿನ ಮಾಹಿತಿಗಾಗಿ ಮಠದ ದೂ.9448011535 ಗೆ ಸಂಪರ್ಕಿಸಬಹುದಾಗಿದೆ.

ಕನ್ನಡ ಭಾಷೆಯ ಶ್ರೇಯಸ್ಸು ಎಂದರೆ, ಕನ್ನಡಿಗರ ಶ್ರೇಯಸ್ಸು. ಕನ್ನಡ ಜನಕ್ಕೆ ಏನೇನು ಬೇಕೋ, ಅವರ ಪ್ರತಿ ದಿನದ ಬದುಕಿಗೆ ಏನೇನು ಅವಶ್ಯವೋ ಅದೆಲ್ಲ ಕನ್ನಡದಲ್ಲಿರಬೇಕು.

❖ *ಡಿ.ವಿ. ಗುಂಡಪ್ಪ*



ಕೋರಿಕೆ ಈಡೇರಿಸೋ ಕರುಣಾಮಯಿ ಹೊಳೆ ಆಂಜನೇಯ

ದೇಗುಲಕ್ಕೆ ಬಂದು ವಿಶೇಷ ಪೂಜೆ ಸಲ್ಲಿಸುವ ಹೆಸರಾಂತ ನಟರು, ರಾಜಕಾರಣಿಗಳು



❖ **ಎಸ್.ಪುಟ್ಟಸ್ವಾಮಿ,** ಮದ್ದೂರು

ಮದ್ದೂರು ಪಟ್ಟಣದಲ್ಲಿರುವ ಇತಿಹಾಸ ಪ್ರಸಿದ್ಧ ಹೊಳೆ ಆಂಜನೇಯಸ್ವಾಮಿ, ಭಕ್ತರ ಕೋರಿಕೆಗಳನ್ನು ಈಡೇರಿಸುವ ಕರುಣಾಮಯಿಯಾಗಿ ನೆಲೆನಿಂತಿದ್ದಾನೆ.

ಕೇಳಿದ್ದನ್ನು ಕರುಣಿಸುವ ಉದಾರಿ ಜತೆಗೆ ನೆನೆದವರ ಕಷ್ಟಗಳನ್ನೆಲ್ಲಾ ಮಂಜಿನಂತೆ ಕರಗಿಸೋ ಕರುಣಾಮಯಿ, ಜಗದೋದ್ಧಾರಕ, ಕರುಣಾಸಾಗರ, ಧರ್ಮರತ್ನಾಕರ ಸೇರಿದಂತೆ ಇನ್ನಿತರ ಹೆಸರುಗಳಿಂದ ಕರೆಸಿಕೊಳ್ಳುವ ಪುರಾಣ ಪ್ರಸಿದ್ಧ ಹೊಳೆ ಆಂಜನೇಯ ಸ್ವಾಮಿಯ ಪ್ರಭಾವ ಅಪಾರವಾಗಿದ್ದು ರಾಜ್ಯದ ವಿವಿಧೆಡೆಗಳಿಂದ ದಿನನಿತ್ಯ ಸಾವಿರಾರು ಭಕ್ತರು ಆಗಮಿಸಿ, ಸ್ವಾಮಿಯ ದರ್ಶನ ಪಡೆದು ತಮ್ಮ ಇಷ್ಟಾರ್ಥಗಳನ್ನು ನೆರವೇರಿಸಿಕೊಳ್ಳುತ್ತಾರೆ.

ಭಕ್ತರು ದೇವಾಲಯಕ್ಕೆ ಬಂದು ಶ್ರದ್ಧಾ ಭಕ್ತಿಯಿಂದ ಪೂಜೆ ನೆರವೇರಿಸಿದರೆ ಇಷ್ಟಾರ್ಥಗಳು ನೆರವೇರುವ ಜತೆಗೆ ಹಸುಗೂಸುಗಳು ಸೇರಿದಂತೆ ಮಕ್ಕಳಿಗೆ ವಿವಿಧ ರೋಗಗಳು ಗುಣಮುಖ ವಾಗುವ ಮತ್ತು ಕಂಕಣಭಾಗ್ಯ ಇಲ್ಲದವರಿಗೆ ಮದುವೆ ಯೋಗ, ಹಣಕಾಸಿನ ವ್ಯಾಜ್ಯಗಳು ಸಂಪೂರ್ಣವಾಗಿ ಬಗೆಹರಿಯುತ್ತವೆಂಬುದು ಇಲ್ಲಿನ ಪ್ರತೀತಿ.

1.25 ರೂ. ವಿಶೇಷತೆ ಏನು?

ಭಕ್ತರು ಒಂದೂ ಕಾಲು ರೂಪಾಯಿ (1.25) ಗಳನ್ನು ಎರಡು ಅಂಗೈನ ಮಧ್ಯೆ ಇಟ್ಟುಕೊಂಡು ಸುಮಾರು ಐದು ನಿಮಿಷಗಳ ಕಾಲ ಮನದಲ್ಲಿ ಇಷ್ಟಾರ್ಥ ನೆನೆದು ನಂತರ ದೇಗುಲದ ಆವರಣದಲ್ಲಿರುವ ಅರಳಿ ಮರವನ್ನು ಮೂರು ಪ್ರದಕ್ಷಿಣೆ ಹಾಕಿ ಬಳಿಕ ದೇವರ ಸನ್ನಿಧಾನದಲ್ಲಿ ಒಂದೂ ಕಾಲು ರೂ.ಗಳನ್ನು ದೇವರ ವಿಗ್ರಹ ಮೇಲೆ ಹಾಕಿದರೆ, ಬೇಡಿಕೊಂಡ ಇಷ್ಟಾರ್ಥ ಶೀಘ್ರ ನೆರವೇರಲಿದೆ ಎಂಬ ನಂಬಿಕೆ ಬಹಳ ಹಿಂದಿನಿಂದಲೂ ಪ್ರಚಲಿತದಲ್ಲಿದೆ. ದೇವಾಲಯದ ಆವರಣದಲ್ಲಿ ಹನುಮಂತ ವ್ರತ, ಜಯಂತಿ, ಶ್ರೀರಾಮನವಮಿ ಕಾರ್ತಿಕ ಸೋಮವಾರ ಹಾಗೂ ಶ್ರಾವಣ ಶನಿವಾರ ದಿನಗಳಂದು ವಿಶೇಷ ಪೂಜಾ ವಿಧಿ ವಿಧಾನಗಳು ನೆರವೇರಲಿದ್ದು ಭಕ್ತಾಧಿಗಳು ಪಾಲ್ಗೊಳ್ಳುವ ಪೂಜಾ ಕಾರ್ಯಕ್ರಮದ ವೇಳೆ ತೀರ್ಥ ಪ್ರಸಾದ ಜರುಗಲಿದೆ. ಮದ್ದೂರು ಪಟ್ಟಣ ಹೊರವಲಯದ ಶಿಂಷಾ ನದಿಯ ದಂಡೆಯಲ್ಲಿರುವ ಹೊಳೆ ಆಂಜನೇಯ ಸ್ವಾಮಿ ಮುಖ್ಯ ಪ್ರಾಣದೇವರನ್ನು ಸುಮಾರು 550 ವರ್ಷಗಳ ಹಿಂದೆ ಶ್ರೀಪಾದರಾಜರು, ಶ್ರೀವ್ಯಾಸ ರಾಜರು ಪ್ರತಿಷ್ಠಾಪಿಸಿ ಪೂಜಿಸಿರೆಂಬ ಉಲ್ಲೇಖವಿದೆ. ◆



ಶ್ರೀ ಹೊಳೆ ಆಂಜನೇಯಸ್ವಾಮಿ ಕ್ಷೇತ್ರದ ಇತಿಹಾಸ ಅಪಾರ. ಭಕ್ತರು ಶ್ರದ್ಧಾ ಭಕ್ತಿಯಿಂದ ಪೂಜೆ ನೆರವೇರಿಸಿದರೆ, ಇಷ್ಟಾರ್ಥಗಳು ಮತ್ತು ಕಷ್ಟ ಕಾರ್ಪಣ್ಯಗಳು ದೂರವಾಗುತ್ತವೆ. ಭಕ್ತರು ದೇವಾಲಯದಲ್ಲಿ ಕೊಡುವ ಒಂದು ಕಾಲು ರೂಪಾಯಿ (1.25) ಪೈಸೆಗಳನ್ನು ಎರಡು ಅಂಗೈನಲ್ಲಿ ಐದು ನಿಮಿಷಗಳ ಕಾಲ ಹಿಡಿದುಕೊಂಡು ಇಷ್ಟಾರ್ಥಗಳನ್ನು ದೇವರ ಮುಂದೆ ಪ್ರಾರ್ಥಿಸಿದರೆ ಅಂದುಕೊಂಡದ್ದು ಶೀಘ್ರ ನೆರವೇರುತ್ತದೆಂಬುದು ಇಲ್ಲಿನ ಭಕ್ತರ ಬಲವಾದ ನಂಬಿಕೆ.

■ **ಪ್ರದೀಪ್ ಆಚಾರ್ಯ**, ಪ್ರಧಾನ **ಆರ್ಚಕ, ಹೊಳೆ ಆಂಜನೇಯಸ್ವಾಮಿ ದೇವಾಲಯ**, ಸಂಸ್ಥಾಪಕರು

ತನ್ನನ್ನು ತಾನು ಗುರುತಿಸಿಕೊಂಡು, ತನ್ನ ಶಕ್ತಿ ಪರಿಮಿತಿಯನ್ನು ಅರಿತು, ತನ್ನ ತನದ ವೈಶಿಷ್ಟ್ಯವನ್ನು ಬೆಳೆಸಿಕೊಳ್ಳುತ್ತಾ ಉಳಿದವರ ಜತೆ ಸಮಭಾವದಿಂದ ಸಹಕರಿಸಲು ಕಲಿಸುವುದೇ ನಿಜ ಸಂಸ್ಕೃತಿ ಲಕ್ಷಣ.

❖ *ಗೋಪಾಲಕೃಷ್ಣ ಅಡಿಗ*

12ನೇ ಶತಮಾನದಲ್ಲಿ ಶ್ರೀರಂಗಪಟ್ಟಣ ಕೋಟೆ ನಿರ್ಮಾಣ

ಶ್ರೀರಂಗನ ದ್ವೀಪ ಪಟ್ಟಣದೊಳಗೆ ಪರ್ಯಟನೆ



ಕೋಟೆ, ಸ್ಮಾರಕಗಳ ಊರು ಶ್ರೀರಂಗಪಟ್ಟಣ

ಚಾರಿತ್ರಿಕ ಧಾರ್ಮಿಕ, ಸಾಂಸ್ಕೃತಿಕ ಆಚರಣೆಗೆ ವಿಶ್ವದಲ್ಲಿ ಹೆಸರು

ಸುತ್ತಲೂ ಹರಿಯುವ ಕಾವೇರಿ ನದಿ ಮಧ್ಯವಿರುವ ನಗರ

❖ ಗಂಜಾಂ ಮಂಜು, ಶ್ರೀರಂಗಪಟ್ಟಣ

- ಶ್ರೀರಂಗಪಟ್ಟಣ ಜಿಲ್ಲಾ ಕೇಂದ್ರದಿಂದ 28 ಕಿ.ಮೀ. ದೂರ
- ಮೈಸೂರಿನಿಂದ 16 ಕಿ.ಮೀ. ಅಂತರ
- ಬೆಂಗಳೂರಿನಿಂದ 125 ಕಿ.ಮೀ.
- ಕರ್ನಾಟಕ ಸಾರಿಗೆ ಹಾಗೂ ರೈಲು ಸಂಪರ್ಕವಿದೆ.

ಮಂಡ್ಯಜಿಲ್ಲೆಯ ತಾಲೂಕಾದ ಶ್ರೀರಂಗಪಟ್ಟಣ ಚಾರಿತ್ರ್ಯಿಕವಾಗಿಯೂ, ಧಾರ್ಮಿಕ, ಸಾಂಸ್ಕೃತಿಕ, ಸಾಹಿತ್ಯಿಕವಾಗಿಯೂ ಗಮನ ಸೆಳೆಯುವ ಕ್ಷೇತ್ರ. ಇತಿಹಾಸ ಐಹಿತ್ಯ ಹೊಂದಿರುವ ಶ್ರೀರಂಗಪಟ್ಟಣ ಹಲವು ಪ್ರೇಕ್ಷಣೀಯ ಸ್ಥಳಗಳಲ್ಲಿ ಒಂದು. ಶಯನ ಮನೋಹರ ಶ್ರೀರಂಗನಾಥನಿಗೆ ಆವಾಸಸ್ಥಾನ ನೀಡಿದ ಶ್ರೀರಂಗಪಟ್ಟಣ ಸುತ್ತಲೂ ಕಾವೇರಿ ಹರಿಯುವ ಸೊಬಗು ಪಟ್ಟಣವನ್ನು ಮತ್ತಷ್ಟು ಸುಂದರಗೊಳಿಸಿದೆ.



ಐತಿಹಾಸಿಕವಾಗಿ ಗಂಗರಸರು, ಹೊಯ್ಸಳ, ವಿಜಯನಗರದ ಆಳರಸರ ಬಳಿಕ ಮೈಸೂರು ಒಡೆಯರ ಆಳ್ವಿಕೆಯಲ್ಲಿ ಶ್ರೀರಂಗಪಟ್ಟಣ ಮಹತ್ವವನ್ನು ಪಡೆದಿದೆ. ಮೊಘಲ್ ಸಾಮ್ರಾಜ್ಯದ ರೂವಾರಿ ಹೈದರ್ ಅಲಿ ಮತ್ತು ಟಿಪ್ಪುವಿನ ಆಳ್ವಿಕೆಯಲ್ಲೂ ಪಟ್ಟಣದಲ್ಲಿ ಮುಸಲ್ಮಾನರ ಗಾಥಿಕ್, ಅರೇಬಿಕ್ ಶೈಲಿಯ ಸಂಸ್ಕೃತಿಯನ್ನು ಪರಿಚಯಿಸಿದೆ.

ಮಾಯಾ ನಗರಿ

ತಾಯಿ ಕಾವೇರಿ ಶ್ರೀರಂಗಪಟ್ಟಣವನ್ನು ದ್ವೀಪಪಟ್ಟಣವಾಗಿಸಿದರೆ, ಆದಿರಂಗನಾಥಸ್ವಾಮಿ ದೇಗುಲ ಪುಣ್ಯಭೂಮಿಯನ್ನಾಗಿ ಮಾಡಿದ್ದಾನೆ. ಜೊತೆಗೆ ಹಲವು ಸ್ಮಾರಕಗಳು, ಪಕ್ಷಿಧಾಮಗಳು ಪಟ್ಟಣವನ್ನು ಮಾಯಾ ನಗರಿಯಾಗಿಸಿವೆ.

ಜಿಲ್ಲೆಯ ಇತಿಹಾಸ ಸಂಶೋಧಕರು ಹಂಪೆಯಲ್ಲಿ ನಡೆಯುತ್ತಿದ್ದ ದಸರಾ ಪುನರುಜೀನಗೊಂಡಿದ್ದೆ ಶ್ರೀರಂಗಪಟ್ಟಣದಲ್ಲಿ, ಟಿಪ್ಪು ಕೋಟೆ, ಟಿಪ್ಪು ಬೇಸಿಗೆ ಅರಮನೆ, ದರಿಯಾ ದೌಲತ್, ವಾಟರ್‌ಗೇಟ್, ಬಿದ್ಕೋಟೆ ಗಣಪ, ಥಾಮಸ್ ಇನ್ಮಾನ ಡಂಜನ್, ಕರ್ನಲ್ ಜೈಲ್ ನೆಲಮಾಳಿಗೆ ಸೆರೆಮನೆ(ಡಂಜನ್),ಅರಮನೆ ಅವಶೇಷದ ಸ್ಥಿತಿಯಲ್ಲಿರುವ



ಕಾವೇರಿ ದಡದಲ್ಲಿ ಶ್ರೀರಂಗನ ಚರಿತ್ರೆ

ಕಾವೇರಿನದಿ ದಂಡೆ ಮೇಲಿರುವ ಶ್ರೀ ರಂಗನಾಥಸ್ವಾಮಿ ದೇಗುಲಕ್ಕೆ ಚಾರಿತ್ರಿಕ ಮಹತ್ವವಿದೆ. ಗಂಗರ ಕಾಲದಲ್ಲಿ ಆರಂಭವಾದ ದೇಗುಲದ ನಿರ್ಮಾಣ ಕಾರ್ಯ ಹೈದರ್ ಮತ್ತು ಟಿಪ್ಪು ಸುಲ್ತಾನ್ ಕಾಲದವರೆಗೂ ಮುಂದುವರಿದಿದೆ.

ಪುರಾಣದ ಉಲ್ಲೇಖದಂತೆ ಕಾವೇರಿ ತೀರದಲ್ಲಿ ಗೌತಮ ಮಹರ್ಷಿಗಳು ತಪಸ್ಸು ಮಾಡುತ್ತಿದ್ದರು. ಅದಕ್ಕೆ ಮೆಚ್ಚಿದ ಮಹಾವಿಷ್ಣು ಇಲ್ಲಿ ಶ್ರೀರಂಗನಾಥನ ಹೆಸರಿನಲ್ಲಿ ನೆಲೆಸಿದ್ದಾನೆ ಎಂಬ ಪ್ರತೀತಿ ಇದೆ. ಗಂಗರ ದೊರೆ ತಿರುಮಲಯ್ಯ ಅವರ ಕಾಲದಲ್ಲಿ ಕ್ರಿ.ಶ. 894ರಲ್ಲಿ ಮೂಲ ದೇಗುಲ ನಿರ್ಮಿಸಲಾಯಿತು. ವಿಜಯನಗರ ಅರಸರ ಕಾಲದಲ್ಲಿ ನವರಂಗ, ಮುಖಮಂಟಪ ಹಾಗೂ ರಾಜಗೋಪುರಗಳು ನಿರ್ಮಾಣಗೊಂಡವು. ಹೊಯ್ಸಳರ ಮುಮ್ಮಡಿ ಬಲ್ಲಾಳನ ಕಾಲದಲ್ಲಿ ಒಳಾವರಣದ ಕುಸುರಿ ಕೆತ್ತನೆಗಳುಳ್ಳ ಕಂಬಗಳ ಹಜಾರ ಅಭಿವೃದ್ಧಿ ಕಂಡಿತು. ಪಾತಾಳಾಂಕಣದ ಮುಂದಿನ ಭಾಗವನ್ನು ಹೈದರ್‌ಅಲಿ ಮತ್ತು ಮಂಟಪಗಳನ್ನು ಮೈಸೂರು ಒಡೆಯರ್ ವಂಶಸ್ಥರು ನಿರ್ಮಿಸಿದರು ಎಂಬುದು ಇತಿಹಾಸ. ಗರ್ಭಗುಡಿ ಎಡಬದಿಯಲ್ಲಿ ಶ್ರೀರಂಗನಾಯಕಿ ಅಮ್ಮನ ಗುಡಿಯಿದೆ.

ಟಿಪ್ಪು ಅರಮನೆ ಮದ್ದಿನ ಮನೆಗಳು ಹಾಗೂ ಹತ್ತಾರು ಪಾರಂಪರಿಕ ಕಟ್ಟಡಗಳು ಇತಿಹಾಸ ಕಥೆಯನ್ನು ಹೇಳಿದರೆ, ಶ್ರೀಚಕ್ರವಿರುವ ಗಂಜಾಂ ಶ್ರೀ ನಿಮಿಷಾಂಬ ದೇಗುಲ, ಪಟ್ಟಣದ ಕ್ಷಣಾಂಬಿಕ, ಶ್ರೀ ಚಾಮುಂಡೇಶ್ವರಿ ದೇಗುಲ ಕರೀಘಟ್ಟ, ಕಾವೇರಿ ಸಂಗಮ, ಪಶ್ಚಿಮ ವಾಹಿನಿ ಪೌರಾಣಿಕ ಹಿನ್ನೆಲೆಯನ್ನು ತೋರಿಸುತ್ತವೆ. ಕ್ರಿ.ಶ.1800ರಲ್ಲಿ ನಿರ್ಮಿಸಿದ ಅಬ್ಬೆದುಬ್ಬಾ ಚರ್ಚ್ ಬ್ರಿಟಿಷರ ಆಳ್ವಿಕೆಯ ದ್ಯೋತಕವಾಗಿದೆ. ಪಟ್ಟಣದ ಸುತ್ತಲೂ ಸ್ಮಾರಕದ ಜತೆ ಕೋಟೆ ಕಂದಕಗಳ ಆಕರ್ಷಣೆಯೇ ಹೆಚ್ಚು.

12ನೇ ಶತಮಾನದ ಕೋಟೆ

ಹೊಯ್ಸಳದ ದೊರೆ ವಿಜಯಾದಿತ್ಯ 12ನೇ ಶತಮಾನದಲ್ಲಿ ನಿರ್ಮಿಸಿದ ಐತಿಹಾಸಿಕ ಶ್ರೀರಂಗಪಟ್ಟಣ ಕೋಟೆಯೇ ಇಲ್ಲಿನ ಪ್ರಮುಖ ಆಕರ್ಷಣೆ. ಕಾವೇರಿ ನದಿ ಮಧ್ಯದಲ್ಲಿರುವ ಶ್ರೀರಂಗಪಟ್ಟಣ ದ್ವೀಪ ನಗರದ ಸುತ್ತಲೂ 6 ಕಿಮೀ.ಸುತ್ತಳತೆಯಲ್ಲಿ 3 ಸುತ್ತಿನಕೋಟೆ ಹಾಗೂ ಕಂದಕಗಳನ್ನು 15ನೇ ಶತಮಾನದಲ್ಲಿ ವಿಜಯ ನಗರ ಅರಸರು 9 ವಿಜಯನಗರ ರಾಜ ಪ್ರತಿನಿಧಿಗಳಾದ ನಾಗಮಂಗಲದ ತಿಮ್ಮಣ್ಣನ ದಂಡನಾಯಕ ಹಾಗೂ ತಿರುಮಲರಾಯರು ಮೊದಲ ಸುತ್ತಿನಕೋಟೆ ನಿರ್ಮಿಸಿರುವ ಉಲ್ಲೇಖ ನಮಗೆ ಸಿಗುತ್ತದೆ. ನಂತರ ಯದು ವಂಶದ ಒಡೆಯರ್(ಕ್ರ.ಶ.1638-59)ಎರಡನೇ ಸುತ್ತಿನ ಬಲವಾದ ಕೋಟೆಯನ್ನು ನಿರ್ಮಿಸಿದ್ದಾರೆ.

ಆಳವಾದ ಕಂದಕ ವ್ಯವಸ್ಥೆ

ಹೈದರಾಲಿ ಹಾಗೂ ಟಿಪ್ಪು ಸುಲ್ತಾನ್‌ನ ಆಳ್ವಿಕೆಯಲ್ಲಿ ಈ ಕೋಟೆಯ ಹೆಚ್ಚು ಭಾಗಗಳು ನಿರ್ಮಿಸಲಾಗಿದ್ದು ಫ್ರೆಂಚ್ ಎಂಜಿನಿಯರ್ ಹ್ಯೂಬನ್ ಎಂಬಾತನ ನೇತೃತ್ವದಲ್ಲಿ ಕೋಟೆ ಪ್ರಮುಖಭಾಗ ಮತ್ತು ದ್ವಾರಗಳನ್ನು ಟಿಪ್ಪುಸುಲ್ತಾನ್ (ಕ್ರಿ.ಶ.1782ರಿಂದ -99) ರವರೆಗೆ ಅಭಿವೃದ್ಧಿ ಪಡಿಸಿದ್ದರಿಂದ ಟಿಪ್ಪು ಕೋಟೆ ಎಂದು ನೆನಪಿಸಿಕೊಳ್ಳುತ್ತಾರೆ. ಪಟ್ಟಣದ ಚೆಕ್‌ಪೋಸ್ಟ್ ಮಾರ್ಗವಾಗಿ ಪಟ್ಟಣ ಪ್ರವೇಶಿಸಿದರೆ ಹಸನಾದ ಕೋಟೆ ಕಂದಕಗಳನ್ನು ಈಗ ಕಾಣಬಹುದು. ಶತ್ರುಗಳು ಒಳ ನುಸುಳದಂತೆ ನಿರ್ಮಿಸಿರುವ ಆಳವಾದ ಕಂದಕ ವ್ಯವಸ್ಥೆ ಈಗಲೂ ಸ್ಪಷ್ಟವಾಗಿ ಗೋಚರಿಸುತ್ತದೆ.

ಕಾವೇರಿ ನದಿಯಿಂದ ನೀರನ್ನು ನಾಲೆ ಡಕ್ ಮೂಲಕ ಈ ಕಂದಕದೊಳಗೆ ಹಾಯಿಸಿ ನೀರು ತುಂಬಿಸಿರುವ ಕುರುಹುಗಳು ಗೋಚರಿಸುತ್ತಿವೆ. ಕಪ್ಪು ಮತ್ತು ಕಂದು ಬಣ್ಣದ ಕಲ್ಲುಗಳೊಂದಿಗೆ ಚುರುಕಿಗಾರೆ ಬಳಸಿ ಕೋಟೆ ನಿರ್ಮಾಣವಾಗಿದೆ. ಹಲವು ಶತಮಾನಗಳ ಹಿಂದೆ ನಿರ್ಮಿಸಿರುವ ಕಿರು ಸೇತುವೆಗಳು ಇದೀಗ ಗಿಡಗಂಟಿಗಳಿಂದ ಆವರಿಸಿದೆ. ಆಗಿನ ಕಿರು ಸೇತುಗೆಗಳು ಈಗಲು ಬಳಕೆಯಲ್ಲಿದ್ದು ಅದರ ಗಟ್ಟಿತನ ತೋರುತ್ತಿವೆ. ಬ್ರಿಟಿಷರು ಮಾತ್ರವಲ್ಲದೆ ಮರಾಠರು, ಹೈದ್ರಬಾದ್ ನಿಜಾಮರು, 20ಕ್ಕೂ ಹೆಚ್ಚು ಬಾರಿ ಶ್ರೀರಂಗಪಟ್ಟಣದ ಮೇಲೆ ದಾಳಿ ಮಾಡಿದ್ದಾರೆ. ಆದರೂ ಕೋಟೆ ಕುಗ್ಗಿಲ್ಲ ತನ್ನಗಟ್ಟಿತನವನ್ನು ಈಗಲು ಉಳಿಸಿಕೊಂಡಿದೆ. ಕೋಟೆಗೆ ಹೊಂದಿಕೊಂಡಂತೆ ಒಳಾವರಣದಲ್ಲಿ ಶಸ್ತ್ರಾಗಾರಗಳು ಇಡಲು ಮದ್ದಿನ ಮನೆ, ರಾಕೇಟ್ ಉಡಾವಣೆ ಕೇಂದ್ರ, ಟಿಪ್ಪು ಅರಮನೆ ಅವಶೇಷಗಳು, ಸೈನಿಕರು ಹಾಗೂ ಪಾಳಿ ಬದಲಾವಣೆ ಮನೆಗಳು ಟಿಪ್ಪು ಕಾಲದಲ್ಲಿ ನಿರ್ಮಿತವಾಗಿದ್ದು ದೇಶ ವಿದೇಶಗಳಿಂದ ಬರುವ ಪ್ರವಾಸಿಗರಿಗೆ ಇತಿಹಾಸ ಮಾಹಿತಿಯನ್ನು ಒದಗಿಸುತ್ತವೆ. ◆

ಶ್ರೀರಂಗನಾಥನ ವೈಭೋಗ

ಪ್ರತಿವರ್ಷ ಮಾಘ ಸಪ್ತಮಿಯಂದು ಶ್ರೀರಂಗನಾಥ ಸ್ವಾಮಿ ಬೃಹತ್ ರಥೋತ್ಸವ ಜರುಗುತ್ತವೆ. ಬ್ರಹ್ಮೋತ್ಸವದ ಅಂಗವಾಗಿ ಪ್ರಹ್ಲಾದ ಪರಿಪಾಲನ, ಗಜೇಂದ್ರ ಮೋಕ್ಷ, ಸೂರ್ಯಮಂಡಲೋತ್ಸವ, ಮಂಟಪೋತ್ಸವ ಹಾಗೂ ಶ್ರೀರಂಗನಾಥ ಮತ್ತು ರಂಗನಾಯಕಿ ಅಮ್ಮನವರ ರಥಾರೋಹಣ ಉತ್ಸವಗಳು ಜರುಗುತ್ತವೆ. ದೇಗುಲದಲ್ಲಿ ಉತ್ತರಾಯಣ ಪುಣ್ಯಕಾಲದ ನಿಮಿತ್ತ ವರ್ಷಕೊಂದು ಬಾರಿ ಸಂಕ್ರಾತಿಯಂದು ವೈಕುಂಠ ದ್ವಾರವನ್ನು ತೆರೆಯ ಲಾಗುತ್ತದೆ. ಭಕ್ತರು ಸ್ವರ್ಗದ ದ್ವಾರ ಪ್ರವೇಶಿಸಿ ಪುನೀತರಾಗುತ್ತಾರೆ. ಅಂದೇ ಸಂಜೆ ಲಕ್ಷದೀಪೋತ್ಸವ ನಡೆಯಲಿದ್ದು ಸಹಸ್ರಾರು ಮಂದಿ ದೀಪೋತ್ಸವಕ್ಕೆ ಸಾಕ್ಷಿಯಾಗುತ್ತಾರೆ. ಮಾರನೇ ದಿನ ಶ್ರೀರಂಗನಾಥಸ್ವಾಮಿಯ ಚಿಕ್ಕ ರಥೋತ್ಸವ ಜರುಗುತ್ತವೆ. ವೈಶಾಖ ಶುದ್ಧಸಪ್ತಮಿ ಯಂದು ಶ್ರೀರಂಗ ಜಯಂತಿ ಉತ್ಸವ ನಡೆಯುವುದು ವಿಶೇಷ. ಅಂದು ರಾತ್ರಿ ಶ್ರೀರಂಗನಾಥಸ್ವಾಮಿಗೆ ವಜ್ರ ಖಚಿತ ಶ್ರೀರಂಗಮುಡಿ ಕಿರೀಟ ತೊಡಿಸಿ ಪ್ರಾಕಾರದ ಸುತ್ತಲೂ ಪ್ರದಕ್ಷಣೆ ಮಾಡಿ ಪೂಜಿಸಲಾಗುತ್ತದೆ.

ವರ್ಷದ ಎಲ್ಲ ದಿನಗಳಲ್ಲೂ ನಿತ್ಯ ಪೂಜೆ, ಅಭಿಷೇಕಗಳು ನಡೆಯುತ್ತವೆ. ಪ್ರತಿ ದಿನ ಮುಂಜಾನೆ 5 ಗಂಟೆಗೆ ದೇಗುಲ ಬಾಗಿಲು ತೆರೆಯುತ್ತದೆ. ಸುಪ್ರಭಾತ ಸೇವೆ ನಂತರ ಬೆಳಗ್ಗೆ 7.30 ರಿಂದ ಮಧ್ಯಾಹ್ನ 1.30ರ ವರಗೆ ಹಾಗೂ ಸಂಜೆ 4 ರಿಂದ ರಾತ್ರಿ 8 ರವರೆಗೆ ಭಕ್ತರಿಗೆ ದೇವರ ದರ್ಶನಕ್ಕೆ ಅವಕಾಶವಿರುತ್ತದೆ. ದೇಗುಲದ ದಕ್ಷಿಣ ದಿಕ್ಕಿಗೆ ಸೋಪಾನಕಟ್ಟೆ ಕಾವೇರಿ ನದಿಯಲ್ಲಿ ಸ್ನಾನ ಮಡಿಗೆ ಹತ್ತಿರವಿದೆ.

ಒಳನೋಟ, ವಿಶ್ಲೇಷಣೆ, ಚಿಂತನೆಗಳಿಗೆ ಕರ್ನಾಟಕದಲ್ಲಿ ಯಾವತ್ತೂ ಕೊರತೆ ಇಲ್ಲ. ಕೊರತೆ ಇರುವುದು ಅವುಗಳನ್ನು ಕಾರ್ಯಗತಗೊಳಿಸಲು ಬೇಕಾದ ರಾಜಕೀಯ ಸಂಕಲ್ಪಶಕ್ತಿಯಲ್ಲಿ.

❖ ಎಸ್. ಎಲ್. ಭೈರಪ್ಪ



ಸಮ್ಮೇಳನದ ಹಣದಲ್ಲೇ ಕಸಾಪ ಭವನ ನಿರ್ಮಾಣ

ಕಲಾಮಂದಿರ, ಕುವೆಂಪು ಪ್ರತಿಮೆ, ಜಾನಪದ ಲೋಕದ ಅಭಿವೃದ್ಧಿಗೂ ಹಣ ಬಳಕೆ

1974ರಲ್ಲಿ 48ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಜಿಲ್ಲೆಯಲ್ಲಿ ಮೊದಲ ಬಾರಿಗೆ ನಡೆದಿದ್ದು ಮಹಿಳಾ ಸಾಹಿತಿ ಜಯದೇವಿ ತಾಯಿ ಲಿಗಾಡೆ ಸರ್ವಾಧ್ಯಕ್ಷರಾಗಿದ್ದರು. ದಾನಿಗಳಿಂದ ಸಂಗ್ರಹಿಸಿದ ಹಣದಲ್ಲಿಯೇ ಸಂಪೂರ್ಣ ಸಮ್ಮೇಳನ ನಡೆದಿತ್ತು. 2ನೇ ಬಾರಿಗೆ ನಡೆದಿದ್ದ ಸಮ್ಮೇಳನದಲ್ಲಿ ರಾಜ್ಯಾದ್ಯಂತ ಸುಮಾರು ಕಸಾಪ ಪ್ರತಿನಿಧಿಗಳಾಗಿ 8 ಸಾವಿರ ಮಂದಿ ಭಾಗವಹಿಸಿದ್ದರು. ಅವರೆಲ್ಲರಿಗೂ ಕಸಾಪದಿಂದಲೇ ತಲಾ 10 ರೂ. ನಂತೆ 80 ಸಾವಿರ ರೂ. ರಾಜ್ಯ ಸಂಘಕ್ಕೆ ಪಾವತಿಸಲಾಗಿತ್ತು.



❖ ಎಚ್‌.ಶಿವರಾಜು

ಮಂಡ್ಯ ಜಿಲ್ಲೆಯಲ್ಲಿ ಮೂರನೇ ಬಾರಿಗೆ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಡಿ. 20,21 ಹಾಗೂ 22ರಂದು ನಡೆಯುತ್ತಿದೆ. ಅದಕ್ಕೂ ಮುನ್ನ 1974ರಲ್ಲಿ ಮೊದಲ ಬಾರಿ ಹಾಗೂ 1994ರಲ್ಲಿ ಎರಡನೇ ಬಾರಿಗೆ ನಡೆದಿದ್ದು, ಕೆಲವು ವಿಶೇಷತೆಗಳಿಗೆ ಈ ಎರಡು ಸಮ್ಮೇಳನಗಳು ಸಾಕ್ಷಿಯಾಗಿವೆ.

1974ರಲ್ಲಿ 48ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಜಿಲ್ಲೆಯಲ್ಲಿ ಮೊದಲ ಬಾರಿಗೆ ನಡೆದಿತ್ತು. ಆ ವೇಳೆಯಲ್ಲಿ ಜಿ.ನಾರಾಯಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದರು. ಮೊದಲ ಬಾರಿಗೆ ಮಹಿಳಾ ಸಾಹಿತಿ ಜಯದೇವಿ ತಾಯಿ ಲಿಗಾಡೆ ಸಮ್ಮೇಳನದ ಸರ್ವಾಧ್ಯಕ್ಷರಾಗಿ ಆಯ್ಕೆಯಾಗಿದ್ದರು. ಸಮ್ಮೇಳನ ಯಶಸ್ವಿಯಾಗಿ ನಡೆದಿತ್ತು. ಆಗ ಸಮ್ಮೇಳನ ನಡೆಸುವುದೇ ಕಷ್ಟವಾಗಿತ್ತು. ದಾನಿಗಳಿಂದ ಸಂಗ್ರಹಿಸಿದ ಹಣದಲ್ಲಿಯೇ ಸಂಪೂರ್ಣ ಸಮ್ಮೇಳನ ನಡೆದಿತ್ತು.

> ಸಾರ್ವಜನಿಕ ಸಂಸ್ಥೆಗಳ ಕಾರ್ಯನಿರ್ವಹಣೆ ಟೀಕೆಗಳಿಗೆ ಒಳಗಾಗುವುದು ಸಹಜ. ಕೆಲಸ ಮಾಡದಿದ್ದಾಗ ಮಾತ್ರ ಟೀಕೆಗಳಿರುವುದಿಲ್ಲ. ಟೀಕೆಗಳು ಬರುತ್ತವೆಂದು ಕೆಲಸ ಮಾಡದೆ ಇರಲಾಗದು.
>
> ❖ ಹಾ. ಮಾ. ನಾಯಕ್



1974ರ ಸಮ್ಮೇಳನ ಸರ್ವಾಧ್ಯಕ್ಷರಾಗಿದ್ದ ಜಯದೇವಿ ತಾಯಿ ಲಿಗಾಡೆ.

ಎಂಟು ಸಾವಿರ ಮಂದಿ ಭಾಗಿ

ಎರಡನೇ ಬಾರಿಗೆ ನಡೆದಿದ್ದ ಸಮ್ಮೇಳನದಲ್ಲಿ ರಾಜ್ಯಾದ್ಯಂತ ಸುಮಾರು ಕಸಾಪ ಪ್ರತಿನಿಧಿಗಳಾಗಿ 8 ಸಾವಿರ ಮಂದಿ ಭಾಗವಹಿಸಿದ್ದರು. ಅವರೆಲ್ಲರಿಗೂ ಜಿಲ್ಲಾ ಕಸಾಪದಿಂದಲೇ ತಲಾ 10 ರೂ. ನಂತೆ 80 ಸಾವಿರ ರೂ. ರಾಜ್ಯ ಕಸಾಪಕ್ಕೆ ಪಾವತಿಸಲಾಗಿತ್ತು. ಆ ಸಮ್ಮೇಳನಕ್ಕೆ ಬಂದಿದ್ದ ಅಷ್ಟು ಜನ ರಾಜ್ಯದ ಬೇರೆ ಜಿಲ್ಲೆಗಳಲ್ಲಿ ನಡೆದಿದ್ದ ಸಮ್ಮೇಳನಕ್ಕೆ ಭಾಗಿಯಾಗಿರಲಿಲ್ಲ ಎನ್ನುವುದೇ ದಾಖಲೆ. ಬಂದ ಸಾಹಿತ್ಯಾಸಕ್ತರಿಗೆ ಊಟ, ಗೋಷ್ಠಿಗಳು, ಕಾರ್ಯಕ್ರಮಗಳು ಯಶಸ್ವಿಯಾಗಿ ನಡೆದಿದ್ದವು. ಆಗಿನ ಉಪಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಹಾಗೂ ಸಂಸದ ಡಾ.ಜಿ.ಮಾದೇಗೌಡರ ಕೊಡುಗೆ ಅಪಾರ. ಇದೇ ಸರ್‌ಎಂವಿ ಕ್ರೀಡಾಂಗಣದಲ್ಲಿ ಆಯೋಜಿಸಲಾಗಿತ್ತು ಎಂದು ಸಮ್ಮೇಳನದ ಯಶಸ್ಸಿನ ಬಗ್ಗೆ ಜಿ.ಟಿ.ವೀರಪ್ಪ ತಿಳಿಸಿದರು.

ನಂತರ 20 ವರ್ಷಗಳ ಬಳಿಕ 1994ರಲ್ಲಿ ಮತ್ತೆ ಮಂಡ್ಯಕ್ಕೆ 63ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಒಲಿದು ಬಂದಿತ್ತು. ಆ ಸಮ್ಮೇಳನವೂ ವಿವಿಧ ವಿಶೇಷತೆಗಳಿಗೆ ಸಾಕ್ಷಿಯಾಗಿತ್ತು. ಈಗಿನ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರಾಗಿರುವ ಸಾಹಿತಿ ಹಾಗೂ ಜಾನಪದ ವಿದ್ವಾಂಸ ಗೊ.ರು.ಚನ್ನಬಸಪ್ಪ ಕೇಂದ್ರ ಕನ್ನಡ ಸಾಹಿತ್ಯ ಪರಿಷತ್ತಿನ ರಾಜ್ಯಾಧ್ಯಕ್ಷರಾಗಿದ್ದರು. ಸಾಹಿತಿ ಚದುರಂಗ ಸಮ್ಮೇಳನದ ಸರ್ವಾಧ್ಯಕ್ಷರಾಗಿದ್ದರು. ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ಪ್ರೊ.ಜಿ.ಟಿ.ವೀರಪ್ಪ ಇದ್ದರು.

ಸಮ್ಮೇಳನಕ್ಕೆ 22 ಲಕ್ಷ ರೂ.ವೆಚ್ಚ

ಸಮ್ಮೇಳನಕ್ಕೆ ಸರ್ಕಾರ ಹಾಗೂ ದಾನಿಗಳಿಂದ ಒಟ್ಟು 42 ಲಕ್ಷ ರೂ. ಹಣ ಸಂಗ್ರಹವಾಗಿತ್ತು. ಅದರಲ್ಲಿ ಕೇವಲ 22 ಲಕ್ಷ ರೂ. ಮಾತ್ರ ಖರ್ಚಾಗಿತ್ತು. ಉಳಿದ 20 ಲಕ್ಷ ರೂ. ಹಣ ಅಭಿವೃದ್ಧಿ ಕಾರ್ಯಗಳಿಗೆ ನೀಡಲಾಯಿತು. ಇದರಿಂದ ರಾಜ್ಯದಲ್ಲಿಯೇ ಬೆಂಗಳೂರು ಹೊರತುಪಡಿಸಿದರೆ ಮಂಡ್ಯದಲ್ಲಿಯೇ ಕನ್ನಡ ಸಾಹಿತ್ಯ ಪರಿಷತ್ತು ಭವನ ನಿರ್ಮಾಣವಾದ ಕೀರ್ತಿಗೆ ಭಾಜನವಾಯಿತು.

ಕಸಾಪ ಭವನಕ್ಕೆ 6.15 ಲಕ್ಷ ರೂ.

ಜಿಲ್ಲೆಯಲ್ಲಿ ಮೊದಲ ಹಾಗೂ ಎರಡನೇ ಬಾರಿಗೆ ಸಮ್ಮೇಳನ ನಡೆದರೂ ಕನ್ನಡ ಸಾಹಿತ್ಯ ಭವನ ಇರಲಿಲ್ಲ. ಆಗಿನ ಜಿಲ್ಲಾಧ್ಯಕ್ಷರಾಗಿದ್ದ ಜಿ.ಟಿ.ವೀರಪ್ಪ ಅವರು ಉಳಿದಿದ್ದ 20 ಲಕ್ಷ ರೂ. ಹಣದಲ್ಲಿ ನಗರಸಭೆಯಿಂದ ಉಚಿತವಾಗಿ ಬಂದಿಗೌಡ ಬಡಾವಣೆಯಲ್ಲಿ ನೀಡಿದ್ದ ನಿವೇಶನದಲ್ಲಿ 6.15 ಲಕ್ಷ ರೂ. ಖರ್ಚು ಮಾಡುವ ಮೂಲಕ ಭವನ ನಿರ್ಮಾಣ ಮಾಡಲಾಯಿತು.

ಕುವೆಂಪು ಪ್ರತಿಮೆಗೆ 4 ಲಕ್ಷ ರೂ.

ನಗರದ ಹೃದಯ ಭಾಗದಲ್ಲಿರುವ ರೈತಸಭಾಂಗಣದ ಆವರಣದಲ್ಲಿ ನಿರ್ಮಿಸಲಾಗಿರುವ ಕುವೆಂಪು ಪ್ರತಿಮೆಗೂ ಉಳಿದಿದ್ದ ಸಮ್ಮೇಳನದ ಹಣ ನೀಡಲಾಗಿತ್ತು. ಪ್ರತಿಮೆ ನಿರ್ಮಾಣಕ್ಕೆ ಆಗಲೇ ಕಸಾಪದಿಂದ 4 ಲಕ್ಷ ರೂ. ನೀಡಿ ಪ್ರತಿಮೆ ನಿರ್ಮಾಣ ಮಾಡಲಾಗಿದ್ದ ಕೀರ್ತಿ ಕಸಾಪಗೆ ಸಲ್ಲುತ್ತದೆ.



ಮಂಡ್ಯ ಜಿಲ್ಲೆಯಲ್ಲಿ ಎರಡನೇ ಬಾರಿ 1994ರಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನ ಸರ್ವಾಧ್ಯಕ್ಷ ಆಗಿದ್ದ ಸಾಹಿತಿ ಚದುರಂಗ.

ಕಲಾಮಂದಿರ ಕಾಮಗಾರಿ ಪೂರ್ಣಗೊಳಿಸಲು ಹಣ

ಕಲಾಮಂದಿರ ನಿರ್ಮಾಣ ಹಂತದಲ್ಲಿದ್ದು, ಕಾಮಗಾರಿ ಅರ್ಧಕ್ಕೆ ನಿಂತಿತ್ತು. ಆಗಿನ ಜಿಲ್ಲಾಧಿಕಾರಿಯಾಗಿದ್ದ ವೀರಭದ್ರಾಚಾರ್ ಅವರ ಮನವಿ ಮೇರೆಗೆ ಕಲಾಮಂದಿರಕ್ಕೆ ಸಮ್ಮೇಳನದಿಂದ ಉಳಿದಿದ್ದ ಹಣದಲ್ಲೇ 8.50 ಲಕ್ಷ ರೂ. ನೀಡಲಾಗಿತ್ತು. ಇದರಿಂದ ಕಾಮಗಾರಿ ಪೂರ್ಣಗೊಳಿಸಲಾಯಿತು.

ಜಾನಪದ ಲೋಕಕ್ಕೆ 1 ಲಕ್ಷ ರೂ.

ಆಗಿನ ಮಂತ್ರಿಯಾಗಿದ್ದ ಕೆ.ಎನ್.ನಾಗೇಗೌಡರು ಸಹ ಜಾನಪದ ಲೋಕಕ್ಕಾಗಿ ಹಣ ನೀಡುವಂತೆ ಹೇಳಿದ್ದರು. ಅದರಂತೆ ಅದಕ್ಕೂ 1 ಲಕ್ಷ ರೂ. ದೇಣಿಗೆ ನೀಡಲಾಗಿತ್ತು. ಇದೇ ರೀತಿಯ ಸಮ್ಮೇಳನದಲ್ಲಿ ಉಳಿದಿದ್ದ ಹಣ ವಿವಿಧ ಅಭಿವೃದ್ಧಿಗೆ ಬಳಸಲಾಗಿತ್ತು ಎಂದ ಆಗಿನ 1994ರ ಕಸಾಪ ಅಧ್ಯಕ್ಷರಾಗಿದ್ದ ಪ್ರೊ.ಜಿ.ಟಿ.ವೀರಪ್ಪ. ◆

ಪುಣ್ಯಪುರುಷರ ನಾಡಿನಲ್ಲಿ ನಾವು ಹುಟ್ಟಿದೆವೆಂದು ಹೇಳಿಕೊಳ್ಳುವುದು ಸ್ವಾಭಾವಿಕ. ಆದರೆ, ಅವರ ಸಾಹಸದ ಎಲ್ಲೆಗಳನ್ನು ಮೀರಿ ಸಾಗುವಂಥ ಬದುಕನ್ನು ಬಾಳುವುದೇ ನಾವು ಪೂರ್ವಿಕರಿಗೆ ಸಲ್ಲಿಸಬೇಕಾದ ಕಾಣಿಕೆ.

❖ *ಎ. ಎನ್. ಮೂರ್ತಿರಾವ್*



ಭಕ್ತರ ಇಷ್ಟಾರ್ಥ ನೆರವೇರಿಸುವ ಮಹಾ ಕಾಳಿದೇವಿ

ಟಿ.ಎಂ.ಹೊಸೂರು ಗೇಟ್ ಬಳಿ ಕಳೆದ 10 ವರ್ಷಗಳ ಹಿಂದೆ ಶ್ರೀ ಗುರುದೇವ್ ಪ್ರಚಂಡ ಅವರು ನಿರ್ಮಿಸಿದ ಮಹಾ ಕಾಳಿದೇವಿ ದೇವಾಲಯ ಇಂದು ಹಲವು ಭಕ್ತರ ಕಷ್ಟಕರ್ಪಾಣ್ಯಗಳನ್ನು ಬಗೆಹರಿಸುವ ಧಾರ್ಮಿಕ ಕೇಂದ್ರವಾಗಿ ಮಾರ್ಪಟ್ಟಿದೆ. ಬೇಡಿದ್ದನ್ನು ನೀಡುವ ಮಹಾಕಾಳಿದೇವಿಯು ಭಕ್ತರ ಆರಾಧ್ಯ ದೇವತೆಯಾಗಿ ನೆಲೆಸಿದ್ದಾಳೆ. ಮೈಸೂರು, ಮಂಡ್ಯ, ಬೆಂಗಳೂರು ಸೇರಿದಂತೆ ರಾಜ್ಯದ ಹಲವು ಜಿಲ್ಲೆಗಳ ಭಕ್ತರು ದೇವಾಲಯಕ್ಕೆ ಭೇಟಿ ನೀಡಿ, ತಮ್ಮ ಇಷ್ಟಾರ್ಥಗಳನ್ನು ನೆರವೇರಿಸಿಕೊಂಡಿರುವ ಹಲವು ಉದಾಹರಣೆಗಳು ಸಾಕಷ್ಟಿವೆ.

❖ **ಗಂಜಾಂ ಮಂಜು,** ಶ್ರೀರಂಗಪಟ್ಟಣ

ಭಕ್ತರ ಇಷ್ಟಾರ್ಥಗಳನ್ನು ನೇರವೇರಿಸಿ ನೆಮ್ಮದಿಯ ಬದುಕು ನೀಡುವ ಮೂಲಕ ಸಾವಿರಾರು ಭಕ್ತರನ್ನು ತನ್ನತ್ತ ಸೆಳೆಯುತ್ತಿರುವ ಮಹಾಕಾಳಿ ಹಲವರ ಆರಾಧ್ಯ ದೈವವಾಗಿದ್ದಾಳೆ.

ಎಲ್ಲರ ಆಕರ್ಷಣಾ ಕೇಂದ್ರ ಈ ದೇಗುಲ

ಶ್ರೀರಂಗಪಟ್ಟಣದ ಮೈಸೂರು-ಬೆಂಗಳೂರು ಹೆದ್ದಾರಿಯ ಟಿ.ಎಂ.ಹೊಸೂರು ಗೇಟ್ ಬಳಿ ಕಳೆದ 10 ವರ್ಷಗಳ ಹಿಂದೆ ಶ್ರೀ ಗುರುದೇವ್ ಪ್ರಚಂಡ ಅವರು ಈ ದೇವಾಲಯವನ್ನು ನಿರ್ಮಿಸಿದರು.

ಪ್ರಸ್ತುತ ಎಲ್ಲರ ಆಕರ್ಷಣೆಯ ಕೇಂದ್ರವಾಗಿರುವ ಈ ದೇವಾಲಯದಲ್ಲಿ ದೈವ ಸ್ವರೂಪಿಯಾಗಿ ಮಹಾಕಾಳಿ ಪ್ರತಿರೂಪದ ಮೂರ್ತಿಯನ್ನು ದಕ್ಷಿಣಾಭಿಮುಖವಾಗಿ ಪ್ರತಿಸ್ಥಾಪಿಸಲಾಗಿದೆ.

ಈ ಭಾಗದ ಭಕ್ತರು ಮಾತ್ರವಲ್ಲದೇ, ಮೈಸೂರು, ಮಂಡ್ಯ, ಬೆಂಗಳೂರು ಸೇರಿದಂತೆ ರಾಜ್ಯದ ಹಲವು ಜಿಲ್ಲೆಗಳ ಭಕ್ತರು ದೇವಾಲಯಕ್ಕೆ

ಉಸುರಿನ ಪರಿಮಳವಿರಲು ಕುಸುಮದ ಹಂಗೇಕಯ್ಯಾ? ಕ್ಷಮೆ ದಮೆ ಶಾಂತಿ ಸೈರಣೆಯಿರಲು ಸಮಾಧಿಯ ಹಂಗೇಕಯ್ಯಾ, ಲೋಕವೇ ತಾನಾದ ಬಳಿಕ ಏಕಾಂತ ಹಂಗೇಕಯ್ಯಾ ಚೆನ್ನಮಲ್ಲಿಕಾರ್ಜುನ.

❖ **ಅಕ್ಕಮಹಾದೇವಿ**


87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ
ಆಗಮಿಸುವ ಸರ್ವರಿಗೂ ಹಾರ್ದಿಕ ಶುಭಾಶಯಗಳು
ಶುಭ ಕೋರುವವರು:
ಶ್ರೀ ಸತ್ಯನಾರಾಯಣ
ಅಧ್ಯಕ್ಷರು - ವಕೀಲರ ಸಂಘ
ಶ್ರೀರಂಗಪಟ್ಟಣ ತಾಲ್ಲೂಕು


೮೭ನೇ ಅಖಿಲ ಭಾರತ ಕನ್ನಡ ಸಾಹಿತ್ಯ
ಸಮ್ಮೇಳನಕ್ಕೆ ಹಾರ್ದಿಕ ಸುಸ್ವಾಗತ
ಬೆಳಗೊಳ ಗ್ರಾಮ ಪಂಚಾಯಿತಿ ಕಾರ್ಯಾಲಯ, ಬೆಳಗೊಳ
ಶ್ರೀರಂಗಪಟ್ಟಣ ತಾಲ್ಲೂಕು, ಮಂಡ್ಯ ಜಿಲ್ಲೆ
ಶ್ರೀ ಬಿ.ಸಿ. ಪುಟ್ಟರಾಜು
ಅಧ್ಯಕ್ಷರು
ಪರಮೇಶ್ವರಪ್ಪ ಎಸ್.
ಅಭಿವೃದ್ಧಿ ಅಧಿಕಾರಿ
ಶುಭ ಕೋರುವವರು
ಗ್ರಾಮ ಪಂಚಾಯ್ತಿ
ಅಧ್ಯಕ್ಷರು, ಉಪಾಧ್ಯಕ್ಷರು
ಹಾಗೂ ಸರ್ವ ಸದಸ್ಯರುಗಳು
ಮತ್ತು ಸಿಬ್ಬಂದಿ ವರ್ಗದವರು
ವೆಂಕಟರಾಮು
ಕಾರ್ಯದರ್ಶಿ
ಶ್ರೀಮತಿ ವಿಜಯಲಕ್ಷ್ಮಿ
ಉಪಾಧ್ಯಕ್ಷರು

ಅಮಾವಾಸ್ಯೆ, ಹುಣ್ಣಿಮೆಯಂದು ಪ್ರತ್ಯಂಗೀರಾ ಹೋಮ

ಈ ದೇವಾಲಯ ಹಲವು ವಿಶೇಷತೆಯನ್ನು ಹೊಂದಿದೆ. ಬಹುತೇಕ ದೇವಾಲಯವನ್ನು ಉತ್ತರಕ್ಕೆ, ಪೂರ್ವಕ್ಕೆ ಮುಖ ಮಾಡಿ ನಿರ್ಮಿಸಿರುತ್ತಾರೆ. ಆದರೆ, ಈ ದೇವಾಲಯದ ಮುಖ್ಯದ್ವಾರವನ್ನೇ ದಕ್ಷಿಣಾಭಿಮುಖವಾಗಿ ನಿರ್ಮಿಸಿ ದೇವಿಯನ್ನು ದಕ್ಷಿಣಾಭಿಮುಖವಾಗಿ ಪ್ರತಿಷ್ಠಾಪಿಸಲಾಗಿದೆ. ಈ ದಿಕ್ಕಿಗೆ ಅಧಿಪತಿ ಯಮರಾಯ ಹಾಗೂ ಶನಿಯಾಗಿರುತ್ತಾನೆ. ಪ್ರತಿ ಅಮಾವಾಸ್ಯೆ ಹಾಗೂ ಹುಣ್ಣಿಮೆಯಂದು ಪ್ರತ್ಯಂಗೀರಾ ಹೋಮವನ್ನು ಚಾಚೂ ತಪ್ಪದೇ ನಡೆಸಲಾಗುತ್ತದೆ. ಬರುವ ಭಕ್ತರು ಈ ಹೋಮಕ್ಕೆ ಸಾಮೂಹಿಕವಾಗಿ ಕೂರಲು ವ್ಯವಸ್ಥೆ ಕಲ್ಪಿಸಲಾಗುತ್ತದೆ. ಈ ಪೂಜೆಯಲ್ಲಿ ಹೆಚ್ಚಿನ ಭಕ್ತರು ಪಾಲ್ಗೊಳ್ಳುತ್ತಾರೆ.





ದೇವಾಲಯಕ್ಕೆ ಬರುವ ಭಕ್ತರಿಗೆ ಯಾವುದೇ ವಾಮಾಚಾರ, ಶತ್ರುಬಾಧೆ, ಪೀಡೆ ಪಿಚಾಚಿ, ಮಾಟ ಮಂತ್ರ, ಸಾಲಬಾಧೆ ಇದ್ದರೆ ಪ್ರತ್ಯಂಗೀರಾ ಹೋಮ ಮಾಡಿ ಪೂರ್ಣಾಹುತಿ ಹಾಕಿದರೆ ಎಲ್ಲವೂ ಒಳ್ಳೆಯದಾಗುವ ವಿಶ್ವಾಸವನ್ನು ಈ ದೇವಾಲಯದಲ್ಲಿ ಭಕ್ತರು ಕಂಡುಕೊಂಡಿದ್ದಾರೆ. ಭಕ್ತರು ಅರ್ಧ ಸೇರು ಅಕ್ಕಿ, ಕಾಯಿ, ಬೆಲ್ಲ ಹಾಗೂ ದೇವಿಗೆ ಮಡಿಲಕ್ಕಿ ನೀಡಿದರೆ ಭಕ್ತರ ಇಷ್ಟಾರ್ಥವನ್ನು ದೇವಿ ಸಿದ್ಧಿಸುತ್ತಾಳೆಂಬ ನಂಬಿಕೆ ಭಕ್ತರಲ್ಲಿದೆ.

■ ಶ್ರೀ ಗುರುದೇವ್,
ದೇವಾಲಯ ಸಂಸ್ಥಾಪಕರು

ಭೇಟಿ ನೀಡಿ, ತಮ್ಮ ಇಷ್ಟಾರ್ಥಗಳನ್ನು ತಾಯಿ ಬಳಿ ಬೇಡಿಕೊಂಡು ಸಕಾರಾತ್ಮಕ ಫಲಿತಾಂಶವನ್ನೂ ಪಡೆದಿರುವ ಉದಾಹರಣೆ ಸಾಕಷ್ಟಿವೆ. ಈ ಹಿನ್ನೆಲೆಯಲ್ಲಿ ಈ ಕ್ಷೇತ್ರ ಭಕ್ತಿಪೂರ್ವಕವಾಗಿ ಭಕ್ತರನ್ನು ಸೆಳೆಯುವಲ್ಲಿ ಯಶಸ್ವಿಯಾಗಿದೆ. ದೇವಾಲಯಕ್ಕೆ ಬಂದ ಭಕ್ತರಿಗೆ ವಿಶೇಷ ಪೂಜಾ ಕಾರ್ಯಗಳನ್ನು ನಡೆಸಿ ಅವರನ್ನು ತೃಪ್ತಿಯಿಂದ ಭಕ್ತಿಯ ಮಾರ್ಗದ ಕಡೆ ಮುಖ ಮಾಡವ ಈ ದೇವಿಯ ಮಹಿಮೆ ಇದೀಗ ನಾಡಿನಲ್ಲಿ ಶ್ರೀ ಗುರುದೇವ್ ಮಹಾ ಕಾಳಿ ಎಂಬ ಹೆಸರಿನಲ್ಲಿ ಪ್ರಖ್ಯಾತಿ ಹೊಂದಿದೆ.

ಭಕ್ತರಲ್ಲಿ ಯಾವುದೇ ಸಮಸ್ಯೆಗಳಿದ್ದರೂ ಪರಿಹಾರಕ್ಕಾಗಿ ಕೌಂಟರ್‌ನಲ್ಲಿ ಹೊಸ ಬಟ್ಟೆ ಪಡೆದುಕೊಂಡು, 5 ರೂ. ಹಾಕಿ ಅದನ್ನು ದೇವಿ ಮುಂಭಾಗದಲ್ಲಿರುವ ಬೇವಿನ ಮರಕ್ಕೆ ಕಟ್ಟಬೇಕು. ನಂತರ ದೇವಿ ಮುಂದೆ ಕುಳಿತು ಪ್ರಾರ್ಥನೆ ಸಲ್ಲಿಸಿ, 9 ವಾರಗಳು ದೇವಿಗೆ ಅಕ್ಕಿ, ಬೆಲ್ಲ, ಕಾಯಿ ನೀಡಿ ಪ್ರಾರ್ಥನೆ ಸಲ್ಲಿಸುವುದು. ಹಾಗೂ ಮನೆಯಲ್ಲಿ ಬೆಳಗ್ಗೆ ಎದ್ದ ತಕ್ಷಣ 5 ಬಾರಿ ಮಹಾಕಾಳಿ ದೇವಿ ಸ್ಮರಣೆ ಮಾಡಬೇಕು. ಆಗ ಯಾವುದೇ ಸಮಸ್ಯೆಗಳಿದ್ದರೂ ಪರಿಹಾರವಾಗುತ್ತದೆ ಎಂಬುದು ಈ ದೇವಾಲಯದಲ್ಲಿರುವ ದೇವಿ ಭಕ್ತರ ನಂಬಿಕೆಯಾಗಿದೆ.

ಶ್ರೀ ಗುರುದೇವ್ ಪ್ರಚಂಡ ಅವರಿಂದ ನಿರ್ಮಾಣವಾದ ದೇಗುಲ



ದೇಗುಲಕ್ಕೆ ಹೋಗುವ ಮಾರ್ಗ

ಮೈಸೂರು-ಬೆಂಗಳೂರು ಹೆದ್ದಾರಿಯಾಗಿರುವುದರಿಂದ ದೇವಾಲಯಕ್ಕೆ ಬರುವ ಭಕ್ತರಿಗೆ ಸಂಚಾರದ ಸಮಸ್ಯೆ ಇಲ್ಲ. ಶ್ರೀರಂಗಪಟ್ಟಣದಿಂದ ಮಂಡ್ಯಕ್ಕೆ ಸಂಚರಿಸುವ ಗ್ರಾಮೀಣ ಬಸ್‌ಗಳಿಗೆ ಟಿ.ಎಂ. ಹೊಸೂರು ಗೇಟ್ ಬಳಿ ನಿಲುಗಡೆ ಇದೆ. ಮೈಸೂರಿನಿಂದ ಶ್ರೀರಂಗಪಟ್ಟಣಕ್ಕೆ ಬಂದು ಮಂಡ್ಯ ಬಸ್ ಹತ್ತಿದರೆ ಕೇವಲ 4 ಕಿ.ಮೀ. ಮಂಡ್ಯದಿಂದ ಬಸ್ ಹತ್ತಿದರೆ 20 ಕಿ.ಮೀ. ಅಂತರದಲ್ಲಿ ಸಂಚಾರ ಮಾಡಿದರೆ ದೇವಾಲಯ ಸಿಗುತ್ತದೆ. ಖಾಸಗಿ ವಾಹನಗಳಲ್ಲಿ ಬರುವರಿಗೆ ಪಾರ್ಕಿಂಗ್ ವ್ಯವಸ್ತೆಗೂ ಜಾಗವಿದೆ. ವಿಶೇಷ ದಿನಗಳಂದು ದೇವಾಲಯದಲ್ಲಿ ಅಮ್ಮನವರಿಗೆ ವಿಶೇಷ ಪೂಜೆ ಇರುತ್ತದೆ. ಪ್ರತಿ ಹುಣ್ಣಿಮೆ, ಅಮಾವಾಸ್ಯೆಗಳಲ್ಲಿ ದೇವಿಗೆ ವಿಶೇಷ ಅಲಂಕಾರ, ಸಾಮೂಹಿಕ ಹೋಮ ಹಾಗೂ ವಿಶೇಷ ಪೂಜಾ ಕಾರ್ಯಕ್ರಮ ನಡೆಯುತ್ತದೆ. ದೇವಾಲಯಕ್ಕೆ ಬಂದ, ಭಕ್ತರಿಗೆ ಅನ್ನಸಂತರ್ಪಣೆ, ಜೊತೆಗೆ ಪ್ರಸಾದ ವಿತರಣೆ ನಡೆಸಲಾಗುತ್ತದೆ. ಭಕ್ತರ ಇಷ್ಟಾರ್ಥ ನೆರವೇರಿಸುವ ಮಹಾಕಾಳಿ ಇದೀಗ ನಾಡಿನಾದ್ಯಂತ ಹೆಸರುವಾಸಿಯಾಗಿದ್ದಾಳೆ. ◆

ಹೊನ್ನು ಮಾಯೆಯೆಂಬರು ಹೊನ್ನು ಮಾಯೆಯಲ್ಲ, ಹೆಣ್ಣು ಮಾಯೆಯೆಂಬರು ಹೆಣ್ಣು ಮಾಯೆಯಲ್ಲ,
ಮಣ್ಣು ಮಾಯೆಯೆಂಬರು ಮಣ್ಣು ಮಾಯೆಯಲ್ಲ, ಮನದ ಮುಂದಣ ಆಸೆಯೇ ಮಾಯೆ ಕಾಣಾ ಗುಹೇಶ್ವರಾ

❖ ಅಲ್ಲಮ ಪ್ರಭು

ಜಾನಪದ ದಿಗ್ಗಜ ನಾಡೋಜ ಡಾ.ಎಚ್.ಎಲ್.ನಾಗೇಗೌಡ



ಐಎಎಸ್ ಅಧಿಕಾರಿಯಿಂದ ಜಾನಪದ ಲೋಕದವರೆಗೆ



❖ ಪಿ.ಜೆ.ಜಯರಾಮು

ಕನ್ನಡ ಸಾಹಿತ್ಯ ಹಾಗೂ ಜಾನಪದ ಲೋಕದಲ್ಲಿ ಡಾ.ಎಚ್.ಎಲ್.ನಾಗೇಗೌಡ ಅವರದ್ದು ಅದ್ವಿತೀಯ ಸಾಧನೆ. ಐ.ಎ.ಎಸ್ ಅಧಿಕಾರಿಯಾಗಿ ಉತ್ತುಂಗ ಸ್ಥಾನದಲ್ಲಿದ್ದರೂ, ಲೋಕಸೇವಾ ಆಯೋಗದಂತಹ ಪ್ರಮುಖ ಹುದ್ದೆಗಳಲ್ಲಿ ಅಲಂಕೃತರಾಗಿದ್ದರೂ ಅವರ ಹೃದಯ ಹಳ್ಳಿಗಳಲ್ಲಿ ಅಡಗಿದ್ದ ಸಾಂಸ್ಕೃತಿಕ ಮನಗಳ ಹಿಂದೆ ಓಡಾಡುತ್ತಿದ್ದುದು ಅಚ್ಚರಿಯ ವಿಚಾರವೆನಿಸುತ್ತದೆ.

ಅವರ ಆಸಕ್ತಿ ಕನ್ನಡ ಸಾಹಿತ್ಯ ಮತ್ತು ಜಾನಪದದಲ್ಲಿತ್ತು. ಇಂಗ್ಲಿಷ್ ಮತ್ತು ಕನ್ನಡ ಭಾಷೆಗಳೆರಡರಲ್ಲೂ ಪ್ರಭುತ್ವ ಪಡೆದಿದ್ದ ನಾಗೇಗೌಡರು ಕವಿ, ಕಥೆಗಾರ, ಕಾದಂಬರಿಕಾರ, ಭಾಷಾಂತರಕಾರ, ಪ್ರವಾಸಕಥನಕಾರ, ಆತ್ಮಚರಿತ್ರಾಕಾರ, ಜಾನಪದ ಕರ್ತಾರರಾಗಿ ನೀಡಿರುವ ಕೊಡುಗೆ ಅಮೂಲ್ಯವಾದುದು. ಅವರ ಜೀವನಾನುಭವದ ವ್ಯಾಪ್ತಿ ಎಷ್ಟು ವಿಶಾಲ, ಅಪರಿಮಿತ ಎಂಬುದಕ್ಕೆ ಅವರು ರಚಿಸಿರುವ ಕೃತಿಗಳೇ ಸಾಕ್ಷಿ. ಒಬ್ಬ ವ್ಯಕ್ತಿ ತನ್ನ ಜೀವಿತಾವಧಿಯಲ್ಲಿ ಇಷ್ಟೆಲ್ಲವನ್ನೂ ಸಾಧಿಸಲು ಸಾಧ್ಯವೇ? ಎಂದು ಮೂಗಿನ ಮೇಲೆ ಬೆರಳಿಟ್ಟು ಕೊಳ್ಳುವಂತೆ ಮಾಡಿರುವ ಇವರ ಸಾಧನೆ ಇವರ ವ್ಯಕ್ತಿತ್ವದಷ್ಟೇ ದೊಡ್ಡದು.

'ನಾನಾಗುವೆ ಗೀಜಗನ ಹಕ್ಕಿ' ನಾಗೇಗೌಡರು ತಮ್ಮ ತಾರುಣ್ಯದಲ್ಲಿ ರಚಿಸಿದ ಕವನಗಳ ಸಂಕಲನ. ಕಥೆ-ವ್ಯಥೆ ಸಂಕಲನ ಎಂಟು ನೀಳ್ಗವನಗಳನ್ನು ಹೊಂದಿದ್ದು, ನಾಗೇಗೌಡರ ಕವನ ಸ್ವಂತಿಕೆಯನ್ನು ಮೆರೆಯುತ್ತದೆ. ಬದುಕಿನ ಬಗ್ಗೆ ಕವಿಗಿರುವ ಕಳಕಳಿ, ಸಾಮಾಜಿಕ ಅನಿಷ್ಟಗಳನ್ನು ಕುರಿತಾದ ಹೇವರಿಕೆ, ಆದರ್ಶ-ವಾಸ್ತವ, ಸತ್ಯ-ಮಿಥ್ಯಗಳ ತಾಕಲಾಟ ಇಲ್ಲಿನ ಕವನಗಳಲ್ಲಿ ಕಂಡುಬರುತ್ತದೆ.

ಅಧಿಕಾರಿಯಾಗಿದ್ದರೂ ಸಾಹಿತ್ಯ ಕ್ಷೇತ್ರದ ಕಡೆ ತುಡಿತ

ಅಧಿಕಾರಿಯಾಗಿ ವಿವಿಧೆಡೆ ಉದ್ಯೋಗದಲ್ಲಿ ನಿರತರಾಗಿದ್ದರೂ, ಅವರ ತುಡಿತವೆಲ್ಲ ಇದ್ದದ್ದು, ಗ್ರಾಮೀಣ ಬದುಕಿನ ವಸ್ತುಗಳ ಸಂಗ್ರಹ ಹಾಗೂ ಜಾನಪದ ಕಲೆ ಬಗ್ಗೆ ಇದ್ದ ಆಳವಾದ ಪ್ರೀತಿ, ಕಾಪಾಡುವ ಕಾಳಜಿ. ಹೋದಲ್ಲೆಲ್ಲಾ ತಾವು ಸಂಗ್ರಹಿಸಿದ ವಸ್ತುಗಳ ಪ್ರದರ್ಶನಕ್ಕೊಂದು ಸ್ಥಳ ಕಲ್ಪಿಸಿಕೊಂಡು 1979ರ ಮಾ.21ರಂದು ಸ್ಥಾಪಿಸಿದ್ದು ಕರ್ನಾಟಕ ಜಾನಪದ ಟ್ರಸ್ಟ್. ಇವರು ನಿವೃತ್ತರಾದಾಗ

ನಾವು ಕರ್ನಾಟಕರು ಎಲ್ಲ ದ್ರಾವಿಡ ಸಂಪ್ರದಾಯಕ್ಕೂ ಒಕ್ಕಲು. ಎಲ್ಲ ದ್ರಾವಿಡ ಭಾಷೆಗೂ ಆಶ್ರಯದಾತರು. ಭಾಷಾತೀತವಾದ ಕರ್ನಾಟಕತ್ವ ನಮ್ಮಲ್ಲಿ ಹಿಂದಿನಿಂದಲೂ ಇದೆ. ಪ್ರಾಂತೀಕರಣದ ರಭಸದಲ್ಲಿ ಈ ವೈಶಿಷ್ಟ್ಯವನ್ನು ಅಲ್ಲಗೆಳೆಯಬಾರದು.

❖ *ಟಿ. ಪಿ. ಕೈಲಾಸಂ*

64ನೇ ಸಾಹಿತ್ಯ ಸಮ್ಮೇಳನಾಧ್ಯಕ್ಷರು: ನಾಗೇಗೌಡ

1995ರಲ್ಲಿ ಮುಧೋಳದಲ್ಲಿ ನಡೆದ 64ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು ಎಂಬುದು ಹೆಮ್ಮೆಯ ವಿಚಾರ. ನಾಗೇಗೌಡರ ಜಾನಪದ ಸೇವೆಯನ್ನು, ಸಾಹಿತ್ಯ ಸೇವೆಯನ್ನು ಪರಿಗಣಿಸಿ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರನ್ನಾಗಿ ಆಯ್ಕೆ ಮಾಡಲಾಗಿತ್ತು. ಈಗ ತಮ್ಮ ತವರು ಜಿಲ್ಲೆಯಲ್ಲಿ ನಡೆಯುತ್ತಿರುವ 87ನೇ ಸಮ್ಮೇಳನದ ಸಂದರ್ಭದಲ್ಲಿ ಅವರ ನೆನಪು ಮಾಡಿಕೊಳ್ಳುವುದು ನಮ್ಮ ಕರ್ತವ್ಯವೂ ಆಗಿದ್ದು, ಅವರು ಕನ್ನಡ ಸಾಹಿತ್ಯಕ್ಕೆ ನೀಡಿರುವ ಕೊಡುಗೆಗಳನ್ನು ಈ ಸಮಯದಲ್ಲಿ ಸ್ಮರಿಸುವುದು ಉದಯವಾಣಿ ಪತ್ರಿಕೆಯ ಉದ್ದೇಶವಾಗಿದೆ. ಇವರ ಸೇವೆಯನ್ನು ಗುರುತಿಸಿ ನಾಡಿನ ನಾನಾ ಸಂಘ ಸಂಸ್ಥೆಗಳೂ ಮತ್ತು ಸರ್ಕಾರ ಸನ್ಮಾನ, ಪ್ರಶಸ್ತಿ, ಪುರಸ್ಕಾರಗಳನ್ನು ನೀಡಿವೆ. 1974ರಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಕನ್ನಡ ರಾಜ್ಯೋತ್ಸವ ಪ್ರಶಸ್ತಿ, 1988ರಲ್ಲಿ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಪ್ರಶಸ್ತಿ, 1990ರಲ್ಲಿ ಕರ್ನಾಟಕ ನಾಟಕ ಅಕಾಡೆಮಿ ಫೆಲೋಷಿಪ್, 1992ರಲ್ಲಿ ಪಂಪ ಪ್ರಶಸ್ತಿ, 2003ರಲ್ಲಿ ನಾಡೋಜ ಗೌರವ ಪ್ರಶಸ್ತಿ ಲಭಿಸಿವೆ.



ನಾಗೇಗೌಡರ ಜನನ, ವಿದ್ಯಾಭ್ಯಾಸ

ನಾಗಮಂಗಲ ತಾಲೂಕಿನ ಕುಗ್ರಾಮ ಹೆರಗನಹಳ್ಳಿ ನಾಗೇಗೌಡರ ಹುಟ್ಟೂರು. ಒಂದು ಕಾಲಕ್ಕೆ ತೆಂಗಿನಕಾಯಿ ವ್ಯಾಪಾರಕ್ಕೆ ಪ್ರಸಿದ್ಧಿ ಪಡೆದಿದ್ದ, ಹೆರಗನಹಳ್ಳಿ ಬಸ್, ಬೈಸಿಕಲ್‌ಗಳನ್ನೇ ಕಂಡರಿಯಾದ ಒಂದು ಸಣ್ಣ ಊರಾಗಿತ್ತು. ಇಂತಹ ಸಣ್ಣ ಹಳ್ಳಿಯಲ್ಲಿ 1915ರ ಫೆ.11ರಂದು ದೊಡ್ಡಮನೆ ಕುಟುಂಬದಲ್ಲಿ ಲಿಂಗೇಗೌಡ, ಹುಚ್ಚಮ್ಮ ದಂಪತಿಯ ಮಗನಾಗಿ ಜನಿಸಿದ ನಾಗೇಗೌಡರು, ಬಾಲ್ಯಾವಸ್ಥೆಯಲ್ಲಿಯೇ (3ನೇ ವರ್ಷಕ್ಕೆ) ತಮ್ಮ ತಾಯಿಯನ್ನು ಕಳೆದುಕೊಂಡು ಅಜ್ಜಿಯ ಆರೈಕೆಯಲ್ಲಿ ಬೆಳೆದರು. ಪ್ರಾಥಮಿಕ ವಿದ್ಯಾಭ್ಯಾಸ ಆಳೀಸಂದ್ರ ಹಾಗೂ ನಾಗತಿಹಳ್ಳಿಯಲ್ಲಿ ಪೂರೈಸಿ, ಮಾಧ್ಯಮಿಕ ಮತ್ತು ಪ್ರೌಢಶಾಲೆ ಚನ್ನರಾಯಪಟ್ಟಣದಲ್ಲಿ, ಬೆಂಗಳೂರಿನಲ್ಲಿ ಇಂಟರ್ ಮೀಡಿಯೆಟ್, ಮೈಸೂರಿನಲ್ಲಿ ಬಿ.ಎಸ್ಸಿ, ಮತ್ತು ಪೂನಾದಲ್ಲಿ ಎಲ್.ಎಲ್.ಬಿ ಪದವಿ ಪಡೆದರು.

ನಾಗಮಂಗಲದಲ್ಲಿ ಅಖಿಲ ಕರ್ನಾಟಕ ಜಾನಪದ ಸಮ್ಮೇಳನ

ನಾಗೇಗೌಡರು ಕನ್ನಡ ಜಾನಪದಕ್ಕೆ ಸಲ್ಲಿಸಿರುವ ಸೇವೆ ಅವಿಸ್ಮರಣೀಯ. ಜನಪದ ಕಲೆ, ಸಾಹಿತ್ಯ, ಸಂಸ್ಕೃತಿ ನಾಗೇಗೌಡರ ಉಸಿರಾಗಿತ್ತು. ಒಬ್ಬೊಬ್ಬ ಜಾನಪದ ಕಲಾವಿದ ಸತ್ತಾಗಲೂ ಒಂದೊಂದು ಗ್ರಂಥಭಂಡಾರವೇ ಮುಳುಗಿದ ಹಾಗೆ ಎಂದು ಪರಿತಪಿಸಿದ ಅವರು ಜಾನಪದ ಕ್ಷೇತ್ರಕ್ಕೆ ತಮ್ಮನ್ನು ಸಮರ್ಪಿಸಿಕೊಂಡರು. 1971ರ ಅ. 27, 28 ಮತ್ತು 29 ಈ ಮೂರು ದಿನಗಳ ಕಾಲ ನಾಗಮಂಗಲದಲ್ಲಿ ಅಖಿಲ ಕರ್ನಾಟಕ ಜಾನಪದ ಸಮ್ಮೇಳನ ನಡೆಯಲು ಮೂಲ ಕಾರಣ.

ಜಾನಪದ ಅಕಾಡೆಮಿ ಸ್ಥಾಪಿಸಲು ಶ್ರಮ

'ನಾಡಿನ ಜನಸಂಖ್ಯೆಯಲ್ಲಿ ಶೇ.20ರಷ್ಟಿರುವ ನಗರವಾಸಿಗಳನ್ನು ತೃಪ್ತಿಪಡಿಸುವ ಸಂಗೀತ, ನಾಟಕ, ನೃತ್ಯ ಮೊದಲಾದ ಕಲೆಗಳಿಗೆ ಒಂದೊಂದಕ್ಕೂ ಪ್ರತ್ಯೇಕ ಅಕಾಡೆಮಿಗಳಿರುವುದಾದರೆ ಹಳ್ಳಿಗಳಲ್ಲಿ ವಾಸಿಸುವ ಶೇ.80ರಷ್ಟು ಗ್ರಾಮೀಣ ಜನತೆಯ ಬಾಳಿಗೆ ರಸವುಣಿಸಿ ಅವರ ಮನಸ್ಸನ್ನು ತಣಿಸುವ ಜನಪದ ಕಲೆ, ಸಾಹಿತ್ಯಗಳಿಗೆ ಒಂದು ಅಕಾಡೆಮಿ ಬೇಡವೇ?' ಎಂದು ಸರ್ಕಾರವನ್ನು ಒತ್ತಾಯಿಸಿ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಸ್ಥಾಪನೆಗೆ ಕಾರಣರಾದರು. ಸೋಬಾನೆಯವರು, ಕೋಲಾಟದವರು, ಗೊಂಬೆಯಾಟದವರು, ದೊಂಬಿದಾಸರು, ಹೆಳವರು.... ಹೀಗೆ ಅನೇಕ ಬಗೆಯ ಕಲಾವಿದರನ್ನು ಬರಮಾಡಿಕೊಂಡು ಅವರ ನಡುವೆ ಕಾಲ ಕಳೆಯುವುದು ನಾಗೇಗೌಡರಿಗೆ ಇದ್ದ ಆನಂದದಾಯಕ ಪ್ರವೃತ್ತಿ. ಜನಪದ ಕಲೆ, ಸಂಸ್ಕೃತಿ, ಆಚರಣೆಗಳನ್ನು ಕುರಿತಾದಂತೆ ನಾಗೇಗೌಡರ ಮಾರ್ಗದರ್ಶನದಲ್ಲಿ ಮೂಡಿಬಂದ 'ಸಿರಿಗಂಧ' ಶೀರ್ಷಿಕೆಯ ಜಾನಪದ ದಾಖಲಾತಿ ಸಾಕ್ಷ್ಯ ಚಿತ್ರ 108 ಕಂತುಗಳಲ್ಲಿ ಬೆಂಗಳೂರು ದೂರದರ್ಶನದಲ್ಲಿ ಪ್ರಸಾರವಾಗಿ ಅಪಾರ ಜನಮೆಚ್ಚುಗೆ ಗಳಿಸಿತು.

ಬೆಂಗಳೂರಿನಲ್ಲಿ ಇವರ ಅಭಿಮಾನಿಗಳು ಅಭಿನಂದನಾ ಸಮಾರಂಭವನ್ನೇರ್ಪಡಿಸಿ ಅರ್ಪಿಸಿದ 1.15 ಲಕ್ಷ ರೂ.ಗಳನ್ನು ಮೂಲಧನವನ್ನಾಗಿಸಿ ಕೊಂಡು ರಾಮನಗರದ ಬಳಿ 15 ಎಕರೆ ಪ್ರದೇಶದಲ್ಲಿ ಸ್ಥಾಪಿಸಿದ ಜಾನಪದ ಟ್ರಸ್ಟ್, ಈಗ ಕರ್ನಾಟಕ ಜಾನಪದ ಪರಿಷತ್ ಎನಿಸಿಕೊಂಡಿದೆ. ಜನಪದ ಗೀತೆಗಳ ಧ್ವನಿಮುದ್ರಣ, ವರ್ಣ ಪಾರದರ್ಶಿಕೆಗಳ ತಯಾರಿಕೆ, ಮೂಲ ಗಾಯಕರ ಧ್ವನಿ ಶೇಖರಣೆ, ಜಾನಪದ ಮಹಾ ವಿದ್ಯಾ ಲಯ ಸ್ಥಾಪಿಸಿ, ಡಿಪ್ಲೊಮಾ, ಸರ್ಟಿಫಿಕೇಟ್ ಕೋರ್ಸ್‌ಗಳು, ಯಕ್ಷಗಾನ ತರಬೇತಿ, ವಸ್ತು ಸಂಗ್ರಹಣೆ, ಸಾಕ್ಷ್ಯಚಿತ್ರ ನಿರ್ಮಾಣ ಮುಂತಾದ ಜಾನಪದ ಸಂಬಂಧಿ ಕಾರ್ಯಕ್ರಮಗಳಿಗೊಂದು ಕೇಂದ್ರಸ್ಥಾನವೇ ಜಾನಪದಲೋಕ. ಅವರಿಗೆ ಕೇವಲ ಜಾನಪದ ಲೋಕವೊಂದೇ ಅಲ್ಲದೇ, ಪ್ರವಾಸ ಸಾಹಿತ್ಯ, ಕಥೆ, ಕಾದಂಬರಿ, ಜೀವನ ಚರಿತ್ರೆ ಮುಂತಾದ ವಿವಿಧ ಕ್ಷೇತ್ರಗಳ ಬಗ್ಗೆಯೂ ಅಪಾರ ಒಲವಿತ್ತು.

ಮನಸ್ಸನ್ನು ಬಂಧಿಸುವ 'ಖೈದಿಗಳ ಕಥೆಗಳು'

ನಾಗೇಗೌಡರು ಖೈದಿಗಳನ್ನು ಭೇಟಿ ಮಾಡಿ ಅವರ ಮಾತುಗಳನ್ನು ಧ್ವನಿಮುದ್ರಿಸಿಕೊಂಡು ಅವರ ಬದುಕಿನ ಸುಖ-ದುಃಖಗಳನ್ನು ಅರಿತು 'ಖೈದಿಗಳ ಕಥೆಗಳು' ಎಂಬ ಜೀವಂತ ಪಾತ್ರಗಳ ಕಥೆಗಳನ್ನು ರಚಿಸಿದ್ದಾರೆ. ಸರಳಿನ ಹಿಂದೆ ಇರುವಾಗ ಖೈದಿಗಳು ತಮ್ಮ ತಪ್ಪಿಗೆ ಪಡುವ ಪರಿತಾಪ, ಪಶ್ಚಾತ್ತಾಪ, ತಪ್ಪನ್ನು ಮರೆತು ಋಜುಮಾರ್ಗದಲ್ಲಿ ನಡೆಯಬೇಕೆಂಬ ಅಭೀಪ್ಸೆಯನ್ನು ವ್ಯಕ್ತಪಡಿಸುವುದು ಇವೆಲ್ಲವೂ ಓದುಗರ ಮನ ಮಿಡಿಯುವಂತೆ ಮಾಡುತ್ತದೆ.

ಸಾಹಿತ್ಯ ಕ್ಷೇತ್ರದಲ್ಲಿ ವಿಶಿಷ್ಟ ಸ್ಥಾನ ಗಳಿಸಿಕೊಟ್ಟ ಕೃತಿ ಎಂದರೆ ದೊಡ್ಡಮನೆ ಕಾದಂಬರಿ. ಇವರ ಮತ್ತೆರಡು ಕಾದಂಬರಿಗಳು 'ಸೊನ್ನೆಯಿಂದ ಸೊನ್ನೆಗೆ' ಮತ್ತು 'ಭೂಮಿಗೆ ಬಂದ ಗಂಧರ್ವ'. ಅವರ ಹಳ್ಳಿಯ ಚಿತ್ರಗಳ ಕೃತಿ ನನ್ನೂರು, ವಿಶಿಷ್ಟ ಕೃತಿ ಬೆಟ್ಟದಿಂದ ಬಟ್ಟಲಿಗೆ ಕಾಫಿಯ ಕಥೆ, ಜಾನಪದ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಸೋಬಾನೆ ಚಿಕ್ಕಮ್ಮನ ಪದಗಳು, ಕರ್ನಾಟಕದ ಜಾನಪದ ಕಥೆಗಳು, ಪದವಿವೆ ನಮ್ಮ ಎದೆಯಲ್ಲಿ, ಮೈಲಾರ ಲಿಂಗನ ಕಾವ್ಯ, ಹೆಳವರು , ಅವರ ಕಾವ್ಯಗಳು, ಹಾಡಾನಬನ್ನಿ ದನಿಎತ್ತಿ, ಕನ್ನಡ ಜಾನಪದಕೋಶ ಮುಂತಾದ 15 ಕೃತಿ ಪ್ರಕಟಿಸಿದ್ದಾರೆ.

ಕ್ರಿ.ಪೂ.5ನೇ ಶತಮಾನದಿಂದ 18ನೇ ಶತಮಾನದವರೆಗೂ ಮತ ಪ್ರಚಾರ, ವ್ಯಾಪಾರ ವಾಣಿಜ್ಯೋದ್ಯಮ ಅಥವಾ ಪ್ರವಾಸಾನಂದಕ್ಕಾಗಿ ಭಾರತಕ್ಕೆ ಭೇಟಿ ನೀಡಿದ ಪ್ರವಾಸಿಗಳ ಬಗ್ಗೆ ಮಾಹಿತಿ ಸಂಗ್ರಹಿಸಿ ಇವರು ಬರೆದ 'ಪ್ರವಾಸಿ ಕಂಡ ಇಂಡಿಯಾ' ಎಂಟು ಸಂಪುಟಗಳಲ್ಲಿ ಪ್ರಕಟಗೊಂಡಿದ್ದು, ನಾಗೇಗೌಡರಿಗೆ ಕೀರ್ತಿ-ಪ್ರಶಸ್ತಿ ತಂದುಕೊಟ್ಟ ಕೃತಿಗಳು. 'ಮಾರ್ಕೊಪೋಲೋ' ಪ್ರವಾಸ ಕಥನ, 'ನಾ ಕಂಡ ಪ್ರಪಂಚ', ಮುಂತಾದ ಪ್ರವಾಸ ಕಥನಗಳೂ ಪ್ರಕಟಗೊಂಡಿವೆ. ಇವಲ್ಲದೇ ಸರೋಜಿನಿ ದೇವಿ ಮತ್ತು ಮಲೆನಾಡ ವಾಲ್ಮೀಕಿ (ಕುವೆಂಪು) ಅವರ ಜೀವನ ಚರಿತ್ರೆಯಲ್ಲದೆ ತಮ್ಮದೇ ಆತ್ಮಕಥೆ ಜೀವನ ಯಾತ್ರೆ, ವಿದೇಶಯಾತ್ರೆ, ಚುನಾವಣಾಯಾತ್ರೆ, ಜಾನಪದಯಾತ್ರೆ ಎಂಬ ನಾಲ್ಕು ಭಾಗಗಳಲ್ಲಿ ಬರೆದ ಕೃತಿಗಳೂ ಸೇರಿ 30ಕ್ಕೂ ಹೆಚ್ಚು ಕೃತಿಗಳು ಪ್ರಕಟವಾಗಿವೆ.

ಕುಲ ಕುಲ ಕುಲವೆಂದು ಹೊಡೆದಾಡದಿರಿ ನಿಮ್ಮ ಕುಲದ ನೆಲೆಯನೇನಾದರು ಬಲ್ಲಿರಾ? ಬಲ್ಲಿರ?
ಆತ್ಮ ಯಾವ ಕುಲ? ಜೀವ ಯಾವ ಕುಲ? ತತ್ವೇಂದ್ರಿಯ ಕುಲ ಪೇಳಿರಯ್ಯಾ..!

❖ ಕನಕದಾಸರು

ಗಂಡು ಮೆಟ್ಟಿದ ನಾಡು, ಶುದ್ಧ ಕನ್ನಡದ ನೆಲ, ಮಣ್ಣಿನ ಮಕ್ಕಳ ಕರ್ಮಭೂಮಿ, ಸಕ್ಕರೆ ನಾಡು, ಕೃಷಿಕರ ಬೀಡು ಸೇರಿದಂತೆ ಅನೇಕ ಹೆಸರಿನಲ್ಲಿ ಕರೆಯುವ ಮಂಡ್ಯ ಜಿಲ್ಲೆಯು ಮೈಸೂರು ಮಹಾರಾಜ ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ದೂರದೃಷ್ಟಿಯ ಫಲವಾಗಿ 1939ರಲ್ಲಿ ಸ್ವತಂತ್ರ ಜಿಲ್ಲೆಯಾಗಿ ರಚನೆಗೊಂಡಿತು. ಜಿಲ್ಲೆಯ ವ್ಯಾಪ್ತಿಯಲ್ಲಿ 7 ತಾಲೂಕು, 31 ಹೋಬಳಿಗಳು, 1,479 ಗ್ರಾಮಗಳು, 7 ವಿಧಾನಸಭಾ ಕ್ಷೇತ್ರಗಳು, ಒಂದು ಲೋಕಸಭೆ ಕ್ಷೇತ್ರ, 234 ಗ್ರಾಮ ಪಂಚಾಯಿತಿಗಳು, 41 ಜಿಲ್ಲಾ ಪಂಚಾಯಿತಿ, 155 ತಾಲೂಕು ಪಂಚಾಯಿತಿಗಳು ಸೇರಿವೆ.

ಮಣ್ಣಿನ ಮಕ್ಕಳ ಕರ್ಮಭೂಮಿ

ರಾಜಕೀಯ, ಸಾಂಸ್ಕೃತಿಕ ಸೇರಿ ವಿವಿಧ ಕ್ಷೇತ್ರಗಳ ನೆಚ್ಚಿನ ತಾಣ



ಸಕ್ಕರೆ ನಾಡು, ಕೃಷಿಕರ ಬೀಡು ಮಂಡ್ಯ ಜಿಲ್ಲೆ

ಮೈಸೂರು ಮಹಾರಾಜ ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ದೂರದೃಷ್ಟಿಯ ಫಲವಾಗಿ1939ರಲ್ಲಿ ರಚನೆಗೊಂಡ ಮಂಡ್ಯ ಜಿಲ್ಲೆ ಹಲವಾರು ವಿಶೇಷತೆಗಳನ್ನೊಂಡಿರುವ ಪ್ರದೇಶವಾಗಿದೆ. ಮಾಂಡವ್ಯ ಋಷಿಗಳ ತಪೋ ಭೂಮಿ ಎಂಬ ಕಾರಣಕ್ಕೆ 'ಮಂಡ್ಯ' ಎಂಬ ಹೆಸರು ಬಂದಿದೆ. ಕಬ್ಬು ಮತ್ತು ಭತ್ತ ಪ್ರಮುಖ ವಾಣಿಜ್ಯ ಬೆಳೆಗಳಾಗಿದ್ದು, ಹೈನುಗಾರಿಕೆ, ತೆಂಗು, ರೇಷ್ಮೆ ಹಾಗೂ ತೋಟಗಾರಿಕೆ ಬೆಳೆಗಳು ಅನ್ನದಾತರ ಪ್ರಮುಖ ಆದಾಯದ ಮೂಲಗಳಾಗಿವೆ. ಇದರ ಜೊತೆಗೆ ಮಂಡ್ಯ ನಗರದ ಮೈಷುಗರ್ ಕಾರ್ಖಾನೆ, ಮದ್ದೂರಿನ ಕೊಪ್ಪದ ಎನ್‌ಎಸ್‌ಎಲ್, ಭಾರತೀನಗರದ ಚಾಮುಂಡೇಶ್ವರಿ ಸಕ್ಕರೆ ಕಾರ್ಖಾನೆ, ಪಾಂಡವಪುರ ಸಹಕಾರ ಸಕ್ಕರೆ ಕಾರ್ಖಾನೆ, ಕೆ.ಆರ್.ಪೇಟೆಯ ಕೋರಮಂಡಲ್ ಕಾರ್ಖಾನೆಯೂ ಕಬ್ಬು ಬೆಳೆಗಾರರ ಆರ್ಥಿಕತೆಗೆ ಜೀವ ತುಂಬುತ್ತಿವೆ.

ಮಂಡ್ಯ ಜಿಲ್ಲೆಯು 4961 ಚದರ ಕಿ.ಮೀ. ಭೌಗೋಳಿಕ ವಿಸ್ತೀರ್ಣವನ್ನು ಹೊಂದಿದ್ದು, ಸಮುದ್ರ ಮಟ್ಟದಿಂದ 2638 ಅಡಿ ಎತ್ತರದಲ್ಲಿದೆ. ಕಾವೇರಿ, ಹೇಮಾವತಿ, ಲಕ್ಷ್ಮಣತೀರ್ಥ, ಶಿಂಷಾ, ವೀರವೈಷ್ಣವಿ ಹಾಗೂ ಲೋಕಪಾವನಿ ನದಿಗಳು ಹರಿಯುವುದರಿಂದ ಇದು ಸಮೃದ್ಧಿಯ ನಾಡು ಎಂದು ಪ್ರಸಿದ್ಧಿಯಾಗಿದೆ.

ರಾಜಕೀಯವಾಗಿ, ಸಾಂಸ್ಕೃತಿಕವಾಗಿ ವಿಶ್ವ ಪ್ರಸಿದ್ಧವಾಗಿರುವ ಜಿಲ್ಲೆಯು ಜಾನಪದ, ರಂಗಭೂಮಿ, ಸಿನಿಮಾ, ಕಲೆ ಸಾಹಿತ್ಯ, ಶಿಲ್ಪಕಲೆ ಸೇರಿದಂತೆ ಹಲವು ಕ್ಷೇತ್ರಗಳಲ್ಲಿ ಸಿರಿವಂತಿಕೆಯನ್ನು ಪ್ರದರ್ಶಿಸಿದೆ. ಪ್ರವಾಸೋದ್ಯಮ ಮೂಲಕ ವಿಶ್ವದ ಜನರನ್ನು ತನ್ನತ್ತ ಸೆಳೆಯುವ 50ಕ್ಕೂ ಹೆಚ್ಚು ಪ್ರವಾಸಿ ತಾಣಗಳಿವೆ. ಮಂಡ್ಯ, ಪಾಂಡವಪುರ, ಶ್ರೀರಂಗಪಟ್ಟಣ, ನಾಗಮಂಗಲ, ಮದ್ದೂರು, ಮಳವಳ್ಳಿ, ಕೆ.ಆರ್.ಪೇಟೆ ತಾಲೂಕುಗಳಲ್ಲಿರುವ ಧಾರ್ಮಿಕ ಕ್ಷೇತ್ರಗಳು, ಪಕ್ಷಿಧಾಮಗಳು, ಪ್ರಾಕೃತಿಕ ತಾಣಗಳು, ನದಿಗಳು, ಜಲಪಾತಗಳು, ಐತಿಹಾಸಿಕ ಸ್ಮಾರಕಗಳು, ಶಿಲ್ಪಕಲೆಗಳು ಜಿಲ್ಲೆಯ ಸಾಂಸ್ಕೃತಿಕ ವೈಭವವನ್ನು ಇಮ್ಮಡಿಗೊಳಿಸಿವೆ.

ಬ್ರಿಟಿಷರನ್ನು ದೇಶದಿಂದಲೇ ಓಡಿಸಲು

ಕಾವ್ಯ, ಸಾಹಿತ್ಯ ಮೊದಲಾದ ಎಲ್ಲ ಸೃಷ್ಟಿ ಕಾಲದ ಪ್ರತಿ ಸೃಷ್ಟಿಗಳು. ಕವಿ, ಕಲಾವಿದ ತನ್ನ ಕಾಲವನ್ನು ತನ್ನ ಕೃತಿಗಳಲ್ಲಿ ವ್ಯಾಖ್ಯಾನಿಸುತ್ತಾನೆ. ಹಾಗಾಗಿ ಕಾಲ ಬದಲಾದಂತೆ ಕಾವ್ಯವೂ ಬದಲಾಗುತ್ತಾ ಪರಂಪರೆಯನ್ನು ಸೃಷ್ಟಿಸುತ್ತದೆ.

❖ *ಸುಬ್ರಾಯ ಚೊಕ್ಕಾಡಿ*

ಆಗಿನ ಕಾಲದಲ್ಲೇ ಕ್ಷಿಪಣಿ ತಂತ್ರಜ್ಞಾನವನ್ನು ಯದ್ಧರಂಗದಲ್ಲಿ ಬಳಸಿದ ಟಿಪ್ಪು ಸುಲ್ತಾನ್ ಆಳ್ವಿಕೆ ನಡೆಸಿದ ಶ್ರೀರಂಗಪಟ್ಟಣ ಹಲವು ಐತಿಹಾಸಿಕ, ಧಾರ್ಮಿಕ ಹಾಗೂ ಪ್ರಾಕೃತಿಕ ತಾಣಗಳಿಗೆ ಹೆಸರುವಾಸಿಯಾಗಿದೆ.

ಜಿಲ್ಲೆಯ ವ್ಯಾಪ್ತಿಯಲ್ಲಿ 7 ತಾಲೂಕು, 31 ಹೋಬಳಿಗಳು, 1,479 ಗ್ರಾಮಗಳು, 7 ವಿಧಾನಸಭಾ ಕ್ಷೇತ್ರಗಳು, ಒಂದು ಲೋಕಸಭೆ ಕ್ಷೇತ್ರ, 234 ಗ್ರಾಮ ಪಂಚಾಯಿತಿಗಳು, 41 ಜಿಲ್ಲಾ ಪಂಚಾಯಿತಿ, 155 ತಾಲೂಕು ಪಂಚಾಯಿತಿಗಳು ಸೇರಿವೆ.

ಮಂಡ್ಯ ತಾಲೂಕು

ಮಂಡ್ಯ ತಾಲೂಕಿನ ಭೌಗೋಲಿಕ ವಿಸ್ತೀರ್ಣ 699.06 ಚ.ಕಿ.ಮೀ ಹೊಂದಿದೆ. 183 ಗ್ರಾಮಗಳು, 5 ಹೋಬಳಿಗಳು, 45 ಗ್ರಾಮ ಪಂಚಾಯಿತಿಗಳು, 28 ತಾಲೂಕು ಪಂಚಾಯಿತಿಗಳನ್ನೊಳಗೊಂಡಿದೆ. ಜಿಲ್ಲಾ ಕೇಂದ್ರವಾದರೂ ದೊಡ್ಡ ಹಳ್ಳಿಯಂತೆ ಗೋಚರಿಸುತ್ತದೆ. ನಿತ್ಯ ಸಚಿವ ಕೆ.ವಿ.ಶಂಕರಗೌಡರು ಸ್ಥಾಪಿಸಿದ್ದ ಜನತಾ ಶಿಕ್ಷಣ ಟ್ರಸ್ಟ್ ಒಂದು ಹೆಮ್ಮರವಾಗಿ ಬೆಳೆದಿದೆ. ಇಂಜಿನಿಯರಿಂಗ್, ಎಂಬಿಎ ಸೇರಿದಂತೆ ಮೊದಲಾದ ಉನ್ನತ ಶಿಕ್ಷಣಕ್ಕಾಗಿ ಬೇರೆ ಜಿಲ್ಲೆಗಳಿಗೆ ಹೋಗುವಂತಿಲ್ಲ. ಮಂಡ್ಯ ವೈದ್ಯಕೀಯ ವಿಜ್ಞಾನ ಸಂಸ್ಥೆ ವೈದ್ಯಕೀಯ ಶಿಕ್ಷಣಕ್ಕೆ ಹೆಸರುವಾಸಿಯಾಗಿದೆ. ಸರ್ಕಾರಿ ಮಹಾವಿದ್ಯಾಲಯ ಮತ್ತು ಮಹಿಳಾ ಮಹಾವಿದ್ಯಾಲಯವಿದೆ. ತೂಬಿನಕೆರೆಯಲ್ಲಿ ಮೈಸೂರು ವಿವಿಯ ಸ್ನಾತಕೋತ್ತರ ಕೇಂದ್ರವಿದೆ. ಬಿ. ಹೊಸೂರಿನಲ್ಲಿ ಕೇಂದ್ರೀಯ ವಿದ್ಯಾಲಯವಿದೆ.

ಭತ್ತ, ಕಬ್ಬು, ರಾಗಿ, ರೇಷ್ಮೆ ಇಲ್ಲಿನ ಬೆಳೆಗಳಾಗಿವೆ. ಹಸು, ಕೋಳಿ, ಕುರಿ ಸಾಕಾಣಿಕೆ ಪ್ರಮುಖವಾಗಿದೆ. ಬಸರಾಳಿನ ಹೊಯ್ಸಳರ ಕಾಲದ ಮಲ್ಲಿಕಾರ್ಜುನ ದೇವಾಲಯ, ಹೊಸಬೂದನೂರಿನಲ್ಲಿ ಅನಂತಪದ್ಮನಾಭ, ಕಾಶಿ ವಿಶ್ವನಾಥ ದೇವಾಲಯಗಳಿವೆ. ಸಾತನೂರಿನ ಕಂಬದ ನರಸಿಂಹಸ್ವಾಮಿ ದೇವಾಲಯ, ಮಂಡ್ಯ ನಗರದ ಕಾಳಿಕಾಂಭ, ಅರಕೇಶ್ವರ, ಚಾಮುಂಡೇಶ್ವರಿ, ಗಣಪತಿ, ರಾಘವೇಂದ್ರ, ಪೇಟೆಬೀದಿಯ ಲಕ್ಷ್ಮೀಜನಾರ್ಧನಸ್ವಾಮಿ, ಕೆರಗೋಡಿನ ಪಂಚಲಿಂಗೇಶ್ವರ ಸೇರಿದಂತೆ ಹಲವು ದೇವಾಲಯಗಳಿವೆ.

ಸಾಹಿತ್ಯ ಕ್ಷೇತ್ರಕ್ಕೆ ಕೆ.ವಿ.ಶಂಕರಗೌಡ, ಕಾದಂಬರಿಕಾರ್ತಿ ತ್ರಿವೇಣಿ, ಸಂಚಿಹೊನ್ನಮ್ಮ, ಆರ್ಯಾಂಭ ಪಟ್ಟಾಭಿ, ಶಿವಳ್ಳಿ ಕೆಂಪೇಗೌಡ, ಜಯಪ್ರಕಾಶ್‌ಗೌಡ, ಜಿ.ಟಿ.ವೀರಪ್ಪ, ಪ್ರೊ.ಎಚ್. ಎಸ್.ಮುದ್ದೇಗೌಡ, ಪ್ರೀತಿ ಶ್ರೀಮಂದರ ಕುಮಾರ್, ಡಾ.ಜಿ.ಎ.ಸುಬ್ಬಲಕ್ಷ್ಮೀ ಮತ್ತಿತರರು ಸಾಹಿತ್ಯ ಕ್ಷೇತ್ರದಲ್ಲಿ ಸಾಧನೆ ಮಾಡಿದ್ದಾರೆ. ಸಿನಿಮಾ ರಂಗದಲ್ಲೂ ಕೆ.ವಿ.ಶಂಕರಗೌಡ, ಮಗ ಕೆ.ಎಸ್. ಸಚ್ಚಿದಾನಂದ, ನಟ ಮಂಡ್ಯ ರಮೇಶ್, ರವಿಶಂಕರ್, ರತ್ನಜ, ಎ.ಪಿ.ಅರ್ಜುನ್, ಮಧುಚಂದ್ರ, ಮಂಜು ಮಾಂಡವ್ಯ ತಮ್ಮದೇ ಆದ ಛಾಪು ಮೂಡಿಸಿದ್ದಾರೆ.

ಮದ್ದೂರು ತಾಲೂಕು

ಸ್ವಾತಂತ್ರ್ಯ ಹೋರಾಟಕ್ಕೆ ಕಿಚ್ಚು ಹಚ್ಚಿದ ನೆಲವಾದ ಮದ್ದೂರು ತಾಲೂಕು ಹಲವು ವಿಶೇಷತೆಗಳಿಗೆ ಹೆಸರುವಾಸಿಯಾಗಿದೆ. ಏಷ್ಯಾದಲ್ಲಿಯೇ ಅತಿ ದೊಡ್ಡ ಎಳನೀರು ಮಾರುಕಟ್ಟೆ ಹಾಗೂ ಅಂತಾರಾಷ್ಟ್ರೀಯ ಮಟ್ಟದಲ್ಲಿಯೇ ಮದ್ದೂರು ವಡೆ ಖ್ಯಾತಿ ಪಡೆದಿರುವ ಅಪರೂಪದ ತಾಲೂಕು.

ದ್ವಾಪರ ಯುಗದಲ್ಲಿ ಅರ್ಜುನ ಇಲ್ಲಿ ತಪಸ್ಸು ಮಾಡಿದ್ದರಿಂದ ಅರ್ಜುನಪುರಿ ಎಂಬ ಐತಿಹಾಸಿಕ ಹೆಸರನ್ನು ಹೊಂದಿದೆ. ಮದ್ದೂರಿಗೆ ಮರಂದೂರು, ಮದ್ದು ಊರು ಎಂಬ ಹೆಸರುಗಳಿದ್ದವು. ಟಿಪ್ಪು ಸುಲ್ತಾನ್ ಆಡಳಿತದಲ್ಲಿ ಮದ್ದಿನ ಮನೆ ಕೂಡ ಆಗಿತ್ತು. ಆತಗೂರು ಗ್ರಾಮದ ಅಪರೂಪದ ನಾಯಿಶಾಸನ, ಅರೆತಿಪ್ಪೂರು ಗ್ರಾಮದ ಜೈನಶಾಸನ ಮತ್ತು ಕೋಳಿರಾಯನಗುಡ್ಡದ ವಿಜಯನಗರ ಅರಸರ ಕಾಲದ ಖಜಾನೆ ಇಲ್ಲಿರುವ ಇತಿಹಾಸ ಕುರುಹುಗಳಾಗಿವೆ. ತಾಲೂಕು 612.73 ಚದರ ಕಿ.ಮೀ ವಿಸ್ತೀರ್ಣ ಹೊಂದಿದೆ. 160 ಗ್ರಾಮಗಳು, 4 ಹೋಬಳಿಗಳು, 42 ಗ್ರಾಪಂ, 27 ತಾಪಂ ಹೊಂದಿದೆ. ಕಬ್ಬು, ಭತ್ತ, ರೇಷ್ಮೆ, ರಾಗಿ ಪ್ರಮುಖ ಬೆಳೆಗಳಾಗಿದ್ದು, ಕೃಷಿ, ಹೈನುಗಾರಿಕೆ, ಕೈಗಾರಿಕೆಯನ್ನು ಅವಲಂಬಿಸಿದೆ. ಉಗ್ರ ನರಸಿಂಹಸ್ವಾಮಿ, ಕಂಚಿ ವರದರಾಜಸ್ವಾಮಿ, ಪಟ್ಟಾಭಿರಾಮ, ಮದ್ದೂರಮ್ಮ, ಹೊಳೆ ಆಂಜನೇಯಸ್ವಾಮಿ, ರೇಣುಕಾ ಎಲ್ಲಮ್ಮದೇವಿ, ವೈದ್ಯನಾಥೇಶ್ವರ, ಅಬಲವಾಡಿ ತೋಪಿನ ತಿಮ್ಮಪ್ಪ, ಚಿಕ್ಕರಸಿನಕೆರೆ ಕಾಲಭೈರವೇಶ್ವರ, ಹನುಮಂತನಗರ ಆತ್ಮಲಿಂಗೇಶ್ವರ ಸೇರಿದಂತೆ ಇನ್ನಷ್ಟು ದೇವಾಲಯಗಳಿವೆ. ಕಲೆ, ಸಾಹಿತ್ಯ, ಶಿಕ್ಷಣ, ಕೈಗಾರಿಕೆ, ರಾಜಕೀಯಕ್ಕೂ ಹೆಸರುವಾಸಿಯಾಗಿದೆ.

ತಾಲೂಕಿನ ಕವಿ ಎಸ್.ಜಿ.ನರಸಿಂಹಾಚಾರ್, ಎಂ.ಎಲ್.ಶ್ರೀಕಂಠೇಶಗೌಡ, ಜಿ.ನಾರಾಯಣ, ವೀರಕೇಸರಿ ಸೀತಾರಾಮಶಾಸ್ತ್ರಿ, ಜಿ.ವೆಂಕಟಯ್ಯ, ಎಚ್.ಕೆ.ವೀರಣ್ಣಗೌಡ, ಎಂ.ರಾಮಮೂರ್ತಿ, ಡಾ.ರಾಮೇಗೌಡ, ಡಾ.ಬೆಸಗರಹಳ್ಳಿ ರಾಮಣ್ಣ, ಎಂ. ರಾಮಕೃಷ್ಣ, ಚಂದ್ರಶೇಖರ್ ಆಲೂರು ಸಾಹಿತ್ಯ ಕ್ಷೇತ್ರಕ್ಕೆ ಕೊಡುಗೆ ನೀಡಿದ್ದಾರೆ. ನಟರಾದ ಅಂಬರೀಷ್, ಪ್ರೇಮ್, ನೀನಾಸಂ ಸತೀಶ್, ಅಮೂಲ್ಯ, ಪಂಜು ಸಿನಿಮಾ ಕ್ಷೇತ್ರಕ್ಕೆ ತನ್ನದೇ ಆದ ಕೊಡುಗೆ ನೀಡಿದ್ದಾರೆ. ಶಿಕ್ಷಣ, ರಾಜಕೀಯದಲ್ಲೂ ಮುಂದಿದೆ.



ಶ್ರೀರಂಗಪಟ್ಟಣ

ಕೋಟೆ ಕೊತ್ತಲ ನಾಡು ಎಂದೇ ಖ್ಯಾತಿ ಗಳಿಸಿರುವ ಶ್ರೀರಂಗಪಟ್ಟಣ ತಾಲೂಕು ಪ್ರವಾಸೋದ್ಯಮಕ್ಕೆ ಹೆಸರು ವಾಸಿಯಾಗಿದೆ. ಮೈಸೂರು ಮಹಾರಾಜರು ಹಾಗೂ ಟಿಪ್ಪು ಸುಲ್ತಾನ್ ಆಳ್ವಿಕೆ ನಡೆಸಿದ ಶ್ರೀರಂಗಪಟ್ಟಣವೂ ಅನೇಕ ಐತಿಹಾಸಿಕ ಸ್ಥಳಗಳಿವೆ ಸಾಕ್ಷಿಯಾಗಿದೆ. ಕೃಷ್ಣರಾಜಸಾಗರ ಜಲಾಶಯ, ಬೃಂದಾವನ, ರಂಗನತಿಟ್ಟು ಪಕ್ಷಿಧಾಮ, ಟಿಪ್ಪು ಸುಲ್ತಾನ್, ಸಮಾ, ಬೇಸಿಗೆ ಅರಮನೆ, ಗುಂಬಸ್, ಜಾಮಿಯಾ ಮಸೀದಿ, ಕೋಟೆ, ಶಸ್ತ್ರಾಗಾರ, ರಂಗನಾಥಸ್ವಾಮಿ ದೇಗುಲ, ನಿಮಿಷಾಂಭ, ಕರಿಘಟ್ಟ, ಬಲಮುರಿ, ಸಂಗಮ, ಕಾವೇರಿ ಬೋರೇದೇವರ ದೇವಾಲಯ, ಬ್ರಿಟಿಸರ ಕಾಲದ ವೆಲ್ಲೆಸ್ಲಿ ಸೇತುವೆ ಸೇರಿದಂತೆ ಮತ್ತಿತರ ಪ್ರವಾಸಿತಾಣಗಳಿವೆ. 342.19 ಚ.ಕಿ.ಮೀ ವಿಸ್ತೀರ್ಣ ಹೊಂದಿದೆ. 96 ಗ್ರಾಮಗಳು, 21 ಗ್ರಾಮ ಪಂಚಾಯಿತಿ, 4 ಹೋಬಳಿಗಳು, 15 ತಾಲೂಕು ಪಂಚಾಯಿತಿಗಳಿವೆ. ಶೇ.70ರಷ್ಟು ನೀರಾವರಿ ಭೂಮಿ ಹೊಂದಿದೆ. ವಿಶ್ವೇಶ್ವರಯ್ಯ, ವಿರಿಜಾ, ಚಿಕ್ಕದೇವರಾಜಸಾಗರ, ದೇವರಾಯ, ಬಂಗಾರದೊಡ್ಡಿ ಸೇರಿದಂತೆ ಪ್ರಮುಖ ನಾಲೆಗಳು ಕೃಷಿ ಭೂಮಿಗೆ ನೀರೊದಗಿಸುತ್ತವೆ. ಕಬ್ಬು, ಭತ್ತ, ತೆಂಗು ಪ್ರಮುಖ ಬೆಳೆಗಳಾದರೆ, ಕೃಷಿ, ಹೈನುಗಾರಿಕೆ, ಮೀನುಗಾರಿಕೆ ಆರ್ಥಿಕ ಅವಲಂಬನೆಗಳಾಗಿವೆ. ಕಲೆ, ಸಾಹಿತ್ಯಕ್ಕೂ ಹೆಸರುವಾಸಿಯಾಗಿದೆ. ತಾಲೂಕಿನಲ್ಲಿ ಒಟ್ಟು 10446 ಎಕರೆ ಅರಣ್ಯ ಪ್ರದೇಶ ಹೊಂದಿದೆ.

ಮಳವಳ್ಳಿ ತಾಲೂಕು

ಕಾವೇರಿ ನದಿಯ ವೈಭವ, ಗಗನಚುಕ್ಕಿ ಜಲಪಾತ, ಶಿವನಸಮುದ್ರ, ಬಸವನಬೆಟ್ಟ, ಅರಣ್ಯ ಪ್ರದೇಶ, ಬಂಡೂರು ಕುರಿ, ಸೇರಿದಂತೆ ವಿವಿಧ ವಿಶೇಷತೆಗಳನ್ನು ಮಳವಳ್ಳಿ ತಾಲೂಕು ಒಳಗೊಂಡಿದೆ. ಆದರೆ ಇಲ್ಲಿನ ಜನ ಕೃಷಿಗಾಗಿ ಹೆಚ್ಚು ಮಳೆಯನ್ನೇ ಆಶ್ರಯವಾಗಿದೆ. 808.11 ಚ.ಕಿ.ಮೀ ವಿಸ್ತೀರ್ಣ ಹೊಂದಿದ್ದು, 12 ಸಾವಿರ ಹೆಕ್ಟೇರ್ ಪ್ರದೇಶ ಹೊಂದಿದೆ. 186 ಗ್ರಾಮಗಳು, 4 ಹೋಬಳಿಗಳು, 39 ಗ್ರಾಪಂ, 25 ತಾಪಂ ಒಳಗೊಂಡಿದೆ. ಭತ್ತ, ಕಬ್ಬು, ರೇಷ್ಮೆ, ರಾಗಿ ಬೆಳೆಯುತ್ತಾರೆ. ಇಲ್ಲಿ ರೈತರು ಕೃಷಿ, ಹೈನುಗಾರಿಕೆ ಹಾಗೂ ಮೀನುಗಾರಿಕೆ ಅವಲಂಬಿಸಿದ್ದಾರೆ. ಏಷ್ಯಾ ಖಂಡದ ಮೊದಲ

ಕನ್ನಡಿಗನು ಜನ್ಮಸಿದ್ಧವಾದ ವಿಶ್ವಮಾನವತೆಯನ್ನು ಕಾಯ್ದುಕೊಳ್ಳಬೇಕಾದರೆ ಬರೀ ಲಲಿತ ಸಾಹಿತ್ಯ ಸಾಕಾಗದು. ವಿಧ ವಿಧ ಜ್ಞಾನ ತುಂಬಿದ ಕಣಜಗಳು ಅವನ ವಶವಾಗಬೇಕು.

❖ *ವಿ.ಕೃ. ಗೋಕಾಕ್*

ಉಪ್ಸಾರು, ಮುದ್ದೆ, ಬೋಟಿ ಗೊಜ್ಜು, ನಾಟಿಕೋಳಿ ಫೇಮಸ್



ಜಿಲ್ಲೆಯ ಊಟದ ಶೈಲಿ ವಿಶೇಷತೆಯಿಂದ ಕೂಡಿದೆ. ಉಪ್ಸಾರು, ರಾಗಿ ಮುದ್ದೆ ಸಾಂಪ್ರದಾಯಿಕ ಊಟವಾಗಿದೆ. ಇಲ್ಲಿ ಅದು ಆಹಾರ ಸಂಸ್ಕೃತಿಯೂ ಆಗಿದೆ. ಇದರ ಜೊತೆಗೆ ಮಂಡ್ಯ ಎಂದರೆ ಬಾಡೂಟಕ್ಕೂ ಫೇಮಸ್ ಆಗಿದ್ದು, ಬೀಗರ ಔತಣ ಕೂಟ, ನಾಮಕರಣ, ದೇವರ ಹರಿಸೇವೆ, ಊರ ಹಬ್ಬ, ಗ್ರಾಮ ದೇವತೆಗಳ ಹಬ್ಬ ಸೇರಿದಂತೆ ಬಹುತೇಕ ಸಂದರ್ಭಗಳಲ್ಲಿ ಬೋಟಿ ಗೊಜ್ಜು, ಮುದ್ದೆ, ನಾಟಿ ಆಡು, ನಾಟಿ ಕೋಳಿ ಮಾಂಸಕ್ಕೆ ಹೆಚ್ಚು ಒತ್ತು ನೀಡಲಾಗುತ್ತದೆ. ಬಾಡೇ ನಮ್ ಗಾಡು ಎಂಬಂತೆ ಬಾಡೂಟವೇ ಹೆಚ್ಚು ಪ್ರಾಧಾನ್ಯತೆ ಹೊಂದಿದೆ. ಇತ್ತೀಚೆಗೆ ಸಮ್ಮೇಳನದಲ್ಲಿ ಬಾಡೂಟ ಹಾಕಿಸಬೇಕು ಎಂಬ ಕೂಗು ಎದ್ದಿತ್ತು. ಇದರ ಜೊತೆಗೆ ಮಳವಳ್ಳಿ ತಾಲೂಕಿನ ಹಲಗೂರಿನ ಚಿಬ್ಲು ಇಡ್ಲಿ ಕೂಡ ಪ್ರಸಿದ್ಧಿ ಹೊಂದಿದೆ. ಚಿಬ್ಲು ಇಡ್ಲಿ ತಿನ್ನಲು ವಿವಿಧೆಡೆಗಳಿಂದ ಜನರು ಬರುತ್ತಾರೆ. ಮದ್ದೂರಿನ ವಡೆ ಕೂಡ ಅಂತರಾಷ್ಟ್ರೀಯ ಮಟ್ಟದಲ್ಲಿ ಹೆಸರು ಪಡೆದಿರುವುದು ವಿಶೇಷ.

ಜಲವಿದ್ಯುತ್ ಉತ್ಪಾದನಾ ಕೇಂದ್ರ ಶಿವನಸಮುದ್ರ ವಿಶ್ವ ಖ್ಯಾತಿ ಪಡೆದಿದೆ. ಅದರಂತೆ ಗಗನಚುಕ್ಕಿ ಜಲಪಾತ ಪ್ರಸಿದ್ಧ ತಾಣ. ಕಾವೇರಿ ನದಿ ನೀರು ಎತ್ತರದಿಂದ ಧುಮ್ಮಿಕ್ಕುವ ಮನಮೋಹಕ. ಇದರ ಜೊತೆಗೆ ಮುತ್ತತ್ತಿ ಹೊಂದಿದೆ. ಬಂಡೂರು ಕುರಿಯ ತಳಿ ಮಾಂಸಕ್ಕೆ ರಾಜ್ಯದ ಎಲ್ಲ ಭಾಗಗಳಲ್ಲಿಯೂ ಬೇಡಿಕೆ ಇದೆ. ಕಲೆ, ಸಾಹಿತ್ಯಕ್ಕೂ ಹೆಸರುವಾಸಿಯಾಗಿದ್ದು, ಶಿಕ್ಷಣ ಕ್ಷೇತ್ರದಲ್ಲೂ ಮುಂದಿರುವ ತಾಲೂಕು ರಾಜಕೀಯವಾಗಿ ಮೀಸಲು ಕ್ಷೇತ್ರ ಹೊಂದಿದೆ. ಸಾಹಿತ್ಯ ಕ್ಷೇತ್ರದಲ್ಲಿ ಹಳಗನ್ನಡ ಕವಿ ಷಡಕ್ಷರದೇವ, ರಾಜಶೇಖರ ವಿಲಾಸ, ವೃಷಭೇಂದ್ರ ವಿಜಯ, ಶಬರಶಂಕರ ವಿಲಾಸ, ಮಳವಳ್ಳಿ ಮಹಾದೇವಸ್ವಾಮಿ ತಮ್ಮ ಛಾಪು ಮೂಡಿಸಿದ್ದರೆ, ಮಳವಳ್ಳಿ ಸಾಯಿಕೃಷ್ಣ, ನಿರ್ದೇಶಕ ನಾಗಶೇಖರ್, ಮಳವಳ್ಳಿ ಸುಂದರಮ್ಮ, ಶನಿಮಹದೇವಪ್ಪ ಸಿನಿಮಾ ಕ್ಷೇತ್ರಕ್ಕೆ ಕೊಡುಗೆ ನೀಡಿದ್ದಾರೆ.

ಪಾಂಡವಪುರ

ಪಾಂಡವರ ನೆಲಬೀಡು ಎಂದೇ ಖ್ಯಾತವಾಗಿರುವ ಹಾಗೂ ಮೇಲುಕೋಟೆಯ ಚೆಲುವನಾರಾಯಣಸ್ವಾಮಿ, ಯೋಗಾನರಸಿಂಹ ಸ್ವಾಮಿ, ಕುಂತಿಬೆಟ್ಟ, ಬೇಬಿಬೆಟ್ಟ, ಕೆರೆತೊಣ್ಣೂರು ಮೊದಲಾದ ಪ್ರವಾಸಿ ತಾಣಗಳಿಗೆ ಪಾಂಡವಪುರ ತಾಲೂಕು ಹೆಸರುವಾಸಿಯಾಗಿದೆ. 535.09 ಚ.ಕಿ.ಮೀ ವಿಸ್ತೀರ್ಣ ಹೊಂದಿದ್ದು, 171 ಗ್ರಾಮಗಳು, 3 ಹೋಬಳಿ, 24 ಗ್ರಾಪಂ, 16 ತಾಪಂಗಳನ್ನೊಳಗೊಂಡಿದೆ. ಭತ್ತ, ಕಬ್ಬು ಪ್ರಮುಖ ಬೆಳಗಳಾಗಿದ್ದು, ಕೃಷಿ, ಹೈನುಗಾರಿಕೆಯನ್ನು ಅವಲಂಬಿಸಿದ್ದಾರೆ. ಪಾಂಡವಪುರವನ್ನು ಹಿಂದೆ ಹಿರೋಡೆ ಎಂದು ಕರೆಯಲಾಗುತ್ತಿತ್ತು. ಫ್ರೆಂಚರ ಸೇನಾ ತುಕಡಿಯೊಂದು ಇಲ್ಲಿದ್ದರಿಂದ ಫ್ರೆಂಚ್‌ರಾಕ್ಸ್ ಹಾಗೂ ದಂಡು ಎಂತಲೂ ಕರೆಯುತ್ತಿದ್ದರೂ 1948ರಲ್ಲಿ ಪಾಂಡವಪುರ ತಾಲೂಕು ಎಂದು ನಾಮಕರಣ ಮಾಡಲಾಯಿತು. ಇತಿಹಾಸ ಪ್ರಸಿದ್ಧ ನಂಬಿನಾರಾಯಣ, ಕೈಲಾಸೇಶ್ವರ, ಗೋಪಾಲಕೃಷ್ಣ ದೇವಾಲಯಗಳಿದ್ದು, ಗಾಝಿ ದರ್ಗಾವು ಇದೆ. ಮೇಲುಕೋಟೆಯ ಕಲ್ಯಾಣಿ ಕೊಳದ ಉತ್ತ ಕಲಾತ್ಮಕವಾದ ಮಂಟಪಗಳು, ಕೈಸಾಲೆಗಳು ಇವೆ. ಭುವನೇಶ್ವರಿ ಮಂಟಪ ಇವೆ. 1854ರಲ್ಲಿ ಶ್ರೀ ವೇದಾಂತ ಬೋನಿ ಸಂಸ್ಕೃತ ಪಾಠಶಾಲೆ ಪ್ರಾರಂಭಗೊಂಡಿದ್ದು, ದಕ್ಷಿಣ ಭಾರತದ ಮೊದಲ ಸಂಸ್ಕೃತ ಪಾಠಶಾಲೆಯಾಗಿದೆ. ಕುಂತಿಬೆಟ್ಟದಲ್ಲಿ ಪಾಂಡವಪುರ ವಾಸವಾಗಿದ್ದರು ಎಂಬ ಕಾರಣಕ್ಕೆ ಕುಂತಿಬೆಟ್ಟ ಎಂಬ ಹೆಸರು ಬಂದರೆ, ಬೇಬಿಬೆಟ್ಟವು ಧಾರ್ಮಿಕ ಕೇಂದ್ರವಾಗಿದ್ದು, ಭಾರಿ ದನಗಳ ಜಾತ್ರೆಗೆ ವಿಶೇಷವಾಗಿದೆ. ಸಾಹಿತ್ಯ ಮತ್ತು ಕಲೆಯಲ್ಲಿ ಪುತಿನ ಎಂಬ ಕಾವ್ಯನಾಮದಿಂದ ಬರೆದ ಪುರೋಹಿತ ತಿರುನಾರಾಯಣ ನರಸಿಂಹಚಾರ್, ಪಿ.ಅಬ್ದುಲ್ ಸತ್ತಾರ್, ನ.ಭದ್ರಯ್ಯ, ಎಚ್.ಕೆ.ಯೋಗಾನರಸಿಂಹ, ಕ್ಯಾತನಹಳ್ಳಿ ರಾಮಣ್ಣ, ಸದಾಶಿವ ಎಣ್ಣೆಹೊಳೆ, ಡಾ.ನರಹಳ್ಳಿ ಬಾಲಸುಬ್ರಹ್ಮಣ್ಯ, ಡಾ.ಜಯಲಕ್ಷ್ಮೀಸೀತಾಪುರ, ನ.ಪ್ರಭಾಕರ್, ಡಾ.ಬೋರೇಗೌಡ ಚಿಕ್ಕಮರಳಿ ಸಾಹಿತ್ಯ ಲೋಕಕ್ಕೆ ಕೊಡುಗೆ ನೀಡಿದ್ದಾರೆ. ಖಾದ್ರಿ ಶಾಮಣ್ಣ, ಖಾದ್ರಿ ಎಸ್.ಅಚ್ಯುತನ್ ಹಾಗೂ ಕಾಡೇನಹಳ್ಳಿ ವೀರಣ್ಣಗೌಡ ಪತ್ರಿಕೋದ್ಯಮಕ್ಕೆ ಸೇವೆ ಸಲ್ಲಿಸಿದ್ದಾರೆ. ರಂಗಭೂಮಿಗೆ ಯೋಗಣ್ಣ, ಚಲನಚಿತ್ರ ಸಾಹಿತಿ ಎಚ್.ಕೆ.ಯೋಗಾನರಸಿಂಹಸ್ವಾಮಿ, ನಿರ್ದೇಶಕ ಮಂಜು ಸ್ವರಾಜ್ ಸಿನಿಮಾ ಕ್ಷೇತ್ರದಲ್ಲಿ ಗುರುತಿಸಿಕೊಂಡಿದ್ದಾರೆ. ತಾಲೂಕು ರಾಜಕೀಯ ರಂಗಕ್ಕೂ ಹೆಸರುವಾಸಿಯಾಗಿದೆ.

ಕೆ.ಆರ್.ಪೇಟೆ

ಐತಿಹಾಸಿಕ ಕ್ಷೇತ್ರಗಳಿಗೆ ಹಾಗೂ ಶಾಸನಗಳಿಗೆ ಹೆಸರು ವಾಸಿಯಾಗಿರುವ ಕೆ.ಆರ್.ಪೇಟೆ ತಾಲೂಕು ಧಾರ್ಮಿಕ ಹಾಗೂ ಪ್ರವಾಸಿತಾಣಗಳಿಗೂ ಹೆಚ್ಚು ಪ್ರಸಿದ್ಧಿ ಹೊಂದಿದೆ. ಹೊಯ್ಸಳರ ಶಿಲ್ಪಕಲಾ ವೈಭವ, ತ್ರಿವೇಣಿ ಸಂಗಮ, ಇತಿಹಾಸ ಹೊಂದಿರುವ ದೇವಾಲಯಗಳು ಹಾಗೂ ಖ್ಯಾತ ಸಾಹಿತಿಗಳಿಂದಲೂ ಗುರುತಿಸಿಕೊಂಡಿದೆ. 904.42 ಚ.ಕಿ.ಮೀ. ವಿಸ್ತೀರ್ಣ ಹೊಂದಿದೆ. 316 ಗ್ರಾಮಗಳು, 6 ಹೋಬಳಿಗಳು, 34 ಗ್ರಾಮ ಪಂಚಾಯಿತಿಗಳು, 23 ತಾಲೂಕು ಪಂಚಾಯಿತಿಗಳನ್ನೊಳಗೊಂಡಿದೆ. ತೆಂಗು, ಬಾಳೆ, ಭತ್ತ, ರಾಗಿ, ಕಬ್ಬು, ತರಕಾರಿ, ರೇಷ್ಮೆ, ಸೇವಂತಿ ಹೂ, ಪ್ರಮುಖ ಬೆಳೆಗಳಾಗಿವೆ. ಇಲ್ಲಿನ ಜನರು ಕೃಷಿ, ಹೈನುಗಾರಿಕೆ ಅವಲಂಬನೆಯ ಜೊತೆಗೆ ಮುಂಬೈ ನಂಟು ಹೆಚ್ಚಿದೆ. ಇಲ್ಲಿನ ಬಹುತೇಕ ಮಂದಿ ವಲಸೆ ಹೋಗಿ ಮುಂಬೈನಲ್ಲಿ ಬದುಕು ಕಟ್ಟಿಕೊಂಡಿದ್ದಾರೆ. ತಾಲೂಕಿನಲ್ಲಿ ಹೇಮಾವತಿ, ಲಕ್ಷ್ಮಣತೀರ್ಥ, ಕಾವೇರಿ ನದಿಗಳು ಹರಿಯುತ್ತವೆ. ಮೈಸೂರು ಮಲ್ಲಿಗೆ ಖ್ಯಾತಿಯ ಪ್ರೇಮಕವಿ ಕೆ.ಎಸ್.ನರಸಿಂಹಸ್ವಾಮಿ, ಕಿಕ್ಕೇರಿಯ ನಂಜುಂಡಾರಾಧ್ಯ, ಗವಿಮಠದ ಸ್ವತಂತ್ರ ಸಿದ್ದಲಿಂಗೇಶ್ವರ, ವೈಚಾರಿಕ ಲೇಖಕ ಎ.ಎನ್. ಮೂರ್ತಿರಾವ್, ಹಾಸ್ಯ ಸಾಹಿತಿ ಅ.ರಾ.ಮಿತ್ರ, ಅ.ನ. ಸುಬ್ಬರಾಯರು, ಮಂದಗೆರೆಯ ವಿದ್ವಾಂಸ ಮ.ಸು. ಕೃಷ್ಣಮೂರ್ತಿ, ಜಾನಪದ ಸಂಗ್ರಹಕ ಬಂಡಿಹೊಳೆ ರಂಗಸ್ವಾಮಿ ಭಟ್ಟ, ಹೊಸಹೊಳಲಿನ ಡಾ.ಸೃಜನಾ, ಗದ್ದೆಹೊಸೂರಿನ ಹರಿಹರಪ್ರಿಯ, ಭಾಷಾ ತಜ್ಞ ಡಾ. ಕಿಕ್ಕೇರಿ ನಾರಾಯಣ್, ಭಾಷಾ ವಿಜ್ಞಾನಿ ಡಾ. ಸೋಮಶೇಖರಗೌಡ, ಮಹಾಕಾವ್ಯಗಳ ಕರ್ತೃ ಡಾ. ಲತಾರಾಜಶೇಖರ್ ಅವರು ಸಾಹಿತ್ಯ ಲೋಕ ಅಭಿವೃದ್ಧಿಗೊಳಿಸಿದ್ದಾರೆ. ಅದರಂತೆ ನಿರ್ದೇಶಕ ಕೆ. ಎಸ್.ಎಲ್.ಸ್ವಾಮಿ, ಹಿರಿಯ ನಟ ಅನಂತವೇಲು, ಜಿ.ಅರವಿಂದ್, ಕೆ.ಆರ್.ಪೇಟೆ ಶಿವರಾಜ್, ರಾಯಸಮುದ್ರ ಪದ್ಮನಾಭ್ ಸಿನಿಮಾ ಕ್ಷೇತ್ರದಲ್ಲಿ ಗುರುತಿಸಿಕೊಂಡಿದ್ದರೆ, ಸುಗಮ ಸಂಗೀತ ಕ್ಷೇತ್ರದಲ್ಲಿ ಕಿಕ್ಕೇರಿ ಕೃಷ್ಣಮೂರ್ತಿ ತಮ್ಮ ಛಾಪು ಮೂಡಿಸಿದ್ದಾರೆ. ಅದರಂತೆ ಶಿಕ್ಷಣ, ರಾಜಕೀಯದಲ್ಲೂ ಕೆ.ಆರ್.ಪೇಟೆ ತಾಲೂಕು ಗುರುತಿಸಿಕೊಂಡಿದೆ.

ನಾಗಮಂಗಲ

ಚುಂಚನಗಿರಿ ಪೌರಾಣಿಕ ಮತ್ತು ಐತಿಹ್ಯಗಳಿಂದಲೇ ನಾಗಮಂಗಲ ತಾಲೂಕು ಗುರುತಿಸಿಕೊಂಡಿದೆ. ಮೊದಲು ಮಣಿಪುರ, ನಾಗಪುರ ಎಂಬ ಹೆಸರುಗಳು ಇದ್ದವು. ನಂತರ ನಾಗಮಂಗಲವಾಗಿ ಬದಲಾಗಿದೆ. ಜಿಲ್ಲೆಯ ಅತಿದೊಡ್ಡ ತಾಲೂಕು ಕೇಂದ್ರವಾಗಿದೆ. ವೀರವೈಷ್ಣವಿ, ಲೋಕಪಾವನಿ ಹಾಗೂ ಶಿಂಷಾನದಿಗಳು ಹರಿಯುತ್ತವೆ. ಆದರೂ, ಕೃಷಿಗೆ ಮಳೆಯನ್ನೇ ಆಶ್ರಯಿಸಬೇಕಾಗಿದೆ. 1044.70 ಚ.ಕಿ.ಮೀ ವಿಸ್ತೀರ್ಣ ಹೊಂದಿದ್ದು, 367 ಗ್ರಾಮಗಳು, 5 ಹೋಬಳಿಗಳು, 27 ಗ್ರಾಪಂಗಳು, 18 ತಾಪಂಗಳಿವೆ. ತೆಂಗು, ರಾಗಿ, ಜೋಳ, ಹುರುಳಿ, ತರಕಾರಿ, ಬಾಳೆ ಪ್ರಮುಖ ಬೆಳೆಗಳಾಗಿವೆ. ಕೃಷಿ, ಹೈನುಗಾರಿಕೆ, ಹಸು, ಕುರಿ, ಕೋಳಿ, ಹಂದಿ ಸಾಕಣೆ ದೊಡ್ಡಪ್ರಮಾಣದಲ್ಲಿದೆ. ◆

ಶಾಸ್ತ್ರೀಯ ಭಾಷೆ ಎಂಬ ಅಬದ್ಧವಾದ ಶಬ್ದವು ಕನ್ನಡದ ಸಿಂಹಾಸನದ ಮೇಲೆ ಕುಳಿತುಬಿಟ್ಟಿವೆ. ಅದನ್ನು ಕೆಳಗಿಳಿಸಿ ಅಭಿಜಾತ ಭಾಷೆ ಅಥವಾ ಸಮೃದ್ಧ ಪ್ರಾಚೀನ ಭಾಷೆ ಎಂಬ ಶಬ್ದವನ್ನು ಉಪಯೋಗಿಸಬೇಕು.

❖ *ಪ್ರೊ.ಜಿ.ವೆಂಕಟಸುಬ್ಬಯ್ಯ*


87ನೇ ಅಖಿಲ ಭಾರತ ಕನ್ನಡ ಸಾಹಿತ್ಯ
ಸಮ್ಮೇಳನಕ್ಕೆ ಹಾರ್ದಿಕ ಶುಭಾಶಯಗಳು
ಹುಲಿಕೆರೆ ಗ್ರಾಮ ಪಂಚಾಯಿತಿ
ಕಾರ್ಯಾಲಯ, ಹುಲಿಕೆರೆ
ಶ್ರೀರಂಗಪಟ್ಟಣ ತಾಲ್ಲೂಕು, ಮಂಡ್ಯ ಜಿಲ್ಲೆ
ಶ್ರೀಮತಿ ಶ್ವೇತಾ
ಅಧ್ಯಕ್ಷರು
ಹುಲಿಕೆರೆ ಗ್ರಾಮ ಪಂಚಾಯಿತಿ
ಶ್ರೀ ಕರೀಗೌಡ
ಉಪಾಧ್ಯಕ್ಷರು
ಹುಲಿಕೆರೆ ಗ್ರಾಮ ಪಂಚಾಯಿತಿ
ಶೋಭಾರಾಣಿ
ಗ್ರಾಮ ಪಂಚಾಯಿತಿ
ಅಧಿಕಾರಿ
ಶುಭ ಕೋರುವವರು
ರಾಮಕೃಷ್ಣ
ರಾಮ
ವೈರಮುಡಿ
ಶೋಭ
ಮಂಗಳಗೌರಿ
ನರಸಿಂಹಸ್ವಾಮಿ
ಗಣೇಶ್
ಗಿರಿಜಾ
ಗೋವಿಂದ
ಮಹಾಲಕ್ಷ್ಮಿ
ಮಂಜುಳಾ
ಮಂಜುನಾಥ
ರೇಣುಕಾ
ಸುಶೀಲಾ
ಜೈಮೇರಿ
ಜಯಮ್ಮ
ಬಂಗಾರಪ್ಪ
ಹರೀಶ
ಶುಭಾಶಯ ಕೋರುವವರು:
ಗ್ರಾಮ ಪಂಚಾಯಿತಿ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಸರ್ವ ಸದಸ್ಯರುಗಳು ಹಾಗೂ ಸಿಬ್ಬಂದಿ ವರ್ಗದವರು


ಮಂಡ್ಯದಲ್ಲಿ
ನಡೆಯುವ 87ನೇ ಅಖಿಲ
ಭಾರತ ಕನ್ನಡ ಸಾಹಿತ್ಯ
ಸಮ್ಮೇಳನಕ್ಕೆ ಆಗಮಿಸುವ
ಕನ್ನಡ ಪ್ರೇಮಿಗಳಿಗೆ, ಎಲ್ಲಾ
ರೈತರ ಬಾಂಧವರಿಗೆ
ತುಂಬು ಹೃದಯದ
ಸುಸ್ವಾಗತ.....
87ನೇ ಅಖಿಲ ಭಾರತ ಕನ್ನಡ ಸಾಹಿತ್ಯ
ಸಮ್ಮೇಳನಕ್ಕೆ ಸುಸ್ವಾಗತ...
ಶುಭ ಕೋರುವವರು:
ಶ್ರೀಮತಿ ಬಿ. ಸುವರ್ಣಾದೇವಿ
ನಿವೃತ್ತ ಕ್ಷೇತ್ರ ಶಿಕ್ಷಣ ಅಧಿಕಾರಿಗಳು
ಹಾಗೂ ಟಿ.ಎಸ್. ಸುಬ್ಬಣ್ಣ ಸ್ಕೂಲ್ ಟ್ರಸ್ಟಿ
ಎನ್. ಸರಸ್ವತಿ (ಪಶ್ಚಿಮವಾಹಿನಿ)
ಅಧ್ಯಕ್ಷರು, ಕನ್ನಡ ಸಾಹಿತ್ಯ ಪರಿಷತ್,
ನಗರ ಘಟಕ, ಶ್ರೀರಂಗಪಟ್ಟಣ
ಆಶಾಲತಾ ಪುಟ್ಟೇಗೌಡರು
ಅಧ್ಯಕ್ಷರು, ಶ್ರೀ ರಂಗನಾಯಕಿ ಸ್ತ್ರೀ ಸಮಾಜ
ಶ್ರೀರಂಗಪಟ್ಟಣ
ಸಾವಿತ್ರಿದೇವಿ ಬಿ. (ಪಾಲಹಳ್ಳಿ)
ಅಧ್ಯಕ್ಷರು, ಮಹಿಳಾ ಕಾಂಗ್ರೆಸ್
ಶ್ರೀರಂಗಪಟ್ಟಣ ತಾಲ್ಲೂಕು



❖ ಎ.ಎಸ್.ಪ್ರಭಾಕರ್

ದಕ್ಷಿಣ ಭಾರತಕ್ಕೆ ಪ್ರಪ್ರಥಮವಾಗಿ ವಿದ್ಯುತ್ ಹರಿಸಿದ ಕೀರ್ತಿ ಶಿವನಸಮುದ್ರಕ್ಕೆ ಸಲ್ಲುತ್ತದೆ. ಮೈಸೂರು ಸಂಸ್ಥಾನದ ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ದೂರ ದೃಷ್ಟಿ ದಿವಾನರಾಗಿದ್ದ ಸರ್ ಕೆ.ಶೇಷಾದ್ರಿ ಅಯ್ಯರ್ ಅವರ ಶ್ರಮ, ಆಸಕ್ತಿಯ ಫಲವಾಗಿ 1902ರಲ್ಲಿ ಪ್ರಾರಂಭವಾದ ಈ ಜಲ ವಿದ್ಯುತ್ ಯೋಜನೆ, ಪ್ರಾರಂಭದಲ್ಲಿ 5,600 ಕಿಲೋ ವ್ಯಾಟ್ ವಿದ್ಯುತ್ ಉತ್ಪಾದಿಸಲಾಗುತ್ತಿತ್ತು. ಆಗಿನ ಕಾಲದಲ್ಲಿ ಲಂಡನ್‌ನಿಂದ ತರಿಸಿರುವ ಯಂತ್ರೋಪಕರಣಗಳು, ವಿದ್ಯುತ್ ಪರಿವರ್ತಕಗಳು ಇಂದಿಗೂ ಸುಸ್ಥಿತಿಯಲ್ಲಿದ್ದು, ಅವುಗಳನ್ನೇ ಬಳಕೆ ಮಾಡುತ್ತಿರುವುದು ವಿಶೇಷ.

ದಕ್ಷಿಣ ಭಾರತಕ್ಕೆ ಪ್ರಥಮವಾಗಿ ವಿದ್ಯುತ್ ನೀಡಿದ ಹೆಗ್ಗಳಿಕೆ

ಹಲವು ಹೊಸತನಗಳಿಗೆ ಸಾಕ್ಷಿಯಾದ ಕೇಂದ್ರ



ವಿದ್ಯುತ್ ಕಾಂತಿ ಸೃಷ್ಟಿಗೆ ಶಿವನಸಮುದ್ರ ಕ್ರಾಂತಿ

ಏಷ್ಯಾ ಖಂಡದಲ್ಲಿಯೇ ಮೊದಲ ಬಾರಿಗೆ ಜಲ ವಿದ್ಯುತ್ ಉತ್ಪಾದನೆ ಆದ ಸ್ಥಳ ಶಿವನ ಸಮುದ್ರ. ಇಡೀ ದಕ್ಷಿಣ ಭಾರತಕ್ಕೆ ಪ್ರಥಮವಾಗಿ ವಿದ್ಯುತ್ ನೀಡಿದ ಹೆಗ್ಗಳಿಕೆ. ಅದು ಮಂಡ್ಯ ಜಿಲ್ಲೆಯ ನಮ್ಮ ಮಳವಳ್ಳಿ ತಾಲೂಕಿನ ಇರುವುದೇ ಹೆಮ್ಮೆಯ ವಿಷಯ.

ಇಂದಿಗೂ ವಿದ್ಯುತ್ ಉತ್ಪಾದನೆಯ ಮಾತು ಪ್ರಾರಂಭವಾದರೆ ಅದರಲ್ಲಿ ಶಿವನ ಸಮುದ್ರ/ಬ್ಲಫ್ ಹೆಸರು ಮುನ್ನೆಲೆಗೆ ಬರುತ್ತದೆ ಹಾಗೂ ಪ್ರತಿಯೊಬ್ಬರಿಂದಲೂ ಸ್ಮರಣೆಗೆ ಒಳಗಾಗುತ್ತದೆ. ಮೈಸೂರು ಸಂಸ್ಥಾನದ ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ದೂರ ದೃಷ್ಟಿಯಿಂದ, ದಿವಾನರಾಗಿದ್ದ ಸರ್ ಕೆ.ಶೇಷಾದ್ರಿ ಅಯ್ಯರ್ ಅವರ ಶ್ರಮ, ಆಸಕ್ತಿಯ ಫಲವಾಗಿ ಪ್ರಾರಂಭವಾದ ಶಿವನ ಸಮುದ್ರ ಜಲವಿದ್ಯುತ್ ಕೇಂದ್ರ ಹಲವಾರು ಹೊಸತನಗಳಿಗೆ ತೆರೆದುಕೊಳ್ಳುವುದರ ಮೂಲಕ ಇತಿಹಾಸ ಪುಟಗಳಲ್ಲಿ ಅಚ್ಚಳಿಯದೇ ಉಳಿದಿದೆ.

ಶಿವನಸಮುದ್ರ ವಿದ್ಯುತ್ ಯೋಜನೆ, ಸರ್ ಕೆ. ಶೇಷಾದ್ರಿ ಅಯ್ಯರ್ ಜಲ ವಿದ್ಯುತ್ ಉತ್ಪಾದನಾ ಕೇಂದ್ರ, ಶಿವ ವಿದ್ಯುದಾಗರ, ಕಾವೇರಿ ಪರ್ವ ಸ್ಕೀಮ್ ಸೇರಿದಂತೆ ಹಲವಾರು ಹೆಸರುಗಳಿಂದ ಕರೆಯಲ್ಪಡುವ ಜಲ ವಿದ್ಯುತ್ ಯೋಜನೆ ಜಾರಿಗೊಳ್ಳುವುದರಲ್ಲಿ ಸರ್ ಕೆ. ಶೇಷಾದ್ರಿ ಅಯ್ಯರ್ ಅವರ ಪಾತ್ರ ಅಪಾರ.

ಬೃಹತ್ ಗಾತ್ರದ ಯಂತ್ರೋಪಕರಣಗಳನ್ನು ಇಲ್ಲಿ ತಂದು ಜೋಡಿಸಿದ್ದೇ ಒಂದು ಕೌತುಕ. ಯಂತ್ರಗಳ ಬಗ್ಗೆ ತಿಳಿವಳಿಕೆ ಇಲ್ಲದ ಕಾಲದಲ್ಲಿ ಬೃಹತ್ ಗಾತ್ರದ ಯಂತ್ರೋಪಕರಣಗಳು ಬಂದಿದ್ದೇ ಒಂದು ಸೋಜಿಗದ ಸಂಗತಿ. ಅಲ್ಲದೇ, ಅವುಗಳನ್ನು ಜೋಡಿಸಿ ತಂತ್ರಜ್ಞಾನ ಬಳಸಿ ಜಲದಿಂದ ವಿದ್ಯುತ್ ಉತ್ಪಾದನೆ ಮಾಡಿದ ವಿಷಯ ಕಾಡ್ಗಿಚ್ಚಿನಂತೆ ಹಬ್ಬಿತ್ತು.

ಅಂದು ಯಂತ್ರಗಳನ್ನು ತರಲು ನಿರ್ಮಿಸಿದ ಕಾಂಕ್ರಿಟ್ ರಸ್ತೆ ಚೆನ್ನಾಗಿರುವುದರೊಂದಿಗೆ ಇಂದಿಗೂ ಬಳಕೆ ಮಾಡಲು ಯೋಗ್ಯವಾದ ರೀತಿಯಲ್ಲೇ ಇರುವುದು ಪ್ರಾರಂಭಿಕ/ ಹಳೆಯ ಕಾಮಗಾರಿಗಳ ಗುಣಮಟ್ಟದ ಪ್ರತೀಕವಾಗಿಯೂ ನಿಲ್ಲುತ್ತದೆ.

ಯೋಜನೆ ಪ್ರಾರಂಭವಾಗಿದ್ದು ಹೇಗೆ?

1902ರಲ್ಲಿ ಯೋಜನೆ ಪ್ರಾರಂಭದಲ್ಲಿ 5,600 ಕಿಲೋ ವ್ಯಾಟ್ ವಿದ್ಯುತ್ ಉತ್ಪಾದಿಸಲಾಗುತ್ತಿತ್ತು. ನಂತರದ ದಿನಗಳಲ್ಲಿ 42 ಸಾವಿರ ಕಿಲೋ ವ್ಯಾಟ್ ಸಾಮರ್ಥ್ಯದ ವಿದ್ಯುತ್ ಉತ್ಪಾದನೆವರೆಗೆ ಹಂತ ಹಂತವಾಗಿ ಬೆಳೆದಿದೆ. 1902ರಲ್ಲಿ ಲಂಡನ್‌ನಿಂದ ತರಿಸಿರುವ ಯಂತ್ರೋಪಕರಣ, ವಿದ್ಯುತ್ ಪರಿವರ್ತಕಗಳು ಇಂದಿಗೂ ನೋಡಲು

ರಾಜ್ಯದ ಸೂತ್ರಗಳು ಸರಿಯಾದ ಮಾರ್ಗದಲ್ಲಿ ಮುನ್ನಡೆಯದಿದ್ದರೆ ಸಾಹಿತಿಗಳು, ಸಾಹಿತ್ಯ ಪರಿಷತ್ತಿನಂತಹ ಸಾಂಸ್ಕೃತಿಕ ಸಂಸ್ಥೆಗಳು ಅವುಗಳನ್ನು ಸರಿಯಾದ ಹಾದಿಗೆ ತರಲು ಯತ್ನಿಸಬೇಕು.

❖ *ಜಯದೇವಿ ತಾಯಿ ಲಿಗಾಡೆ, ಸಾಹಿತಿ*


87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ
ಆಗಮಿಸುವ ಸರ್ವರಿಗೂ ಹಾರ್ದಿಕ ಶುಭಾಶಯಗಳು
ಗಂಜಾಂ ಹಾಲು ಉತ್ಪಾದಕರ ಸಹಕಾರ ಸಂಘ, ನಿಯಮಿತ
ಗಂಜಾಂ, ಶ್ರೀರಂಗಪಟ್ಟಣ ತಾಲ್ಲೂಕು, ಮಂಡ್ಯ ಜಿಲ್ಲೆ.
ಶುಭ ಕೋರುವವರು
ಶ್ರೀ ರಾಮಕೃಷ್ಣ
ಅಧ್ಯಕ್ಷರು
ಶ್ರೀ ರಾಜೀವಾ
ಉಪಾಧ್ಯಕ್ಷರು
ರಮ್ಯ ಎನ್.ಎಸ್.
ಕಾರ್ಯದರ್ಶಿ
ಮನೋಹರ ಎಂ.
ಲೆಕ್ಕ ಪರಿಶೋಧಕರು
ಗಂಜಾಂ ಹಾಲು ಉತ್ಪಾದಕರ ಸಹಕಾರ ಸಂಘ
ಶುಭ ಕೋರುವವರು: ಅಧ್ಯಕ್ಷರು, ಉಪಾಧ್ಯಕ್ಷರು, ಕಾರ್ಯದರ್ಶಿ, ನಿರ್ದೇಶಕರು, ಹಾಗೂ ಸಿಬ್ಬಂದಿ ವರ್ಗದವರು.


87ನೇ ಅಖಿಲ ಭಾರತ ಸಾಹಿತ್ಯ ಸಮ್ಮೇಳನಕ್ಕೆ ಹಾರ್ದಿಕ ಶುಭಾಶಯಗಳು
ಮೇಳಾಪುರ ಗ್ರಾಮ ಪಂಚಾಯಿತಿ ಕಾರ್ಯಾಲಯ, ಮೇಳಾಪುರ
ಶ್ರೀರಂಗಪಟ್ಟಣ ತಾಲ್ಲೂಕು, ಮಂಡ್ಯ ಜಿಲ್ಲೆ
ರತ್ನಮ್ಮ
ಅಧ್ಯಕ್ಷರು
ಜೆ. ವೆಂಕಟೇಶ್
ಉಪಾಧ್ಯಕ್ಷರು
ತಿಲಕ್‌ಕುಮಾರ್
ಗ್ರಾ.ಪಂ. ಅಭಿವೃದ್ಧಿ ಅಧಿಕಾರಿ
ಸದಸ್ಯರುಗಳಾದ
ಶುಭ ಕೋರುವವರು: ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಸದಸ್ಯರುಗಳು ಮತ್ತು ಸಿಬ್ಬಂದಿಗಳು



ಕಾಣಸಿಗುತ್ತದೆ. ನಾಲ್ವಡಿ ಕೃಷ್ಣರಾಜ ಒಡೆಯರ ದೂರದೃಷ್ಟಿಯ ಕಾರಣಕ್ಕೆ 1902ರಲ್ಲಿ 18 ಲಕ್ಷ ರೂ. ವೆಚ್ಚದಲ್ಲಿ ಆರಂಭವಾದ ವಿದ್ಯುತ್ ಯೋಜನೆ 1938ರವರೆಗೆ 9 ಹಂತಗಳಲ್ಲಿ ವಿಸ್ತರಿಸಲಾಯಿತು. ಅವೇ ಇಂದಿಗೂ ಮುಂದುವರಿದುಕೊಂಡು ಹೋಗುತ್ತಿರುವುದು ಅಭಿವೃದ್ಧಿಯ ದ್ಯೋತಕ.

ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಬಗ್ಗೆ ಮೈಸೂರು ಪ್ರಾಂತ್ಯ, ನಾಡಿನಾದ್ಯಂತ ಇಂದಿಗೂ ಪ್ರಚಲಿತದಲ್ಲಿರುವ ನಾಲ್ವಡಿ ಭೂಪ ಮನೆ ಮನೆ ದೀಪ ಎಂಬ ನಾಣ್ಣುಡಿ ಅವರ ಜನಪರ ಕಾರ್ಯಗಳಿಗೆ ಜನರು ನೀಡಿರುವ ಬಿರುದಾಂಕಿತವಾಗಿದೆ.

ಯೋಜನೆಯ ಮೊದಲ ಹಂತದಲ್ಲಿ 1902ರ ಆ.6ರಂದು ಕೋಲಾರ ಗೋಲ್ಡ್ ಫೀಲ್ಡ್ (ಕೆ.ಜಿ.ಎಫ್.) ಗೆ ಎರಡು ಸಂಚರಣ ವಾಹಕಗಳ ಮೂಲಕ ಪ್ರಪ್ರಥಮವಾಗಿ ವಿದ್ಯುತ್ ಸರಬರಾಜು ಮಾಡಲಾಯಿತು. ಕೆ.ಜಿ.ಎಫ್.ನಲ್ಲಿನ ಚಿನ್ನದ ಗಣಿಗೆ ವಿದ್ಯುತ್ ಪೂರೈಕೆ ಮಾಡುವ ಸಲುವಾಗಿ ಪ್ರಾರಂಭವಾದ ಯೋಜನೆ ನಂತರದ ದಿನಗಳಲ್ಲಿ ಅಂದಿನ ಮೈಸೂರು ಸಂಸ್ಥಾನದ ವಿವಿಧ ಪಟ್ಟಣಗಳಿಗೆ ಪೂರೈಸುವ ಮೂಲಕ ರಾತ್ರಿಯಲ್ಲಿಯೂ ಬೆಳಕು ಪಸರಿಸಿತು. ಜನರಲ್ಲಿ ಮಂದಹಾಸ ಮೂಡಿಸಿತು. 2ನೇ ಹಂತದಲ್ಲಿ 1905ರ ಆ.5ರಂದು ಬೆಂಗಳೂರಿಗೆ, 3ನೇ ಹಂತದಲ್ಲಿ ಮೈಸೂರಿಗೆ ವಿದ್ಯುತ್ ಸರಬರಾಜು ಮಾಡಲಾಯಿತು.

ಅಂದಿನ ತಂತ್ರಜ್ಞಾನವೇ ಬಳಕೆ

ಬೆಟ್ಟಗುಡ್ಡಗಳ ಇಳಿಜಾರಿನಲ್ಲಿ, ಕಾವೇರಿ ನದಿ ತಟದಲ್ಲಿ ಜಲ ವಿದ್ಯುತ್ ಉತ್ಪಾದನೆ ಮಾಡುವ ಸರ್ ಕೆ.ಶೇಷಾದ್ರಿ ಅಯ್ಯರ್ ಪರ್ವ ಸ್ಟೇಷನ್‌ಗೆ ಹೋಗುವುದೇ ಒಂದು ಚೆಂದ. ವಿದ್ಯುತ್ ಉತ್ಪಾದನೆಗೆ ಕಾರ್ಮಿಕರು/ ಸಿಬ್ಬಂದಿಯನ್ನು (ವಿಶೇಷ/ಹಲವು ಸಂದರ್ಭದಲ್ಲಿ ಅಧಿಕಾರಿಗಳ ಅನುಮತಿಯೊಂದಿಗೆ ಸಾರ್ವಜನಿಕರನ್ನು) ಕರೆದುಕೊಂಡು ಹೋಗಲು, ಕರೆದುಕೊಂಡು ಬರಲು ಇರುವ ಟ್ರಾಲಿ ಅಂದಿನ ಕಾಲದ ಟ್ರಾಲಿ ತಂತ್ರಜ್ಞಾನವನ್ನು ಇಂದಿಗೂ ಉಳಿಸಿಕೊಂಡಿರುವುದು ಸೋಜಿಗವೆನಿಸುತ್ತದೆ. ಬೃಹತ್ ಗಾತ್ರದ ಯಂತ್ರೋಪಕರಣಗಳನ್ನು ಕೊಂಡೊಯ್ಯಲು ಅಂದಿನ ಕಾಲದಲ್ಲಿ ಅಳವಡಿಸಿರುವ ಟ್ರಾಕ್ ಇಂದಿಗೂ ಕಾರ್ಯನಿರ್ವಹಿಸುತ್ತಿದೆ. ಈ ಟ್ರಾಕ್ ಯಂತ್ರೋಪಕರಣ ಸಾಗಾಟದ ರಹಸ್ಯವನ್ನು ಬೇಧಿಸುತ್ತದೆ. ವಿದ್ಯುತ್ ಉತ್ಪಾದನಾ ಕೇಂದ್ರದಲ್ಲಿ ವಿದ್ಯುತ್ ಉತ್ಪಾದನೆ ನಂತರ ಹೊರಗೆ ಬಿಡುವ ನೀರು ಮೈ ಝುಮ್ ಎನಿಸುತ್ತದೆ. ಸುತ್ತಮುತ್ತ ಬೆಟ್ಟ, ಗುಡ್ಡಗಳ ಮಧ್ಯೆ ಕಾವೇರಿ ನದಿ ಹರಿಯುವುದನ್ನು ನೋಡುವುದೇ ಅತ್ಯದ್ಭುತ. ಟ್ರಾಲಿಯಲ್ಲಿ ಇಳಿಯುವ ಸಂದರ್ಭದಲ್ಲಿ, ಮೇಲೆ ಬರುವ ಸಂದರ್ಭದಲ್ಲಿ ಇಡೀ ಪರಿಸರದ ವಿಹಂಗಮ ನೋಟ ಕಣ್ಣಿಗೆ ರಸದೌತಣ ನೀಡುತ್ತದೆ.


ಸರ್ ಕೆ.ಶೇಷಾದ್ರಿ ಅಯ್ಯರ್ ಜಲ ವಿದ್ಯುತ್ ಉತ್ಪಾದನಾ ಕೇಂದ್ರದ ಬಳಿ ಇರುವ ಮ್ಯೂಸಿಯಂನಲ್ಲಿ ಯೋಜನೆ ಪ್ರಾರಂಭದಲ್ಲಿ ಬಳಸುತ್ತಿದ್ದ ಟರ್ಬೈನ್, ವಿದ್ಯುತ್ ಪರಿವರ್ತಕ, ಸ್ಟಾರ್ಟಿಂಗ್ ಕಂಪ್ರೆಷರ್ ಸೇರಿದಂತೆ ಹಲವಾರು ಯಂತ್ರೋಪಕರಣಗಳು ನೋಡಲು ಸಿಗುತ್ತದೆ.

ಅಲ್ಲದೇ, ಸಮೀಪದಲ್ಲೇ ಇರುವ ಗಗನಚುಕ್ಕಿ ಜಲಪಾತ, ಭರಚುಕ್ಕಿ ಜಲಪಾತ (ಕೊಳ್ಳೇಗಾಲ ತಾಲೂಕು, ಚಾಮರಾಜನಗರ ಜಿಲ್ಲೆ) ಚಿಕ್ಕ ಮುತ್ತತ್ತಿ ಧಾರ್ಮಿಕ ಕ್ಷೇತ್ರಗಳು ಪ್ರವಾಸಿಗರನ್ನು ಆಕರ್ಷಿಸುತ್ತಿದೆ. ಇಲ್ಲಿಗೆ ತೆರಳಲು ಸೂಕ್ತ ಸಾರಿಗೆ ವ್ಯವಸ್ಥೆ ಇಲ್ಲದ ಕಾರಣ ಖಾಸಗಿ ವಾಹನಗಳಲ್ಲೇ ತೆರಳುವುದು ಅನಿವಾರ್ಯ.◆




ಇದೇ ನಮ್ಮ ತಾಯಿನಾಡು ಇದೇ ನಮ್ಮ ತೊಟ್ಟಿಲು | ಅನ್ನ ನೀರು ಸಲಹಿದಂಥ ತಟ್ಟೆ ಬಟ್ಟಲು
ಆದಿ ಪಂಪ ಆಸೆಪಟ್ಟ ದುಂಬಿಯಾಗಿ ಹುಟ್ಟಲು | ನಂದನಕ್ಕೆ ಇಲ್ಲಿಂದ ಇರುವುದೊಂದೆ ಮೆಟ್ಟಿಲು

❖ *ಸು. ರಂ. ಎಕ್ಕುಂಡಿ*


87ನೇ ಅಖಿಲ ಭಾರತ
ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ
ಹಾರ್ದಿಕ ಸುಸ್ವಾಗತ....
ಶುಭ ಕೋರುವ
ದೇವರಿಗೆ ಕಾಣಿಕೆ ಸಲ್ಲಿಸಲು
A/c 54016275525
IFSC - SBIN0040037
SBI - SRP
ಶುಭ ಕೋರುವವರು:
ಕಾರ್ಯನಿರ್ವಾಹಕ ಅಧಿಕಾರಿಗಳು &
ವ್ಯವಸ್ಥಾಪನಾ ಸಮಿತಿ
ಶ್ರೀ ರಂಗನಾಥಸ್ವಾಮಿ ದೇವಸ್ಥಾನ,
ಶ್ರೀರಂಗಪಟ್ಟಣ, ಮಂಡ್ಯ ಜಿಲ್ಲೆ


87ನೇ ಅಖಿಲ ಭಾರತ ಕನ್ನಡ ಸಾಹಿತ್ಯ
ಸಮ್ಮೇಳನಕ್ಕೆ ಹಾರ್ದಿಕ ಶುಭಾಶಯಗಳು
ಬುದ್ಧಿಸ್ಟ್ ಒಕ್ಕೂಟ - ಪಾಂಡವಪುರ
ಮಂಡ್ಯ ಜಿಲ್ಲೆ
ಶುಭ ಕೋರುವವರು:
ಪ್ರಕಾಶ್ ಬ್ಯಾಡರಹಳ್ಳಿ
ಅಧ್ಯಕ್ಷರು,
ಬುದ್ಧಿಸ್ಟ್ ಒಕ್ಕೂಟ, ಪಾಂಡವಪುರ
Mob: 9731514506
ಟಿ.ಎಸ್. ಹಾಳಯ್ಯ
ಜಿಲ್ಲಾ ಉಪಾಧ್ಯಕ್ಷರು
ಬುದ್ಧಿಸ್ಟ್ ಒಕ್ಕೂಟ,
ಮಂಡ್ಯ ಜಿಲ್ಲೆ


87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ
ಆಗಮಿಸುವ ಸರ್ವರಿಗೂ ಹಾರ್ದಿಕ ಶುಭಾಶಯಗಳು
ಶುಭ ಕೋರುವವರು:
ಡಾ|| ವಿ. ಭಾನುಪ್ರಕಾಶ್ ಶರ್ಮಾ
ಅದ್ವೈತ ವಾಚಸ್ಪತಿ
ಅಧ್ಯಕ್ಷರು, ಶಾಶ್ವತಿ ಧಾರ್ಮಿಕ ಕ್ರಿಯಾ ಸಮಿತಿ
ಉಪಾಧ್ಯಕ್ಷರು, ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ
ಅಂಚೆ ತಿಪ್ಪಯ್ಯ ಬೀದಿ, ಶ್ರೀರಂಗಪಟ್ಟಣ, ಮಂಡ್ಯ ಜಿಲ್ಲೆ, ಕರ್ನಾಟಕ-571438
E-mail: drbhanuprakashsharma@gmail.com

ಭೀಕರ ಬರದಲ್ಲೂ ಬತ್ತದ ತೊಣ್ಣೂರು ಕೆರೆ

ಕೆರೆ ಮತ್ತು ಸುತ್ತಲಿನ ಸೌಂದರ್ಯಕ್ಕೆ ಮನಸೋಲುವ ಪ್ರವಾಸಿಗರು



❖ ಕುಮಾರಸ್ವಾಮಿ ಹರಳಹಳ್ಳಿ

ಯಾವುದೇ ಸಿಮೆಂಟ್ ಬಳಕೆ ಮಾಡದೆ ಬರೀ ಕಲ್ಲು ಮಣ್ಣನ್ನು ಬಳಕೆ ಮಾಡಿ ನಿರ್ಮಿಸಿರುವುದು ವಿಶೇಷ. ನಿರ್ಮಾಣವಾಗಿ ಇಷ್ಟು ವರ್ಷ ಕಳೆದರೂ ಒಮ್ಮೆಯೂ ಕೆರೆಗೆ ಹಾನಿಯುಂಟಾಗಿಲ್ಲ, ಸಾಗರದಂತೆ ಕಂಗೊಳಿಸುವ ಕೆರೆಯ ವಿಹಂಗಮನೋಟ ರಮಣೀಯ ವಾಗಿರುವುದನ್ನು ಕಾಣಬಹುದಾಗಿರುತ್ತದೆ.


ರೋಗರುಜಿನಗಳಿಗೆ ಪರಿಹಾರ ನೀಡುವ ತೊಣ್ಣೂರು ಕೆರೆ ನೀರು

ಪ್ರವಾಸಿಗರ ಪ್ರಸಿದ್ಧ ಪ್ರವಾಸಿ ತಾಣ ತೊಣ್ಣೂರು ಕೆರೆ ಈ ಹಿಂದೆ ತೊಂಡನೂರು ಎಂಬ ಹೆಸರಿನಿಂದ ಪ್ರಸಿದ್ಧಿಯಾಗಿದ್ದು, ಇಲ್ಲಿನ ಕೆರೆ ಮತ್ತು ಸುತ್ತಲಿನ ಸೌಂದರ್ಯಕ್ಕೆ ಮನಸೋತು ಇಂದಿಗೂ ಸಾವಿರಾರು ಜನ ಪ್ರವಾಸಿಗರು ದಿನನಿತ್ಯ ಆಗಮಿಸಿ ಅದರ ಸೌಂದರ್ಯವನ್ನು ಸವಿಯುತ್ತಿದ್ದಾರೆ.

ಪಾಂಡವಪುರ ಪಟ್ಟಣದಿಂದ ಸುಮಾರು 9 ಕಿ.ಮೀ. ದೂರದಲ್ಲಿರುವ ಈ ಪ್ರವಾಸಿತಾಣ ಕೆರೆತೊಣ್ಣೂರು, ತೊಂಡನೂರು, ಯಾದವಸಮುದ್ರ, ತಿರುಮಲಸಾಗರ, ಅಗ್ರಹಾರ ಎಂಬಿತ್ಯಾದಿ ಹೆಸರುಗಳಿಂದ ಕರೆಯಲ್ಪಟ್ಟರು, ಇಂದಿಗೂ ತೊಣ್ಣೂರು ಕೆರೆ ಎಂದೆ ಪ್ರಸಿದ್ಧಿಯಾಗಿದ್ದು, ತೊಣ್ಣೂರು ಎಂಬ ತನ್ನ ಒಡಲಿನಲ್ಲಿ ಅಗಣಿತ ಐತಿಹಾಸಿಕ ಹಾಗೂ ಪುರಾತನ ವಿಷಯಗಳನ್ನು ಬಚ್ಚಿಟ್ಟುಕೊಂಡಿದೆ. ಪಾಂಡವಪುರ ಪಟ್ಟಣದಿಂದ ಉತ್ತರಕ್ಕೆ ಪ್ರಯಾಣಿಸಿದರೆ ಹತ್ತರಿಂದ ಹದಿನೈದು ನಿಮಿಷದಲ್ಲಿ ಒಂಬತ್ತು ಕಿ.ಮೀ ತೆರಳಬಹುದು. ಆದರೆ, ಇಲ್ಲಿಗೆ ತೆರಳುತ್ತಿದ್ದಂತೆಯೇ ಮೊದಲು ಸಿಗುವುದು ನಂಬಿನಾರಾಯಣಸ್ವಾಮಿ ದೇವಾಲಯ. ಜತೆಗೆ ಅದರ ಎದುರು ಭಾಗದಲ್ಲಿಯೇ ವೇಣುಗೋಪಾಲಸ್ವಾಮಿ ದೇವಸ್ಥಾನವು ಸಹ ಇದೆ. ಜತೆಗೆ ಬೆಟ್ಟದ ಮೇಲೆ ಉತ್ತದ ತಿಮ್ಮಪ್ಪ ದೇಗುಲವು ಸಹ ಇದೆ. ಇದಕ್ಕೆ ಹೊಂದಿಕೊಂಡಂತೆ ಬೆಟ್ಟಗಳಿದ್ದು, ತೊಣ್ಣೂರುಕೆರೆಯು ಎರಡು ಬೆಟ್ಟಗಳ ನಡುವೆ ನಿರ್ಮಾಣ ಮಾಡಲಾಗಿದೆ.

ಕಲ್ಲು, ಮಣ್ಣಿನಿಂದಲೇ ಕೆರೆ ನಿರ್ಮಾಣ


ಕೆರೆ ನಿರ್ಮಾಣಕ್ಕೆ ಯಾವುದೇ ಸಿಮೆಂಟ್ ಬಳಕೆ ಮಾಡದೆ ಬರೀ ಕಲ್ಲು ಮಣ್ಣನ್ನು ಬಳಕೆ ಮಾಡಿ ನಿರ್ಮಿಸಿರುವುದು ವಿಶೇಷ. ನಿರ್ಮಾಣವಾಗಿ ಇಷ್ಟು ವರ್ಷ ಕಳೆದರೂ ಒಮ್ಮೆಯೂ ಕೆರೆಗೆ ಹಾನಿಯುಂಟಾಗಿಲ್ಲ, ಸಾಗರದಂತೆ ಕಂಗೊಳಿಸುವ ಕೆರೆಯ ವಿಹಂಗಮನೋಟ ರಮಣೀಯವಾಗಿರುವುದನ್ನು ಕಾಣಬಹುದಾಗಿರುತ್ತದೆ. ಜತೆಗೆ ಕೆರೆಯ ಹಿನ್ನೀರಿನಲ್ಲಿ ಮರಳಿನ ಪದರದ ಭಾಗವಿರುವುದರಿಂದ ಸಮುದ್ರದಲ್ಲಿ ಇಳಿಯುವ ಅನುಭವವಾಗುತ್ತದೆ. ಹಾಗಾಗಿ ಪ್ರವಾಸಿಗರು ಹೆಚ್ಚು ತಮ್ಮ ಮಕ್ಕಳ ಜತೆ



ಉಸುರಿನ ಪರಿಮಳವಿರಲು ಕುಸುಮದ ಹಂಗೇಕಯ್ಯಾ? ಕ್ಷಮೆ ದಮೆ ಶಾಂತಿ ಸೈರಣೆಯಿರಲು ಸಮಾಧಿಯ ಹಂಗೇಕಯ್ಯಾ,
ಲೋಕವೇ ತಾನಾದ ಬಳಿಕ ಏಕಾಂತ ಹಂಗೇಕಯ್ಯಾ ಚೆನ್ನಮಲ್ಲಿಕಾರ್ಜುನ.

❖ ಅಕ್ಕಮಹಾದೇವಿ


87ನೇ ಅಖಿಲ ಭಾರತ ಕನ್ನಡ ಸಾಹಿತ್ಯ
ಸಮ್ಮೇಳನಕ್ಕೆ ಹಾರ್ದಿಕ ಸುಸ್ವಾಗತ....
ಶುಭ ಕೋರುವವರು
ಪ್ರೊ. ಭಾಷ್ಯಾಂ ಸ್ವಾಮೀಜಿ
ಶ್ರೀನಿವಾಸನ್, ಆಡಳಿತಾಧಿಕಾರಿ
ಶ್ರೀ ಯೋಗಾನರಸಿಂಹಸ್ವಾಮಿ ದೇವಸ್ಥಾನ
ವಿಜಯನಗರ ಒಂದನೇ ಹಂತ, ಮೈಸೂರು.


87ನೇ ಅಖಿಲ ಭಾರತ
ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ
ಹಾರ್ದಿಕ ಸುಸ್ವಾಗತ....
ಸಕ್ಕರೆ ನಾಡು ಮಂಡ್ಯದಲ್ಲಿ ನಡೆಯುವ
87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ
ಆಗಮಿಸುವ ಕನ್ನಡ ಪ್ರೇಮಿಗಳಿಗೆ, ಎಲ್ಲಾ ರೈತರ
ಬಾಂಧವರಿಗೆ ತುಂಬು ಹೃದಯದ ಸುಸ್ವಾಗತ.....
ಶುಭ ಕೋರುವ
ಡಾ. ಕೆ. ರಘುರಾಮ್ ವಾಜಪೇಯಿ
ಹಿರಿಯ ಸಮಾಜ ಸೇವಕರು,
ಸಹಕಾರಿಗಳು ಹಾಗೂ ವಿಪ್ರ ಮುಖಂಡರು,
ನಾಗಮಂಗಲ


87ನೇ ಅಖಿಲ ಭಾರತ ಕನ್ನಡ ಸಾಹಿತ್ಯ
ಸಮ್ಮೇಳನಕ್ಕೆ ಹಾರ್ದಿಕ ಶುಭಾಶಯಗಳು
ಆಲಂಬಾಡಿ ಕಾವಲು ಗ್ರಾಮ ಪಂಚಾಯಿತಿ
ಕೆ.ಆರ್. ಪೇಟೆ ತಾಲ್ಲೂಕು, ಮಂಡ್ಯ ಜಿಲ್ಲೆ
ಶುಭ ಕೋರುವವರು
ಶ್ರೀ ವೆಂಕಟೇಶ್ ಜಿ.ಜೆ
ಅಧ್ಯಕ್ಷರು
ಆಲಂಬಾಡಿ ಕಾವಲು ಗ್ರಾಮ ಪಂಚಾಯಿತಿ
ಇಶ್ರತ್ ಉನ್ನಿಸಾ
ಉಪಾಧ್ಯಕ್ಷರು
ಆಲಂಬಾಡಿ ಕಾವಲು ಗ್ರಾಮ ಪಂಚಾಯಿತಿ
ಇಮ್ರಾನ್ ಷರೀಫ್
ಕಾರ್ಯದರ್ಶಿ
ಶಿವಕುಮಾರ್
ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ
ಶುಭಾಶಯ ಕೋರುವವರು:
ಗ್ರಾಮ ಪಂಚಾಯಿತಿ ಅಧ್ಯಕ್ಷರು,
ಉಪಾಧ್ಯಕ್ಷರು ಹಾಗೂ
ಸರ್ವ ಸದಸ್ಯರುಗಳು ಹಾಗೂ
ಸಿಬ್ಬಂದಿ ವರ್ಗದವರು







ಆಗಮಿಸಿ ಅಲ್ಲಿನ ಅನುಭವವನ್ನು ಸವಿಯುತ್ತಾರೆ. ಆದರೆ ಈ ಕೆರೆ ಯಾವುದೇ ಭೀಕರ ಬರಗಾಲ ಬಂದರೂ ಒಮ್ಮೆಯೂ ಬತ್ತಿಹೋಗಿರುವ ಉದಾಹರಣೆಗಳಿಲ್ಲ. ಜತೆಗೆ ಈವರೆಗೆ ಇದರ ಆಳವನ್ನು ಪತ್ತೆಹಚ್ಚಲು ಸಾಧ್ಯವಾಗಿಲ್ಲ ಎನ್ನುವುದು ಸತ್ಯದ ಸಂಗತಿ ಎನ್ನುತ್ತಾರೆ ಇಲ್ಲಿನ ಸ್ಥಳೀಯ ನಿವಾಸಿಗಳು.

ರೋಗರುಜಿನಗಳಿಗೆ ಪರಿಹಾರ ಕೆರೆ ನೀರು

ಈ ಕೆರೆ ಧಾರ್ಮಿಕ ಹಿನ್ನೆಲೆ ಹೊಂದಿರುವುದ ರಿಂದ ಇಲ್ಲಿನ ಸುತ್ತಮುತ್ತಲಿನ ಗ್ರಾಮಗಳಲ್ಲಿ ನಡೆಯುವ ಹಬ್ಬ ಹರಿದಿನ ಹಾಗೂ ದೇವರ ಉತ್ಸವಗಳ ಸಂದರ್ಭದಲ್ಲಿ ದೇವರ ಮೂರ್ತಿಗಳನ್ನು ತಂದು ಕೆರೆಯ ನೀರಿನಲ್ಲಿ ಸ್ವಚ್ಛಗೊಳಿಸಿ ಪೂಜೆ ಸಲ್ಲಿಸಿ ತೆಗೆದುಕೊಂಡು ಹೋಗುವುದು ಇಲ್ಲಿನ ಸಂಪ್ರದಾಯ. ಜತೆಗೆ ಇಲ್ಲಿ ಫಾಲ್ಸ್ ಮಾದರಿಯಲ್ಲಿ ಹರಿಯುವ ಮದಗ ಇರುವುದರಿಂದ ಪ್ರವಾಸಿಗಳು ಇಲ್ಲಿ ಸ್ನಾನ ಮಾಡಿ ಸಂಭ್ರಮಿಸುವುದರ ಜತೆಗೆ ಈ ನೀರಿನಲ್ಲಿ ಸ್ನಾನ ಮಾಡಿದರೆ ಯಾವುದೇ ರೋಗ ರುಜಿನಗಳು ಗುಣಮುಖವಾಗುತ್ತವೆ ಎಂಬುವುದು ಸ್ಥಳೀಯರ ನಂಬಿಕೆಯಾಗಿದೆ.

ತಮಿಳುನಾಡಿನಲ್ಲಿ ಚೋಳರ ಉಪಟಳದಿಂದ ಬೇಸತ್ತ ರಾಮಾನುಜಾಚಾರ್ಯರು ಅಂದಿನ ತಿರುಮಲಸಾಗರಕ್ಕೆ (ಇಂದಿನ ಕೆರೆತೊಣ್ಣೂರು)ಗೆ ಬಂದು ನೆಲೆಸುತ್ತಾರೆ. ಆ ವೇಳೆ ಇಲ್ಲಿ ಆಳ್ವಿಕೆ ನಡೆಸುತ್ತಿದ್ದ ಹೊಯ್ಸಳರ ದೊರೆ ಬಿಟ್ಟಿದೇವ ಅಥವಾ ವಿಷ್ಣುವರ್ಧನ ರಾಮಾನುಜಚಾರ್ಯರ ಪ್ರಭಾವಕ್ಕೆ ಒಳಗಾಗಿ ಜೈನ ಧರ್ಮವನ್ನು ತ್ಯಜಿಸಿ ವೈಷ್ಣವ ಧರ್ಮವನ್ನು ಸ್ವೀಕರಿಸುವ ಮೂಲಕ ರಾಮಾನುಜರ ಅನುಯಾಯಿಯಾಗುತ್ತಾನೆ. ಈತನ ಸಹಾಯದಿಂದ ಕೆರೆ, ವೇಣುಗೋಪಾಲಸ್ವಾಮಿ ಹಾಗೂ ನಂಬಿನಾರಾಯಣ ಸ್ವಾಮಿ ದೇವಾಲಯಗಳು ನಿರ್ಮಾಣವಾಗುತ್ತವೆ. ಜತೆಗೆ ಇಲ್ಲಿನ ಯೋಗನರಸಿಂಹಸ್ವಾಮಿ ದೇವಾಲಯವನ್ನು ಹಿರಣ್ಯಕಶ್ಯಪನ ಮಗ ಪ್ರಹ್ಲಾದ ಕಟ್ಟಿಸಿದನು ಎನ್ನುವುದು ಇತಿಹಾಸದ ಪುಟಗಳಲ್ಲಿ ನಮೂದಾಗಿದೆ.

ಶ್ರೀ ರಾಮಾನುಜಾಚಾರ್ಯರು ನಿರ್ಮಿಸಿರುವ ತೊಣ್ಣೂರುಕೆರೆಯಿಂದ ಸುತ್ತಮುತ್ತಲಿನ ಲಕ್ಷ್ಮೀಸಾಗರ, ಟಿ.ಎಸ್.ಛತ್ರ, ಬೇವಿನಕುಪ್ಪೆ, ಬನಘಟ್ಟ, ನೀಲನಹಳ್ಳಿ, ಇಂಗಲಗುಪ್ಪೆ ಸೇರಿದಂತೆ ಅನೇಕ ಗ್ರಾಮಗಳ ರೈತರ ನೂರಾರು ಎಕರೆ ಜಮೀನಿನ ಕೃಷಿ ಚಟುವಟಿಕೆಗೆ ನೀರುಣಿಸುತ್ತಿದೆ. ಇದರಿಂದ ರೈತರು ಸಧೃಡವಾಗಲು ಕೆರೆ ನೆರವಾಗಿದೆ. ಇತ್ತೀಚೆಗೆ ಕೆರೆಯ ಕೆಳಭಾಗದ ಚಿಕ್ಕ ಕೆರೆಯ ಬಳಿ ಶ್ರೀರಾಮಾನುಜಚಾರ್ಯರ ಬೃಹತ್ ಪ್ರತಿಮೆ ನಿರ್ಮಾಣ ಮಾಡಲಾಗಿದೆ. ಸುಪ್ರೀಂಕೋರ್ಟ್ ಮುಖ್ಯ ನ್ಯಾಯಾಮೂರ್ತಿಗಳಾಗಿದ್ದ ಇ.ಎಸ್. ವೆಂಕಟರಾಮಯ್ಯ ಅವರಿಗೆ ತೊಣ್ಣೂರು ಕೆರೆ ಬಹಳ ಅಚ್ಚುಮೆಚ್ಚಿನ ತಾಣವಾಗಿದ್ದ ಹಿನ್ನೆಲೆಯಲ್ಲಿ ಅವರು ವಿಧಿವಶರಾದ ನಂತರ ಕೆರೆಯ ಪಕ್ಕದಲ್ಲಿಯೇ ತಮ್ಮ ಸಮಾಧಿಯನ್ನು ಸಹ ನಿರ್ಮಾಣ ಮಾಡಲಾಗಿದೆ. ಈ ಸುಂದರವಾದ ಪ್ರಾಕೃತಿಕ ಸೌಂಧರ್ಯ ತಾಣವನ್ನು ವೀಕ್ಷಣೆ ಮಾಡಲು ರಾಜ್ಯದ ನಾನಾ ಭಾಗಗಳಿಂದ ನೂರಾರು ಸಂಖ್ಯೆಯಲ್ಲಿ ಪ್ರವಾಸಿಗರು, ಪ್ರೇಮಿಗಳು ಆಗಮಿಸುತ್ತಾರೆ. ◆

ಬ್ರಹ್ಮಪುತ್ರ, ಗಂಗಾನದಿಗಳಷ್ಟೆ ಶ್ರೇಷ್ಠವಲ್ಲ, ನಮ್ಮೂರಿನ ಹಳ್ಳ- ಕೊಳ್ಳಗಳೂ ಶ್ರೇಷ್ಠ. ಶ್ರೀಗಂಧ ಮಾತ್ರವಲ್ಲ, ನಮ್ಮೂರಿನ ಜಾಲಿ ಮರವೂ ಶ್ರೇಷ್ಠ. ಕೋಗಿಲೆ ಅಷ್ಟೇ ಅಲ್ಲ, ನಮ್ಮೂರಿನ ಕಾಗೆಯೂ ನನಗೆ ಶ್ರೇಷ್ಠವೇ ಆಗಿದೆ.

❖ *ಸಿದ್ದಲಿಂಗಯ್ಯ*



ಪ್ರಕೃತಿ ಮಡಿಲಿನಲ್ಲೊಂದು ಚಿಕ್ಕ ತಿರುಪತಿ

❖ ಗಂಜಾಂ ಮಂಜು,
ಶ್ರೀರಂಗಪಟ್ಟಣ

ಶ್ರೀರಂಗಪಟ್ಟಣದ ಶ್ರೀನಿವಾಸ ಅಗ್ರಹಾರ ಗ್ರಾಮದ ಬಳಿಯ ಕಾವೇರಿ-ಲೋಕಪಾವನಿ ನದಿಗಳ ಸಂಗಮ ಸ್ಥಳದಲ್ಲಿರುವ ಕರಿಘಟ್ಟ ವೆಂಕಟರಮಣ ಸ್ವಾಮಿ ದೇವಸ್ಥಾನ ಸಮುದ್ರ ಮಟ್ಟದಿಂದ 2,697 ಅಡಿಗಳ ಎತ್ತರದಲ್ಲಿದೆ.

ಬೆಟ್ಟದಲ್ಲಿ ಕಪ್ಪು ಕಲ್ಲುಗಳು ಹೆಚ್ಚಾಗಿರುವುದರಿಂದ ಇದಕ್ಕೆ 'ಕರಿಗಿರಿ' ಎಂತಲೂ, ಬೆಟ್ಟದ ತುದಿಯನ್ನು ಮೋಡಗಳು ಚುಂಬಿಸುವಂತೆ ಭಾಸವಾಗಿರುವುದರಿಂದ ನೀಲಾಚಲ ಎಂದೂ ಹೆಸರಿದೆ. ಬೆಟ್ಟದ ಮೇಲೆ ವೆಂಕಟರಮಣ ಸ್ವಾಮಿ ನೆಲೆಸಿರುವುದರಿಂದ (ಶ್ರೀನಿವಾಸಸ್ವಾಮಿ) ಚಿಕ್ಕ ತಿರುಪತಿ ಎಂದೇ ಖ್ಯಾತಿಯಲ್ಲಿದೆ. ದಕ್ಷಿಣ ಭಾರತದ ಸಾವಿರಾರು ಕುಟುಂಬಗಳಿಗೆ ಮನೆ ದೇವರು ಈ ವೆಂಕಟರಮಣ. ಕರಿಘಟ್ಟ ಪರಿಸರ ಪ್ರವಾಸಿ ತಾಣವಾಗಿಯೂ ಮಾರ್ಪಟ್ಟಿದೆ.

ಶ್ರೀನಿವಾಸನ ಗುಡ್ಡ, ಕಾವಲು ಗೋಪುರ ಗುಡ್ಡ ಹಾಗೂ ಚಿನ್ನಾಯಕನಹಳ್ಳಿ ಗುಡ್ಡ ಎಂಬ ಮೂರು ಗುಡ್ಡಗಳನ್ನು ಕರಿಘಟ್ಟ ಒಳಗೊಂಡಿದೆ. ಕಾವಲು ಗೋಪುರದ ಗುಡ್ಡ ಎತ್ತರ ಪ್ರದೇಶದಲ್ಲಿದೆ. ಅಲ್ಲಿ ನಿಂತು ನೋಡಿದರೆ ಮೈಸೂರು, ಶ್ರೀರಂಗಪಟ್ಟಣ, ಗಂಜಾಂ, ಪಾಂಡವಪುರ, ಕುಂತಿಬೆಟ್ಟ, ಮೇಲುಕೋಟೆ ಬೆಟ್ಟದ ಸರಹದ್ದುಗಳು ಕಾಣಿಸುತ್ತವೆ. ಹಸಿರು ಪ್ರದೇಶವನ್ನು ಸೀಳಿಕೊಂಡು ಹರಿಯುವ ಕಾವೇರಿಯ ಅಂಕು ಡೊಂಕಾದ ನಡಿಗೆ ನಯನ ಮನೋಹರ.



ಭೃಗು ಮಹರ್ಷಿಗಳಿಂದ ಮೂಲವಿಗ್ರಹ ಪ್ರತಿಷ್ಠಾಪನೆ!

ಭೃಗು ಮಹರ್ಷಿಗಳು ಶಿಷ್ಯರೊಂದಿಗೆ ದಕ್ಷಿಣ ಭಾರತದಲ್ಲಿ ಯಾತ್ರೆ ಕೈಗೊಂಡ ಸಂದರ್ಭದಲ್ಲಿ ಇಲ್ಲಿ ಕೆಲಕಾಲ ತಂಗಿದ್ದರೆಂಬ ಐತಿಹ್ಯವಿದೆ. ಅವರೇ, ಶ್ರೀನಿವಾಸನ ಮೂಲ ವಿಗ್ರಹ ಪ್ರತಿಷ್ಠಾಪಿಸಿದರು ಎನ್ನಲಾಗಿದೆ. ಪುರಾತತ್ವ ಇಲಾಖೆ ದಾಖಲೆಗಳ ಪ್ರಕಾರ ಈ ದೇವಸ್ಥಾನ ಚೋಳರ ಕಾಲದಲ್ಲಿ ನಿರ್ಮಾಣವಾಗಿದೆ. ಮೈಸೂರಿನ ಅರಸರು ಅದನ್ನು ಅಭಿವೃದ್ಧಿಪಡಿಸಿದರು. ದೇವಸ್ಥಾನ ತಲುಪಲು 450 ಮೆಟ್ಟಿಲುಗಳನ್ನು ಏರಬೇಕು. ಮೈಸೂರಿನ ಚಿಕ್ಕದೇವರಾಜ ಒಡೆಯರ್ ಅವರು ಈ ಮೆಟ್ಟಿಲುಗಳನ್ನು ಹಾಕಿಸಿದರು. ಮೆಟ್ಟಿಲು ಹತ್ತುವಾಗ ದಣಿವಾದರೆ ವಿಶ್ರಮಿಸಿಕೊಳ್ಳಲು ಇಕ್ಕೆಲಗಳಲ್ಲಿ ಅರವಟ್ಟಿಗೆಗಳಿವೆ. ದ್ರಾವಿಡ ಶೈಲಿಯ ಗರ್ಭಗುಡಿಯಲ್ಲಿ 'ಕೃಷ್ಣ ಶಿಲೆ'ಯಿಂದ ಕಡೆದ ಆಕರ್ಷಕ ಶ್ರೀನಿವಾಸನ ವಿಗ್ರಹವಿದೆ.

ಬಲಬದಿಯಲ್ಲಿ ಯೋಗಾ ವೆಂಕಟೇಶ ಹಾಗೂ ಎಡಬದಿಯಲ್ಲಿ ಭೋಗಾ ವೆಂಕಟೇಶನ ವಿಗ್ರಹಗಳಿವೆ. ದಕ್ಷಿಣಕ್ಕೆ ಪದ್ಮಾವತಿ ಅಮ್ಮನವರ ಗುಡಿ ಇದೆ. ಗರುಡ, ಆಂಜನೇಯ, ಸೀತಾರಾಮ, ಲಕ್ಷ್ಮಣರ ಆಕರ್ಷಕ ವಿಗ್ರಹಗಳು ಗಮನ ಸೆಳೆಯುತ್ತವೆ. ದೇವಸ್ಥಾನದ ಹೊರಗೆ ಹತ್ತಾರು ಕಲ್ಲಿನ ಮಂಟಪಗಳಿದ್ದು, ಉತ್ತರ ದಿಕ್ಕಿಗೆ ಬಾಗಿಲುರುವುದು ಈ ದೇಗುಲದ ವಿಶೇಷ.

ಕರಿಘಟ್ಟದ ಶ್ರೀನಿವಾಸ ದೇವಸ್ಥಾನದಲ್ಲಿ ಮಾಘ ಹುಣ್ಣಿಮೆಯ (ಫೆಬ್ರುವರಿ ತಿಂಗಳಲ್ಲಿ) ಎರಡನೇ ದಿನ (ಕೃಷ್ಣ ಪಕ್ಷದಲ್ಲಿ ದೊಡ್ಡ ಜಾತ್ರೆ ಹಾಗೂ ಬ್ರಹ್ಮ ರಥೋತ್ಸವ ನಡೆಯುತ್ತದೆ.) ಶ್ರಾವಣ ಮಾಸದಲ್ಲಿ ಪ್ರತಿ ಶನಿವಾರ ಪಂಚಾಮೃತ ಅಭಿಷೇಕ ಇತರೆ ವಿಶೇಷ ಪೂಜೆಗಳು ನಡೆಯುತ್ತವೆ. ಶ್ರಾವಣ ಶನಿವಾರ ಚಿಕ್ಕ ಜಾತ್ರೆ ನಡೆಯುತ್ತದೆ.

ಕರಿಘಟ್ಟ ವನ್ಯಧಾಮವೂ ಹೌದು

ರಾಜ್ಯ ಪ್ರಶಸ್ತಿ ಪುರಸ್ಕೃತ ಪರಿಸರ ಪ್ರೇಮಿ ರಮೇಶ್ ಅವರು ಸಹ ಶಾಲಾ ಕಾಲೇಜುಗಳ ಮಕ್ಕಳು ಹಾಗೂ ಪರಿಸರವಾದಿಗಳ ಜೊತೆಗೂಡಿ ಕರಿಘಟ್ಟ ಪ್ರಕೃತಿ ತಾಣದಲ್ಲಿ ಸಾವಿರಾರು ಗಿಡಗಳ ನೆಟ್ಟು ಪೋಷಣೆ ಮಾಡಿದ್ದಾರೆ. ಮೀಸಲು ಅರಣ್ಯ ಪ್ರದೇಶವಾದ ಕರಿಘಟ್ಟ ಒಂದು ವನ್ಯಧಾಮವೂ ಹೌದು. ಇಲ್ಲಿ ನಾನಾಬಗೆಯ ಪ್ರಾಣಿ, ಪಕ್ಷಿಗಳು ಕಾಣಸಿಗುತ್ತವೆ. ಸುಮಾರು 5-6 ವರ್ಷಗಳಿಂದ ಕರಿಘಟ್ಟದಲ್ಲಿ ನಾನಾ ಬಗೆಯ ಔಷಧಿ ಸಸ್ಯಗಳನ್ನು ನೆಟ್ಟು ನೀರುಣಿಸುತ್ತಾ ಬಂದಿದ್ದಾರೆ. ಆದರೆ, ದುರಂತ ಎಂದರೆ ಕರಿಘಟ್ಟಕ್ಕೆ ಬೆಂಕಿ ಹಚ್ಚಿದರೆ ಒಳ್ಳೆಯದಾಗುತ್ತದೆ ಎಂಬ ಮೂಢ ನಂಬಿಕೆ ಇದ್ದು ವರ್ಷಕ್ಕೊಂದು ಬಾರಿ ಈ ಬೆಟ್ಟಕ್ಕೆ ಕಿಡಿಗೇಡಿಗಳು ಬೆಂಕಿ ಹಚ್ಚುತ್ತಾರೆ. ಈ ಸ್ಥಳದಲ್ಲಿ ನವಿಲು, ಕಪೋತ, ಬುಲ್‌ಬುಲ್ ಸೇರಿದಂತೆ ಬಹಳ ವಿಶೇಷವಾದ ನೈಟ್‌ಜರ್ನಿ, ಬಗೆ ಬಗೆಯ ಗುಬ್ಬಚ್ಚಿಗಳಿಗೆ ಆಶ್ರಯವಾಗಿದೆ ಕರಿಘಟ್ಟ. ಅದರ ಜೊತೆಗೆ ಇದು ಒಂದು ವನ್ಯಧಾಮವೂ ಹೌದು... ಇಲ್ಲಿ ವಿಶೇಷವಾಗಿ ಅಳಿವಿನ ಅಂಚಿನಲ್ಲಿರುವ ಉಡಗಳು, ಓತಿಕ್ಯಾತಗಳು, ಬಗೆ ಬಗೆಯ ಹಾವುಗಳು, ಜಿಂಕೆ, ಚಿರತೆಗಳು ಕಾಣಿಸಿಕೊಳ್ಳುತ್ತಿರುತ್ತವೆ. ◆



ದಕ್ಷಿಣ ಭಾರತದ ಹಲವು ಕುಟುಂಬಕ್ಕೆ ಮನೆ ದೇವರಾಗಿರುವ ಕರಿಘಟ್ಟ ವೆಂಕಟರಮಣ

ನಮ್ಮ ಮುಂದಿನ ಸಮಸ್ಯೆ, ಸವಾಲುಗಳು ಸಂಖ್ಯಾತೀತವಾಗುತ್ತಿವೆ. ಮಾಡಬೇಕಾದ ಕೆಲಸಗಳು ಬೆಟ್ಟದಷ್ಟಿವೆ. ಮೌಢ್ಯಗಳನ್ನು ದಾಟಿ ನಮ್ಮ ಮನಸ್ಸುಗಳನ್ನು ಹಸನುಗೊಳಿಸಲು ಅಸಂಖ್ಯ ಕೈಗಳಿಂದ ಕಾರ್ಯೋನ್ಮುಖರಾಗಬೇಕಿದೆ.

❖ *ಶಾಂತರಸ ಹೆಂಬೇರಾಳು*



87ನೇ ಅಖಿಲ ಭಾರತ
ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ
ಹಾರ್ದಿಕ ಸುಸ್ವಾಗತ....
ಸಕ್ಕರ ನಾಡು ಮಂಡ್ಯದಲ್ಲಿ ನಡೆಯುವ
87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ
ಆಗಮಿಸುವ ಕನ್ನಡ ಪ್ರೇಮಿಗಳಿಗೆ, ಎಲ್ಲಾ ರೈತರ
ಬಾಂಧವರಿಗೆ ತುಂಬು ಹೃದಯದ ಸುಸ್ವಾಗತ.....
ಶುಭ ಕೋರುವ
ಡಾ. ಸಿ.ಎ. ಅರವಿಂದ್
ಮುಖ್ಯ ವೈದ್ಯಾಧಿಕಾರಿ
ಸಾರ್ವಜನಿಕ ಉಪ ವಿಭಾಗೀಯ ಆಸ್ಪತ್ರೆ
ಪಾಂಡವಪುರ



87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಶುಭಾಶಯಗಳು
ಕುವೆಂಪು
ದಿ. ಹಲಗೇಗೌಡ
ಮಾಜಿ ಶಾಸಕರು, ಪಾಂಡವಪುರ
ಪು.ತಿ. ನರಸಿಂಹಚಾರ್ಯ
GAS
CONVENTION HALL
LODGE
Hotel Annapoorna
ಹೆಚ್ ತ್ಯಾಗರಾಜ್
ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ
ಮಾಜಿ ಜಿಲ್ಲಾ ಪಂಚಾಯತಿ ಸದಸ್ಯರು
ಹಾಗೂ ಮಾಲೀಕರು ಪ್ರಕಾಶ ಗ್ಯಾಸ್ ಏಜನ್ಸಿ
ಪಾಂಡವಪುರ
-: ಶುಭ ಕೋರುವವರು :-
ಸಿಬ್ಬಂದ ವರ್ಗ, ಪಾಂಡವಪುರ



ನುಡಿ ಜಾತ್ರೆಗೆ ಹಾರ್ದಿಕ ಸ್ವಾಗತ....
ಮಂಡ್ಯದಲ್ಲಿ ನಡೆಯುವ 87ನೇ ಅಖಿಲ ಭಾರತ ಕನ್ನಡ
ಸಾಹಿತ್ಯ ಸಮ್ಮೇಳನಕ್ಕೆ ಸಮಸ್ತ ಕನ್ನಡಿಗರಿಗೆ ಹೃದಯ
ಪೂರ್ವಕ ಸ್ವಾಗತ.
ಶುಭ ಕೋರುವವರು
ಹೆಚ್.ಟಿ. ಮಂಜು
ಶಾಸಕರು
ಕೆ.ಆರ್. ಪೇಟೆ ವಿಧಾನಸಭಾ ಕ್ಷೇತ್ರ

❖ ಅಣ್ಣೂರು ಸತೀಶ್,
ಭಾರತೀಪುರ

ಮೊದಲ ಬಾರಿಗೆ ಹೋರಾಟದಲ್ಲಿ ಪರಾಕ್ರಮ ಮೆರೆದ ಮಹಿಳೆಯರು

1938ರ ಏ.10ರಂದು ಮೈಸೂರು ಯೂತ್‌ಲೀಗ್ ಸಮಾವೇಶ



ಇತಿಹಾಸ ಪುಟಗಳಲ್ಲಿ ಶಿವಪುರ ಧ್ವಜ ಸತ್ಯಾಗ್ರಹ ನೆನಪು

ಶಿವಪುರ ಧ್ವಜ ಸತ್ಯಾಗ್ರಹ ಎಂದೆಂದಿಗೂ ಮರೆಯಲಾಗದ ಕ್ಷಣಗಳಲ್ಲೊಂದು. ಅದರಲ್ಲೂ ವಿಶೇಷವಾಗಿ ಮಹಿಳೆಯರು ಸ್ವಾತಂತ್ರ್ಯ ಹೋರಾಟದಲ್ಲಿ ತಮ್ಮ ಸಾಮರ್ಥ್ಯವನ್ನು ನಾಡಿಗೆ ತಿಳಿಸಿದ ಅದ್ಭುತ ಗಳಿಗೆ. ಸುಬ್ಬಮ್ಮ ಜೋಯಿಸ್, ಕಮಲಾಬಾಯಿ ಚಟ್ಟೋಪಾಧ್ಯಾಯ, ಉಮಾಬಾಯಿ ಕುಂದಾಪುರ್, ಯಶೋದಮ್ಮ ದಾಸಪ್ಪ, ಬಳ್ಳಾರಿ ಸಿದ್ದಮ್ಮ, ವೆಂಕಮ್ಮ, ಕಮಲಮ್ಮ, ಸಾವಿತ್ರಮ್ಮ ಸೇರಿ ಹಲವಾರು ಮಹಿಳೆಯರು ಸ್ವಾತಂತ್ರ್ಯ ಹೋರಾಟದಲ್ಲಿ ಪಾಲ್ಗೊಂಡು ತೋರಿದ ದಿಟ್ಟತನ ಇಂದು ಇತಿಹಾಸದ ಪುಟಗಳಲ್ಲಿ ದಾಖಲಾಗಿದೆ.

ಭಾರತ ದೇಶದ ಸ್ವಾತಂತ್ರ್ಯ ಪೂರ್ವದ ಘಟನೆಗಳು ಎಂದೆಂದಿಗೂ ಮರೆಯಲಾಗದ ಕ್ಷಣ. ಅದರಲ್ಲೂ ಮೈಸೂರು ಪ್ರಾಂತ್ಯ ತನ್ನದೇ ಆದ ಹಿರಿಮೆ ಹುಟ್ಟುಹಾಕುವ ಮೂಲಕ ಇತಿಹಾಸದ ಪುಟಗಳಲ್ಲಿ ದಾಖಲಾಗಿದೆ.

ಮದ್ದೂರು ತಾಲೂಕಿನ ಶಿವಪುರ ಧ್ವಜ ಸತ್ಯಾಗ್ರಹ ಹೋರಾಟ ಅಂದು ಸ್ವಾತಂತ್ರ್ಯಕ್ಕಾಗಿ ಹೋರಾಟ ನಡೆಯುತ್ತಿದ್ದ ದಿನಗಳಲ್ಲಿ ಮೈಸೂರಿನ ಮಹಿಳೆಯರು 1938 ಏಪ್ರಿಲ್‌ನಲ್ಲಿ ಶಿವಪುರ ಧ್ವಜ ಸತ್ಯಾಗ್ರಹದಲ್ಲಿ ಮೊದಲಬಾರಿಗೆ ತಮ್ಮ ಧೈರ್ಯ ಮೆರೆದರು.

ಸಿದ್ದಲಿಂಗಯ್ಯ ಅವರ ಅಧ್ಯಕ್ಷತೆಯಲ್ಲಿ ಜರುಗಿದ ಕಾಂಗ್ರೆಸ್ ಸಭೆಯಲ್ಲಿ ಮದ್ದೂರಿನ ಶಿವಪುರದಲ್ಲಿ ಶಿಂಷಾ ನದಿ ದಂಡೆ ಮೇಲೆ ಮೈಸೂರು ಕಾಂಗ್ರೆಸ್ ಮೊದಲನೇ ಸಮಾವೇಶ ನಡೆಸಬೇಕೆಂದು ತೀರ್ಮಾನಿಸಲಾಯಿತು.

> **ವಿದ್ವತ್ತಿನ ಕೆಲಸಕ್ಕೆ ಹೊಂದಾಣಿಕೆ ಅಭಾವವಿದೆ. ಕನ್ನಡ ನಾಡಿನಲ್ಲಿ ವಿದ್ವತ್ತಿನ ಅನ್ವೇಷಣೆಗೆ ಪೋಷಕವಾದ ವಾತಾವರಣವನ್ನು ಸೃಷ್ಟಿಸಬೇಕೆಂದು ಸರ್ಕಾರ, ಕಸಾಪ, ವಿಶ್ವವಿದ್ಯಾಲಯಗಳಲ್ಲಿ ನನ್ನ ಮನವಿ.**
>
> ❖ *ಎಲ್. ಎಸ್. ಶೇಷಗಿರಿ ರಾವ್*





ಧ್ವಜಾ ಸತ್ಯಾಗ್ರಹ ಸೌಧ ನಿರ್ಮಾಣ

ಧ್ವಜಾಸತ್ಯಾಗ್ರಹ ನಡೆದು 45 ವರ್ಷ ಕಳೆದಿದ್ದವು. ಅಂದಿನ ಮುಖ್ಯಮಂತ್ರಿ ಕೆಂಗಲ್ ಹನುಮಂತಯ್ಯ 1974ರ ಫೆ.14 ರಂದು ಕಾರ್ಯಾರ್ಥವಾಗಿ ಮೈಸೂರಿಗೆ ಹೋಗುವಾಗ ಸತ್ಯಾಗ್ರಹ ನಡೆದ ಜಾಗವನ್ನು ನೋಡುತ್ತಾರೆ. ಆ ಧ್ವಜ ಸತ್ಯಾಗ್ರಹ ಕಾರ್ಯಕ್ರಮದ ಶಾಶ್ವತ ನೆನಪಿಗಾಗಿ ಇಲ್ಲೊಂದು ಸ್ಮಾರಕ ಭವನ ನಿರ್ಮಿಸಬೇಕು ಎಂದು ನಿರ್ಧರಿಸಿ ಹಲವರ ಸಹಾಯ ಪಡೆದು ಈ ಸೌಧ ನಿರ್ಮಾಣಮಾಡಲಾ ಗುತ್ತದೆ. ಅದರಂತೆ 1979 ರ ಸೆಪ್ಟೆಂಬರ್ 29 ರಂದು ಸತ್ಯಾಗ್ರಹ ಸೌಧದ ಉದ್ಘಾಟನೆ ನೆರವೇರುತ್ತದೆ. ಅದುವೇ ಇಂದಿನ ಶಿವಪುರ ಸತ್ಯಾಗ್ರಹ ಸೌಧ.

ನಾಯಕರು ಧ್ವಜಾರೋಹಣ ಹಾಗೂ ಧ್ವಜವಂದನ ಕಾರ್ಯಕ್ರಮ ರೂಪಿಸಿದ್ದರು. ಕಾಂಗ್ರೆಸ್ ಧ್ವಜ ಹಾರಿಸುವುದರಿಂದ ಮೈಸೂರು ಮಹಾರಾಜರ ಪ್ರಭುತ್ವಕ್ಕೆ ಕುಂದು ಬರುವುದೆಂದು ಭಾವಿಸಿ ಮೈಸೂರು ಜಿಲ್ಲಾ ಮ್ಯಾಜಿಸ್ಟ್ರೇಟ್ ಧ್ವಜಾರೋಹಣ ಕಾರ್ಯಕ್ರಮವನ್ನು ನಿಷೇಧಿಸಿದ್ದರು. ಇದಕ್ಕೆ ಸಂಬಂಧಿಸಿದ ಆದೇಶದ ಪ್ರತಿಯನ್ನು ಸುಮಾರು 25 ಮಂದಿ ಕಾಂಗ್ರೆಸ್ ನಾಯಕರಿಗೆ ತಲುಪಿಸಬೇಕೆಂದು ಆಜ್ಞೆಯಾಗಿತ್ತು. ಶಿವಪುರದಲ್ಲಿ ಅಸಂಖ್ಯಾತ ಜನರು ಸೇರಿದರು. ಸುಮಾರು 20–30 ಸಾವಿರ ಜನ ಸಮಾವೇಶದ ಸ್ಥಳದಲ್ಲಿ ಜಮಾಯಿಸಿದರು. 1938ರ ಏ.10ರಂದು ತಗಡೂರು ರಾಮಚಂದ್ರರಾವ್ ಅವರ ನೇತೃತ್ವದ ಮೈಸೂರು ಯೂತ್‌ಲೀಗ್ ಸಮಾವೇಶ ನಡೆಯಿತು. ಮರುದಿನ ಧ್ವಜಾರೋಹಣ ಕಾರ್ಯಕ್ರಮ ನಿಗದಿಯಾಗಿತ್ತು.


ಸಿದ್ದಲಿಂಗಯ್ಯ ಅವರ ದಸ್ತಗಿರಿ

ಸಿದ್ದಲಿಂಗಯ್ಯನವರು ಧ್ವಜಾರೋಹಣ ಮಾಡಿದಾಗ ತಕ್ಷಣವೇ ಅವರನ್ನು ದಸ್ತಗಿರಿ ಮಾಡಲಾಯಿತು. ಎಚ್.ಸಿ.ದಾಸಪ್ಪನವರು ಅಧ್ಯಕ್ಷತೆ ಸ್ವೀಕರಿಸಿದರು. ನಂತರ ಕಾಂಗ್ರೆಸ್ ನಾಯಕರು ಭಾಷಣ ಮಾಡಿದರು. ಸುಬ್ಬಮ್ಮ ಜೋಯಿಸರೂ ಆ ಸಂದರ್ಭದಲ್ಲಿ ಮಾತನಾಡಿದರು. ರಾಷ್ಟ್ರನಾಯಕರ ಸಂದೇಶಗಳನ್ನು ವಾಚನ ಮಾಡಲಾಯಿತು. ಆ ಸಂದೇಶಗಳಲ್ಲಿ ಕಮಲಾದೇವಿ ಚಟ್ಟೋಪಾಧ್ಯಾಯ ಹಾಗೂ ಉಮಾಬಾಯಿ ಕುಂದಾಪುರ್ ಅವರ ಸಂದೇಶಗಳೂ ಸೇರಿದ್ದವು. ತಮ್ಮ ಸಂದೇಶದಲ್ಲಿ ಅಖಿಲ ಭಾರತ ರಾಷ್ಟ್ರೀಯ ಹೋರಾಟದ ಒಂದು ಅವಿಭಾಜ್ಯ ಅಂಗವಾಗಿ ನೀವೂ ಇದ್ದೀರಿ... ಎಂಬುದನ್ನು ಮರೆಯಬಾರದೆಂದು ನಿಮ್ಮನ್ನು ವಿಶೇಷವಾಗಿ ಕೇಳಿಕೊಳ್ಳುತ್ತೇನೆಂದರು.

ಆಜ್ಞೆ ಉಲ್ಲಂಘಿಸಿದ ಕಾರಣಕ್ಕೆ ಪುರುಷರನ್ನು ಒಬ್ಬೊಬ್ಬರನ್ನಾಗಿ ದಸ್ತಗಿರಿ ಮಾಡಿದ ಸಂದರ್ಭದಲ್ಲಿ, ಮಹಿಳೆಯರು ಮುಂದೆ ಬಂದು ಅಭೂತ ಪೂರ್ವವಾದ ಧೈರ್ಯ ಮೆರೆದರು. ಯಶೋದಮ್ಮ ದಾಸಪ್ಪ, ಸುಬ್ಬಮ್ಮ ಜೋಯಿಸ್, ಬಳ್ಳಾರಿ ಸಿದ್ದಮ್ಮ, ವೆಂಕಮ್ಮ, ಕಮಲಮ್ಮ, ಸಾವಿತ್ರಮ್ಮ ಮುಂತಾದ ಮಹಿಳಾ ನಾಯಕಿಯರ ಧೈರ್ಯ ಮತ್ತು ದೃಢತೆ ಮೆಚ್ಚುವಂಥದ್ದು. ರಾಷ್ಟ್ರಧ್ವಜ ರಕ್ಷಿಸುವಲ್ಲಿ ವೀರಸ್ವರ್ಗ ಸೇರಿ ಎಂದು ದಸ್ತಗಿರಿ ಹಿಂದಿನ ದಿನ ಬಳ್ಳಾರಿ ಸಿದ್ದಮ್ಮ ಯುವಕರಿಗೆ ಕರೆ ನೀಡಿದ್ದರು. ಧ್ವಜ ರಕ್ಷಣೆಗೆ ಬಂದಿದ್ದ ಒಂದು ಸ್ವಯಂ ಸೇವಕ ತಂಡದ ನಾಯಕಿಯಾಗಿ ಟಿ.ಸುನಂದಮ್ಮನವರಿದ್ದರು. ಸ್ವಾತಂತ್ರ್ಯ ಹೋರಾಟಗಾರರ ಬಂಧನ ವಿರೋಧಿಸಿದ ಕಾಂಗ್ರೆಸ್ ನಾಯಕರು ನಿಷೇಧಾಜ್ಞೆ ನಡುವೆಯೂ ಒಂದು ತಿಂಗಳವರೆಗೆ ಧ್ವಜಾರೋಹಣ ನೆರವೇರಿಸಿ ದೇಶದ ಸ್ವಾತಂತ್ರ್ಯಕ್ಕಾಗಿ ಒತ್ತಾಯಿಸಿದ್ದು ಈಗಲೂ ಐತಿಹಾಸಿಕ ಘಟನೆಗಳಲ್ಲೊಂದು.

ವೀರಣ್ಣಗೌಡರ ಪಾತ್ರ ಮಹತ್ವದ್ದು

ಈ ಹೋರಾಟದಲ್ಲಿ ದಿ.ಎಚ್.ಕೆ.ವೀರಣ್ಣಗೌಡರನ್ನು ಮರೆಯಲು ಸಾಧ್ಯವೇ ಇಲ್ಲ. ಏಕೆಂದರೆ ಅಂತಹ ಮಹತ್ವವಾದ ಪಾತ್ರ ಅವರದ್ದು. ತಿರುಮಲೇ ಗೌಡರು ತಮ್ಮ 7 ಎಕರೆ ಜಾಗವನ್ನು ಅಧಿವೇಶನ ನಡೆಸಲು ಬಿಟ್ಟುಕೊಟ್ಟರು. ಸಾಹುಕಾರ್ ಚೆನ್ನಯ್ಯ ಮಂಡ್ಯದ ಗೋಪಾಲಶೆಟ್ಟ್ರು, ಎಂ.ಜಿ.ಬಂಡಿಗೌಡರು, ದಾಸಪ್ಪ ಎಸ್.ರಂಗಯ್ಯ, ಕೊಪ್ಪದ ಜೋಗಿ ಗೌಡ ಇತರೆ ಮುಖಂಡರು ಪಾಲ್ಗೊಂಡಿದ್ದರು. ◆



ಶಿವಪುರ ಸತ್ಯಗ್ರಹಸೌಧಕ್ಕೆ ತನ್ನದೆಯಾದ ಇತಿಹಾಸವಿದೆ. ಇದನ್ನು ಪ್ರತಿಯೊಬ್ಬರು ತಿಳಿಯಬೇಕಿದೆ. ಬ್ರಿಟೀಷರ ಆಳ್ವಿಕೆ ಯನ್ನು ಒಡೆದೋಡಿಸಿದಂತಹ ಹೋರಾಟಗಾರರನ್ನು ನಾವು ಪ್ರತಿದಿನ ಸ್ಮರಣೇ ಯ ಮಾಡಬೇಕು. ಆಗ ಮಾತ್ರ ಸ್ವಾತಂತ್ರ್ಯ ತಂದುಕೊಟ್ಟ ಹೋರಾಟ ಗಾರರಿಗೆ ನಾವು ಕೊಡುವಂತಹ ಗೌರವ. ಜೊತೆಗೆ ಸರ್ಕಾರ ಸತ್ಯಗ್ರಹ ಸೌಧವನ್ನು ಮತ್ತಷ್ಟು ಅಭಿವೃದ್ಧಿ ಪಡಿಸಲು ಕ್ರಮಕೈಗೊಳ್ಳಬೇಕು.

■ **ಡಿ.ಸಿ.ತಮ್ಮಣ್ಣ** ಮಾಜಿ ಸಚಿವ

ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಮತ್ತು ಸಮ್ಮೇಳನದ ಅಧ್ಯಕ್ಷರು

1. 1915: ಬೆಂಗಳೂರು: ಎಚ್.ವಿ.ನಂಜುಂಡಯ್ಯ
2. 1916: ಬೆಂಗಳೂರು: ಎಚ್.ವಿ.ನಂಜುಂಡಯ್ಯ
3. 1917: ಮೈಸೂರು: ಎಚ್.ವಿ.ನಂಜುಂಡಯ್ಯ
4. 1918: ಧಾರವಾಡ: ಆರ್.ನರಸಿಂಹಾಚಾರ್
5. 1919: ಹಾಸನ: ಕರ್ಪೂರ ಶ್ರೀನಿವಾಸರಾವ್
6. 1920: ಹೊಸಪೇಟೆ: ರೊದ್ದ ಶ್ರೀನಿವಾಸರಾಯ
7. 1921: ಚಿಕ್ಕಮಗಳೂರು: ಕೆ.ಪಿ.ಪುಟ್ಟಣ್ಣಶೆಟ್ಟಿ
8. 1922: ದಾವಣಗೆರೆ: ಎಂ.ವೆಂಕಟಕೃಷ್ಣಯ್ಯ
9. 1923: ಬಿಜಾಪುರ: ಸಿದ್ಧಾಂತಿ ಶಿವಶಂಕರ ಶಾಸ್ತ್ರಿ
10. 1924: ಕೋಲಾರ: ಹೊಸಕೋಟೆ ಕೃಷ್ಣಶಾಸ್ತ್ರಿ
11. 1925: ಬೆಳಗಾವಿ: ಬೆನಗಲ್ ರಾಮರಾವ್
12. 1926: ಬಳ್ಳಾರಿ: ಫ.ಗು.ಹಳಕಟ್ಟಿ
13. 1927: ಮಂಗಳೂರು: ಆರ್.ತಾತಾಚಾರ್ಯ
14. 1928: ಕಲಬುರ್ಗಿ: ಬಿ.ಎಂ.ಶ್ರೀಕಂಠಯ್ಯ
15. 1929: ಬೆಳಗಾವಿ: ಮಾಸ್ತಿ ವೆಂಕಟೇಶ ಅಯ್ಯಂಗಾರ್
16. 1930: ಮೈಸೂರು: ಆಲೂರು ವೆಂಕಟರಾಯರು
17. 1931: ಕಾರವಾರ: ಮುಳಿಯ ತಿಮ್ಮಪ್ಪಯ್ಯ
18. 1932: ಮಡಿಕೇರಿ: ಡಿ.ವಿ.ಗುಂಡಪ್ಪ
19. 1933: ಹುಬ್ಬಳ್ಳಿ: ವೈ.ನಾಗೇಶ ಶಾಸ್ತ್ರಿ
20. 1934: ರಾಯಚೂರು: ಪಂಜೆ ಮಂಗೇಶರಾಯರು
21. 1935: ಮುಂಬಯಿ: ಎನ್.ಎಸ್.ಸುಬ್ಬರಾವ್
22. 1937: ಜಮಖಂಡಿ: ಬೆಳ್ಳಾವೆ ವೆಂಕಟನಾರಾಣಪ್ಪ
23. 1938: ಬಳ್ಳಾರಿ: ರಂ.ರಾ.ದಿವಾಕರ
24. 1939: ಬೆಳಗಾವಿ: ಮುದವೀಡು ಕೃಷ್ಣರಾಯರು
25. 1940: ಧಾರವಾಡ: ವೈ.ಚಂದ್ರಶೇಖರ ಶಾಸ್ತ್ರಿ
26. 1941: ಹೈದರಾಬಾದ್: ಎ.ಆರ್.ಕೃಷ್ಣಶಾಸ್ತ್ರಿ
27. 1943: ಶಿವಮೊಗ್ಗ: ದ.ರಾ.ಬೇಂದ್ರೆ
28. 1944: ರಬಕವಿ: ಎಸ್.ಎಸ್.ಬಸವನಾಳ
29. 1945: ಮದರಾಸು: ಟಿ.ಪಿ.ಕೈಲಾಸಂ
30. 1947: ಹರಪನಹಳ್ಳಿ: ಸಿ.ಕೆ.ವೆಂಕಟರಾಮಯ್ಯ
31. 1948: ಕಾರಸಗೋಡು: ತಿ.ತಾ.ಶರ್ಮ
32. 1949: ಕಲಬುರ್ಗಿ: ಉತ್ತಂಗಿ ಚನ್ನಪ್ಪ
33. 1950: ಸೊಲ್ಲಾಪುರ: ಎಂ.ಆರ್.ಶ್ರೀನಿವಾಸಮೂರ್ತಿ
34. 1951: ಮುಂಬಯಿ: ಗೋವಿಂದ ಪೈ
35. 1952: ಬೇಲೂರು: ಎಸ್.ಸಿ.ನಂದೀಮಠ
36. 1954: ಕುಮಟಾ: ವಿ.ಸೀತಾರಾಮಯ್ಯ
37. 1955: ಮೈಸೂರು: ಶಿವರಾಮ ಕಾರಂತ
38. 1956: ರಾಯಚೂರು: ಆದ್ಯ ರಂಗಾಚಾರ್ಯ
39. 1957: ಧಾರವಾಡ: ಕುವೆಂಪು
40. 1958: ಬಳ್ಳಾರಿ: ವಿ.ಕೃ.ಗೋಕಾಕ
41. 1959: ಬೀದರ್: ಡಿ.ಎಲ್.ನರಸಿಂಹಾಚಾರ್
42. 1960: ಮಣಿಪಾಲ: ಅ.ನ.ಕೃಷ್ಣರಾಯ
43. 1961: ಗದಗ: ಕೆ.ಜಿ.ಕುಂದಣಗಾರ
44. 1963: ಸಿದ್ಧಗಂಗಾ: ರಂ.ಶ್ರೀ.ಮುಗಳಿ
45. 1965: ಕಾರವಾರ: ಕಡೆಂಗೋಡ್ಲು ಶಂಕರಭಟ್ಟ
46. 1967: ಶ್ರವಣಬೆಳಗೊಳ: ಆ.ನೇ.ಉಪಾಧ್ಯೆ
47. 1970: ಬೆಂಗಳೂರು: ದೇ.ಜವರೇಗೌಡ
48. 1974: ಮಂಡ್ಯ: ಜಯದೇವಿತಾಯಿ ಲಿಗಾಡೆ
49. 1976: ಶಿವಮೊಗ್ಗ: ಎಸ್.ವಿ.ರಂಗಣ್ಣ
50. 1978: ದೆಹಲಿ: ಜಿ.ಪಿ.ರಾಜರತ್ನಂ
51. 1979: ಧರ್ಮಸ್ಥಳ: ಗೋಪಾಲಕೃಷ್ಣ ಅಡಿಗ
52. 1980: ಬೆಳಗಾವಿ: ಬಸವರಾಜ ಕಟ್ಟೀಮನಿ
53. 1981: ಚಿಕ್ಕಮಗಳೂರು: ಪು.ತಿ.ನರಸಿಂಹಾಚಾರ್
54. 1981: ಮಡಿಕೇರಿ: ಶಂ.ಬಾ.ಜೋಶಿ
55. 1982: ಶಿರಸಿ: ಗೊರೂರು ರಾಮಸ್ವಾಮಿ ಐಯ್ಯಂಗಾರ್
56. 1984: ಕೈವಾರ: ಎ.ಎನ್.ಮೂರ್ತಿರಾವ್
57. 1985: ಬೀದರ್: ಹಾ.ಮಾ.ನಾಯಕ
58. 1987: ಕಲಬುರ್ಗಿ: ಸಿದ್ದಯ್ಯ ಪುರಾಣಿಕ
59. 1990: ಹುಬ್ಬಳ್ಳಿ: ಆರ್.ಸಿ.ಹಿರೇಮಠ
60. 1990: ಮೈಸೂರು: ಕೆ.ಎಸ್.ನರಸಿಂಹಸ್ವಾಮಿ
61. 1992: ದಾವಣಗೆರೆ: ಜಿ.ಎಸ್.ಶಿವರುದ್ರಪ್ಪ
62. 1993: ಕೊಪ್ಪಳ: ಸಿಂಪಿ ಲಿಂಗಣ್ಣ
63. 1994: ಮಂಡ್ಯ: ಚದುರಂಗ
64. 1995: ಮುಧೋಳ: ಎಚ್.ಎಲ್.ನಾಗೇಗೌಡ
65. 1996: ಹಾಸನ: ಚನ್ನವೀರ ಕಣವಿ
66. 1997: ಮಂಗಳೂರು: ಕಯ್ಯಾರ ಕಿಞ್ಞಣ್ಣ ರೈ
67. 1999: ಕನಕಪುರ: ಎಸ್.ಎಲ್.ಭೈರಪ್ಪ
68. 2000: ಬಾಗಲಕೋಟೆ: ಶಾಂತಾದೇವಿ ಮಾಳವಾಡ
69. 2002: ತುಮಕೂರು: ಯು.ಆರ್.ಅನಂತಮೂರ್ತಿ
70. 2003: ಬೆಳಗಾವಿ: ಡಾ.ಪಾಟೀಲ ಪುಟ್ಟಪ್ಪ
71. 2004: ಮೂಡುಬಿದರೆ: ಕಮಲಾ ಹಂಪನಾ
72. 2006: ಬೀದರ್: ಶಾಂತರಸ ಹೆಂಬೆರಳು
73. 2007: ಶಿವಮೊಗ್ಗ: ನಿಸಾರ್ ಅಹಮ್ಮದ್
74. 2008: ಉಡುಪಿ: ಎಲ್.ಎಸ್.ಶೇಷಗಿರಿ ರಾವ್
75. 2009: ಚಿತ್ರದುರ್ಗ: ಎಲ್.ಬಸವರಾಜು
76. 2010: ಗದಗ: ಡಾ.ಗೀತಾನಾಗಭೂಷಣ
77. 2011: ಬೆಂಗಳೂರು: ಜಿ.ವೆಂಕಟಸುಬ್ಬಯ್ಯ
78. 2012: ಗಂಗಾವತಿ: ಸಿ.ಪಿ.ಕೃಷ್ಣಕುಮಾರ್
79. 2013: ವಿಜಯಪುರ: ಕೋ.ಚನ್ನಬಸಪ್ಪ
80. 2014: ಕೊಡಗು: ನಾ.ಡಿಸೋಜ
81. 2015: ಶ್ರವಣಬೆಳಗೊಳ: ಡಾ.ಸಿದ್ದಲಿಂಗಯ್ಯ
82. 2016: ರಾಯಚೂರು: ಬರಗೂರು ರಾಮಚಂದ್ರಪ್ಪ
83. 2017: ಮೈಸೂರು: ಚಂದ್ರಶೇಖರ ಪಾಟೀಲ
84. 2019: ಧಾರವಾಡ: ಚಂದ್ರಶೇಖರ ಕಂಬಾರ
85. 2020: ಕಲಬುರ್ಗಿ: ಎಚ್.ಎಸ್.ವೆಂಕಟೇಶಮೂರ್ತಿ
86. 2022: ಹಾವೇರಿ: ದೊಡ್ಡರಂಗೇಗೌಡ
87. 2024: ಗೊ.ರು.ಚನ್ನಬಸಪ್ಪ

ಮಂಡ್ಯ ಉದಯವಾಣಿ ಬಳಗ



ಕನ್ನಡ ಸಾಹಿತ್ಯ ಸಮ್ಮೇಳನ ಹಿನ್ನೆಲೆಯಲ್ಲಿ ಮಂಡ್ಯ ನಗರದಲ್ಲಿ ಉದಯವಾಣಿ ವಿಶೇಷಾಂಕ ಹೊರತರುವ ಬಗ್ಗೆ ಯು. ಸತೀಶ್ ಶೆಣೈ ಅವರ (ಉಪಾಧ್ಯಕ್ಷರು, ಪ್ರಸರಣ ಹಾಗೂ ಅಭಿವೃದ್ಧಿ) ಅಧ್ಯಕ್ಷತೆಯಲ್ಲಿ ಜಿಲ್ಲಾ, ತಾಲೂಕು ವರದಿಗಾರರ ಸಭೆ ನಡೆಯಿತು. ಗ್ರಾಮೀಣ ಸುದ್ದಿ ವಿಭಾಗದ ಮುಖ್ಯಸ್ಥ ಅ.ಮ.ಸುರೇಶ್, ಪ್ರಸರಣ ವಿಭಾಗದ ಉಪ ವ್ಯವಸ್ಥಾಪಕ ರಾಜಣ್ಣ, ಸಹಾಯಕ ವ್ಯವಸ್ಥಾಪಕ ಚಿಕ್ಕಣ್ಣಗೌಡ್ರು, ಜಾಹಿರಾತು ವಿಭಾಗದ ಸಹಾಯಕ ವ್ಯವಸ್ಥಾಪಕ ಪ್ರವೀಣ್‌ಕುಮಾರ್ ಹಾಗೂ ವರದಿಗಾರರಾದ ಶಿವರಾಜು.ಎಚ್, ಗಂಜಾಂ ಮಂಜು, ಪಿ.ಜೆ.ಜಯರಾಮು, ಅರುಣ್‌ಕುಮಾರ್, ಎಸ್.ಪುಟ್ಟಸ್ವಾಮಿ, ಎ.ಎಸ್.ಪ್ರಭಾಕರ, ಕುಮಾರಸ್ವಾಮಿ, ಅಣ್ಣೂರು ಸತೀಶ್, ಅನುಪಮಾ ಸತೀಶ್ ಇದ್ದಾರೆ.

ಹೊತ್ತಿತೊ ಹೊತ್ತಿತು ಕನ್ನಡದ ದೀಪ, ಮುಗಿಯಿತೋ ಮುಗಿಯಿತು ಶತಮಾನಗಳ ತಾಪ ಕಣ್ಣು ಕುಕ್ಕಿಸುವಂತೆ ದೇದೀಪ್ಯಮಾನ,
ಹರ್ಷವುಕ್ಕಿಸುವಂತೆ ಶೋಭಾಯಮಾನ *ಕನ್ನಡದ ಮನೆಯಾಗೆ ಜ್ಯೋತಿರ್ನಿದಾನ, ಕನ್ನಡದ ಪ್ರಾಣ ಕನ್ನಡದ ಮಾನ*

❖ ಸಿದ್ದಯ್ಯ ಪುರಾಣಿಕ